# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ

**VIJAYANAGARA SRI KRISHNADEVARAYA UNIVERSITY, BALLARI**

# 2022ನೇ ವಾರ್ಷಿಕ ಸಾಲಿನ ಸಿಂಡಿಕೇಟ್ ಸಭೆಯ ನಡಾವಳಿ

# 2022 Annual Year Syndicate Meeting Proceedings


**ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ**
**ಜ್ಞಾನಸಾಗರ ಆವರಣ, ವಿನಾಯಕನಗರ, ಕಂಟೋನ್ಮೆಂಟ್, ಬಳ್ಳಾರಿ. – 583105**

Vijayanagara Sri Krishnadevaraya University,
Jnana Sagara Campus, Vinayaka Nagar, Cantonment, Ballari - 583105

**ಕುಲಸಚಿವರ ಕಛೇರಿ–08392–242709; ಮೊ : 9449956781**
**Email:** registrarps@vskub.ac.in

Registrar's Office: 08392-242709: Mobile: 94499 56781
Email: registrarps@vskub.ac.in

# ಪರಿವಿಡಿ

## Table of Contents


| ಕ್ರ.ಸಂ | ಸಿಂಡಿಕೇಟ್ ಸಭೆಯ ದಿನಾಂಕ | ಪುಟ ಸಂಖ್ಯೆ |
| --- | --- | --- |
| 01.01 | 03.02.2022 | 01–16 |
| 01.02 | 26.03.2022 | 17–19 |
| 01.03 | 30.03.2022 | 20–36 |
| 01.04 | 11.04.2022 | 37–38 |
| 01.05 | 05.05.2022 | 39–47 |
| 01.06 | 21.06.2022 | 48–51 |
| 01.07 | 20.07.2022 | 52–67 |
| 01.08 | 05.08.2022 | 68–69 |
| 01.09 | 12.09.2022 | 70–83 |
| 01.10 | 22.09.2022 | 84–93 |
| 01.11 | 12.10.2022 | 94–96 |
| 01.12 | 25.11.2022 | 97–104 |
| 01.13 | 07.12.2022 | 105–107 |
| 01.14 | 09.12.2022 | 108–110 |
| 01.15 | 24.12.2022 | 111–117 |

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105


ಕುಲಸಚಿವರು

ಸಂಖ್ಯೆ: ವಿಶ್ರೀಕೃವಿಬ/ಆಡಳಿತ-ಸಾಮಾನ್ಯ/ಸಿಸ-ನಡಾವಳಿ/2021-22/3561 ದಿನಾಂಕ:18.02.2022

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ 03.02.2022 ರಂದು ಬೆಳಿಗ್ಗೆ 11:30 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 09.02.2022

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ 03.02.2022 ರಂದು ಬೆಳಿಗ್ಗೆ 11:30 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:
1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು-560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು-560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
"ಜ್ಞಾನ ಸಾಗರ" ಆವರಣ, ಬಳ್ಳಾರಿ – 583 105

ಕುಲಸಚಿವರು

## ದಿನಾಂಕ 03.02.2022 ರಂದು ಬೆಳಿಗ್ಗೆ 11:30 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ

**➲ ಐಟಂ ನಂ. 01:**

ದಿನಾಂಕ. 10.12.2021 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮದ ವರದಿಯನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

ತೀರ್ಮಾನ

ದಿನಾಂಕ. 10.12.2021 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮಗಳ ವರದಿಯನ್ನು ಸಭೆಯು ದೃಢೀಕರಿಸಿ ಅನುಮೋದಿಸಿತು.

**ಐಟಂ ಸಂಖ್ಯೆ 02**

ವಿಷಯ: ಬೋಧಕ ಸಿಬ್ಬಂದಿಗಳಿಗೆ ವಿವಿಧ ಕಾರ್ಯಗಳಿಗೆ ನೀಡಿದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

*****

ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಿಗೆ ವಿವಿಧ ಕಾರ್ಯಗಳಿಗಾಗಿ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ವಿಶ್ವವಿದ್ಯಾಲಯದಿಂದ ನೀಡಲಾಗಿದ್ದು, ಈ ಕೆಳಕಂಡ ಅಧ್ಯಾಪಕರಿಗೆ ನೀಡಿದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

| ಕ್ರಸಂ | ನಿರಾಕ್ಷೇಪಣಾ ಪ್ರಮಾಣ ಪತ್ರ ಪಡೆದ ಬೋಧಕ ಸಿಬ್ಬಂದಿಗಳ ವಿವರ | ನಿರಾಕ್ಷೇಪಣಾ ಪ್ರಮಾಣ ಪತ್ರ ಪಡೆದ ಉದ್ದೇಶ | ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿದ ದಿನಾಂಕ |
|---|---|---|---|
| 1 | 2 | 3 | 4 |
| 01 | ಡಾ. ಮೋಹನದಾಸ್ ಕೆ., ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. | Central University, Keralaದಲ್ಲಿ ಸಹ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು. | 21.12.2021 |
| 02 | ಡಾ. ನಿರಂಜನ್ ಆರ್., ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. | Hyderabad Central University, Hyderabadನಲ್ಲಿ ಸಹ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು. | 31.12.2021 |
| 03 | ಡಾ. ಸಂತೋಷ ಜಿ.ಕೆ., ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ್ ಅಧ್ಯಯನ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. | Hyderabad Central University, Hyderabadನಲ್ಲಿ ಸಹ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿಯನ್ನು ಸಲ್ಲಿಸಲು. | 20.01.2022 |

ತೀರ್ಮಾನ

ಮೇಲ್ಕಂಡ ಕಾರ್ಯಸೂಚಿ ಕೋಷ್ಟಕದಲ್ಲಿನ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗಳಿಗೆ ವಿವಿಧ ಉದ್ದೇಶಗಳಿಗಾಗಿ ನಿರಾಕ್ಷೇಪಣಾ ಪ್ರಮಾಣ ಪತ್ರಗಳನ್ನು ನೀಡಿರುವ ಕಾರ್ಯವನ್ನು ಸಭೆಯು ಅನುಸಮರ್ಥಿಸಿದೆ.

ಐಟಂ ಸಂಖ್ಯೆ 03

ವಿಷಯ: ವಿಶ್ವವಿದ್ಯಾಲಯದ ವಿಭಾಗಗಳ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯ ಅಧ್ಯಯನ ಮಂಡಳಿ ರಚಿಸಿರುವ ಕುರಿತು.

***

ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗ ಮತ್ತು ಶಿಕ್ಷಣ ಅಧ್ಯಯನ ವಿಭಾಗ ಅಧ್ಯಯನ ವಿಭಾಗಗಳ ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಯನ ಮಂಡಳಿಯನ್ನು ಪುನಃ ರಚಿಸಿ ಅಧಿಸೂಚನೆಯನ್ನು ಹೊರಡಿಸಿದ್ದು, ಸದರಿ ಅಧಿಸೂಚನೆಗಳನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

ತೀರ್ಮಾನ

ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗ ಮತ್ತು ಶಿಕ್ಷಣ ಅಧ್ಯಯನ ವಿಭಾಗ ಅಧ್ಯಯನ ವಿಭಾಗಗಳ ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಯನ ಮಂಡಳಿಯನ್ನು ಪುನಃ ರಚಿಸಿ ಹೊರಡಿಸಿದ ಅಧಿಸೂಚನೆಯನ್ನು ಸಭೆಯು ಅನುಸಮರ್ಥಿಸಿದೆ.

➲ ಐಟಂ ನಂ. 04

ವಿಷಯ: ಖರೀದಿ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

ಉಲ್ಲೇಖ: ದಿನಾಂಕ 22.12.2021 ರಂದು ಜರುಗಿದ ಖರೀದಿ ಸಲಹಾ ಸಮಿತಿ ಸಭೆ

*****

ವಿಶ್ವವಿದ್ಯಾಲಯದಲ್ಲಿ ದಿನಾಂಕ 22.12.2021 ರಂದು ಜರುಗಿದ ಖರೀದಿ ಸಲಹಾ ಸಮಿತಿ ಸಭೆಯು ಎಲ್ಲಾ ಕಾರ್ಯಸೂಚಿಗಳನ್ನು ಪರಿಶೀಲಿಸಿ ತೀರ್ಮಾನಿಸಿದ ನಡಾವಳಿಯನ್ನು ಸಲ್ಲಿಸಲಾಗಿದ್ದು, ಈ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

ತೀರ್ಮಾನ

ದಿನಾಂಕ 22.12.2021ರ ಖರೀದಿ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಈ ಕೆಳಕಂಡಂತೆ ವಿಷಯವಾರು ದೃಢೀಕರಿಸಿ ಅನುಮೋದಿಸಿತು.

ಐಟಂ ಸಂಖ್ಯೆ 01.

ವಿಷಯ: ಕುಲಸಚಿವರು (ಮೌಲ್ಯಮಾಪನ) ವಿಭಾಗಕ್ಕೆ ಅಂಕಪಟ್ಟಿ ಮುದ್ರಣ ಯಂತ್ರ (Laser Multifunctional Machine) ಖರೀದಿ ಕುರಿತು.

ಖರೀದಿ ಸಲಹಾ ಸಮಿತಿ ಸಭೆ ತೀರ್ಮಾನ

ಪರೀಕ್ಷಾ ವಿಭಾಗಕ್ಕೆ ಅತ್ಯಗತ್ಯವಿರುವ ಅಂಕಪಟ್ಟಿ ಮುದ್ರಣ ಯಂತ್ರವನ್ನು ಜೆಮ್ ಮೂಲಕ ಖರೀದಿಗೆ ಪ್ರಕ್ರಿಯೆ ಶುರುಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಸಭೆಯು ಪ್ರಕ್ರಿಯೆಯನ್ನು ಪರಿಶೀಲಿಸಿ ಚಾಲನೆ ಕಾರ್ಯವನ್ನು ಅನುಸಮರ್ಥಿಸಿದೆ.

ಸಿಂಡಿಕೇಟ್ ಸಭೆಯ ತೀರ್ಮಾನ

ಪರೀಕ್ಷಾ ವಿಭಾಗಕ್ಕೆ ಅಗತ್ಯವಿರುವ ಅಂಕಪಟ್ಟಿ ಮುದ್ರಣ ಯಂತ್ರವನ್ನು ಜೆಮ್ ಮೂಲಕ ಖರೀದಿಸಿದ ಪ್ರಕ್ರಿಯೆಯನ್ನು ಪರಿಶೀಲಿಸಿ ಚಾಲನೆ ಕಾರ್ಯವನ್ನು ಅನುಸಮರ್ಥಿಸಿದ ಖರೀದಿ ಸಲಹಾ ಸಮಿತಿಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿದೆ.

**ಐಟಂ ಸಂಖ್ಯೆ 02.**

ವಿಷಯ: ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅವಶ್ಯವಿರುವ Zoom Online Platformಅನ್ನು Subscribe ಮಾಡುವ ಕುರಿತು.

<u>ಖರೀದಿ ಸಲಹಾ ಸಮಿತಿ ಸಭೆ ತೀರ್ಮಾನ</u>

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ/ಪ್ರಾಧ್ಯಾಪಕರುಗಳ/ವಿದ್ಯಾರ್ಥಿಗಳ ಕಲಿಕಾ ಹಿತದೃಷ್ಟಿಯಿಂದ Zoom Online Platformನಲ್ಲಿ 30 ಪರವಾನಗಿಗಳ ವಾರ್ಷಿಕ ಚಂದಾದಾರಿಕೆ ಪಡೆದಲ್ಲಿ, ಒಂದು ಪರವಾನಗಿಯಲ್ಲಿ 300 ಬಳಕೆದಾರರು ಉಪಯೋಗಿಸಬಹುದಾದರಿಂದ ಅವಶ್ಯವಿರುವ 30 ಪರವಾನಗಿಗಳ ವಾರ್ಷಿಕ ಚಂದಾದಾರಿಕೆಯನ್ನು ಪಡೆಯಲು ಸಭೆಯು ಅನುಮೋದಿಸಿದೆ.

<u>ಸಿಂಡಿಕೇಟ್ ಸಭೆಯ ತೀರ್ಮಾನ</u>

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ/ಪ್ರಾಧ್ಯಾಪಕರುಗಳ/ವಿದ್ಯಾರ್ಥಿಗಳ ಕಲಿಕಾ ಹಿತದೃಷ್ಟಿಯಿಂದ Zoom Online Platformನಲ್ಲಿ 30 ಪರವಾನಗಿಗಳ ವಾರ್ಷಿಕ ಚಂದಾದಾರಿಕೆ ಪಡೆಯಲು ಖರೀದಿ ಸಲಹಾ ಸಮಿತಿ ಸಭೆಯು ಅನುಮೋದಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

**ಐಟಂ ಸಂಖ್ಯೆ 03.**

ವಿಷಯ: ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿನ ವಸತಿನಿಲಯಗಳಿಗೆ ಅಗತ್ಯವಾದ ಎಸ್.ಎಸ್. ಡೈನಿಂಗ್ ಟೇಬಲ್ ಹಾಗೂ ಎಸ್.ಎಸ್. ಸ್ಟೂಲ್‌ಗಳನ್ನು ಪೂರೈಸುವ ಕುರಿತು.

<u>ಖರೀದಿ ಸಲಹಾ ಸಮಿತಿ ಸಭೆ ತೀರ್ಮಾನ</u>

KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ-ಪ್ರೋಕ್ಯೂರ್ಮೆಂಟ್ ಮೂಲಕ ಈ-ಟೆಂಡರ್‌ನಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

<u>ಸಿಂಡಿಕೇಟ್ ಸಭೆಯ ತೀರ್ಮಾನ</u>

KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ-ಪ್ರೋಕ್ಯೂರ್ಮೆಂಟ್ ಮೂಲಕ ಈ-ಟೆಂಡರ್‌ನಲ್ಲಿ ಖರೀದಿಸಲು ಖರೀದಿ ಸಲಹಾ ಸಮಿತಿ ಸಭೆಯು ನೀಡಿರುವ ಆಡಳಿತಾತ್ಮಕ ಅನುಮೋದನೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

**ಐಟಂ ಸಂಖ್ಯೆ 04.**

ವಿಷಯ: 2021-22ನೇ ಶೈಕ್ಷಣಿಕ ವರ್ಷಕ್ಕೆ ವಿಶ್ವವಿದ್ಯಾಲಯದಿಂದ ವಿವಿಧ ಕ್ರೀಡೆಗಳಲ್ಲಿ ಪ್ರತಿನಿಧಿಸುವ ಕ್ರೀಡಾಪಟುಗಳಿಗೆ, ವ್ಯವಸ್ಥಾಪಕರಿಗೆ ಹಾಗೂ ತರಬೇತುದಾರರಿಗೆ ಕ್ರೀಡಾ ಸಮವಸ್ತ್ರವನ್ನು ಖರೀದಿಸುವ ಕುರಿತು.

<u>ಖರೀದಿ ಸಲಹಾ ಸಮಿತಿ ಸಭೆ ತೀರ್ಮಾನ</u>

KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ-ಪ್ರೋಕ್ಯೂರ್ಮೆಂಟ್ ಮೂಲಕ ಈ-ಟೆಂಡರ್‌ನಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

<u>ಸಿಂಡಿಕೇಟ್ ಸಭೆಯ ತೀರ್ಮಾನ</u>

KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ-ಪ್ರೋಕ್ಯೂರ್ಮೆಂಟ್ ಮೂಲಕ ಈ-ಟೆಂಡರ್‌ನಲ್ಲಿ ಖರೀದಿಸಲು ಖರೀದಿ ಸಲಹಾ ಸಮಿತಿ ಸಭೆಯು ನೀಡಿರುವ ಆಡಳಿತಾತ್ಮಕ ಅನುಮೋದನೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

ಐಟಂ ಸಂಖ್ಯೆ 05

ವಿಷಯ: ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

***

ದಿನಾಂಕ 20.12.2021 ರಂದು ಕಟ್ಟಡ ಸಲಹಾ ಸಮಿತಿ ಸಭೆಯು ಜರುಗಿದ್ದು, ಈ ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ದಿನಾಂಕ 20.12.2021ರ ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಈ ಕೆಳಕಂಡಂತೆ ವಿಷಯವಾರು ದೃಢೀಕರಿಸಿ ಅನುಮೋದಿಸಿತು.

ಐಟಂ ಸಂಖ್ಯೆ 01.

ವಿಷಯ: ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿನ ಹಾಲಿಯಿರುವ ಆಡಳಿತ ಕಟ್ಟಡದ ನೆಲಮಹಡಿಯ ಮೇಲೆ ಮೊದಲ ಮಹಡಿಯನ್ನು ನಿರ್ಮಿಸುವ ಕಾಮಗಾರಿಯ ಟೆಂಡರನ್ನು ಅನುಮೋದಿಸುವ ಕುರಿತು. ಅಂದಾಜು ವೆಚ್ಚ: ರೂ. 495.00ಲಕ್ಷಗಳು (ಲೋಕೋಪಯೋಗಿ ಇಲಾಖೆ, ಬಳ್ಳಾರಿ ವಲಯದ 2018-19ನೇ ಸಾಲಿನ ಸಿವಿಲ್ ದರಪಟ್ಟಿ, 2019-20ನೇ ಸಾಲಿನ ವಿದ್ಯುತ್ ದರಪಟ್ಟಿ ಹಾಗೂ ಮಾರುಕಟ್ಟೆ ದರಗಳನ್ವಯ)

**ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನ**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿನ ಹಾಲಿಯಿರುವ ಆಡಳಿತ ಕಟ್ಟಡದ ನೆಲಮಹಡಿಯ ಮೇಲೆ ಮೊದಲ ಮಹಡಿಯನ್ನು ನಿರ್ಮಿಸುವ ಕಾಮಗಾರಿಯ ಟೆಂಡರನಲ್ಲಿ ಕಡಿಮೆ ದರ ರೂ. 4,16,63,079.32 (12% ಜಿಎಸ್ಟಿ ಹೊರತುಪಡಿಸಿ) ನಮೂದಿಸಿದ Sri. Earappa, Class 1 PWD Contractor, No:10/05/462, I.B. Road, Manvi (TQ) Raichur Dist. ಇವರ ಟೆಂಡರನ್ನು ಪರಿಗಣಿಸಿ ಒಪ್ಪಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಸಭೆಯು ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನ ಕುರಿತು ಸುದೀರ್ಘವಾಗಿ ಪರಿಶೀಲಿಸಿ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿನ ಹಾಲಿಯಿರುವ ಆಡಳಿತ ಕಟ್ಟಡದ ನೆಲಮಹಡಿಯ ಮೇಲೆ ಮೊದಲ ಮಹಡಿಯನ್ನು ನಿರ್ಮಿಸುವ ಕಾಮಗಾರಿಯ ಟೆಂಡರನಲ್ಲಿ ಕಡಿಮೆ ದರ ರೂ. 4,16,63,079.32 (12% ಜಿಎಸ್ಟಿ ಹೊರತುಪಡಿಸಿ) ನಮೂದಿಸಿದ Sri. Earappa, Class 1 PWD Contractor, No:10/05/462, I.B. Road, Manvi (TQ) Raichur Dist. ಇವರ ಟೆಂಡರನ್ನು ಕಟ್ಟಡ ಸಲಹಾ ಸಮಿತಿ ಸಭೆಯು ಪರಿಗಣಿಸಿ ಒಪ್ಪಿ ಅನುಮೋದಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

ಐಟಂ ಸಂಖ್ಯೆ 02.

**ವಿಷಯ:** ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿ 2016-17ನೇ ಸಾಲಿನ KKRDB ಯ ಮ್ಯಾಕ್ರೋ ಯೋಜನೆ ಅಡಿಯಲ್ಲಿ ಹೊಸದಾಗಿ ನಿರ್ಮಿಸಿರುವ ಓ.ಬಿ.ಸಿ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಅಗತ್ಯವಾದ ನೀರಿನ ಸಂಪ್ ಮತ್ತು ವಾರ್ಡರೋಬ್‌ಗಳನ್ನು ನಿರ್ಮಿಸುವ ಕಾಮಗಾರಿ ಕುರಿತು. ಅಂದಾಜು ವೆಚ್ಚ ರೂ. 18.22ಲಕ್ಷಗಳು (ಲೋಕೋಪಯೋಗಿ ಇಲಾಖೆ, ಬಳ್ಳಾರಿ ವಲಯದ 2018-19ನೇ ಸಾಲಿನ ಸಿವಿಲ್ ದರಪಟ್ಟಿಯ ದರಗಳನ್ವಯ)

**ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನ**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿ ಹೊಸದಾಗಿ ನಿರ್ಮಿಸಿರುವ ಓ.ಬಿ.ಸಿ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಅಗತ್ಯವಾದ ನೀರಿನ ಸಂಪ್‌ನ ಕಾಮಗಾರಿಗೆ ಅಂದಾಜು ಪಟ್ಟಿ ಮೊತ್ತ ರೂ. 5,06,987.39 ಮತ್ತು ವಾರ್ಡರೋಬ್‌ಗಳನ್ನು ನಿರ್ಮಿಸುವ ಕೆಲಸಕ್ಕೆ ಅಂದಾಜು ಪಟ್ಟಿ ಮೊತ್ತ ರೂ. 13,15,012.61 ಒಟ್ಟು ಅಂದಾಜು ಪಟ್ಟಿಯ ರೂ. 18,22,000.00 (ರೂಪಾಯಿ ಹದಿನೆಂಟು ಲಕ್ಷದ ಇಪ್ಪತ್ತೆರಡು ಸಾವಿರ ಮಾತ್ರ)ಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಹಾಗೂ ಲೋಕೋಪಯೋಗಿ ಇಲಾಖೆಯಿಂದ ತಾಂತ್ರಿಕ ಪರಿಶೀಲನೆ ಮಾಡಿಸಿದ ನಂತರ ಇ–ಪ್ರೋಕ್ಯೂರ್ಮೆಂಟ್ ಪ್ಲಾಟ್ ಫಾರಂ ಮೂಲಕ ಟೆಂಡರ್ ಕರೆಯಲು ಅನುಮತಿಸಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಸಭೆಯು ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನ ಕುರಿತು ಕೂಲಂಕುಷವಾಗಿ ಚರ್ಚಿಸಿ, ವಿಶ್ವವಿದ್ಯಾಲಯದ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿ ಹೊಸದಾಗಿ ನಿರ್ಮಿಸಿರುವ ಓ.ಬಿ.ಸಿ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಅಗತ್ಯವಾದ ನೀರಿನ ಸಂಪ್‌ನ ಕಾಮಗಾರಿಗೆ ಅಂದಾಜು ಪಟ್ಟಿ ಮೊತ್ತ ರೂ. 5,06,987.39 ಮತ್ತು ವಾರ್ಡರೋಬ್‌ಗಳನ್ನು ನಿರ್ಮಿಸುವ ಕೆಲಸಕ್ಕೆ ಅಂದಾಜು ಪಟ್ಟಿ ಮೊತ್ತ ರೂ. 13,15,012.61 ಒಟ್ಟು ಅಂದಾಜು ಪಟ್ಟಿಯ ರೂ. 18,22,000.00 (ರೂಪಾಯಿ ಹದಿನೆಂಟು ಲಕ್ಷದ ಇಪ್ಪತ್ತೆರಡು ಸಾವಿರ ಮಾತ್ರ)ಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಹಾಗೂ ಲೋಕೋಪಯೋಗಿ ಇಲಾಖೆಯಿಂದ ತಾಂತ್ರಿಕ ಪರಿಶೀಲನೆ ಮಾಡಿಸಿದ ನಂತರ ಇ–ಪ್ರೋಕ್ಯೂರ್ಮೆಂಟ್ ಪ್ಲಾಟ್ ಫಾರಂ ಮೂಲಕ ಟೆಂಡರ್ ಕರೆಯಲು ಕಟ್ಟಡ ಸಲಹಾ ಸಮಿತಿ ಸಭೆ ಅನುಮೋದಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

**ಐಟಂ ಸಂಖ್ಯೆ 06**

ವಿಷಯ: ಡಾ. ಜಿತೇಂದ್ರ ಕುಮಾರ್ ಸಿಂಗ್, ಸಹಾಯಕ ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ಇವರ ಬಿಡುಗಡೆ ಆದೇಶದ ಕುರಿತು.

ಉಲ್ಲೇಖ: VSKUB/DPAR-Teaching/Relieve/2021-22/1865 Date: 31.12.2021

****

ಡಾ. ಜಿತೇಂದ್ರ ಕುಮಾರ್ ಸಿಂಗ್, ಸಹಾಯಕ ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ಇವರನ್ನು ಉಲ್ಲೇಖಿತ ಕಛೇರಿ ಬಿಡುಗಡೆ ಆದೇಶದನ್ವಯ ಸದರಿಯವರನ್ನು ಷರತ್ತುಗಳೊಂದಿಗೆ ಬಿಡುಗಡೆಗೊಳಿಸಲಾಗಿದೆ. ಈ ಹಿನ್ನೆಲೆಯನ್ನು ಸದರಿಯವರ ಬಿಡುಗಡೆ ಸಂಬಂಧ ಈ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಡಾ. ಜಿತೇಂದ್ರ ಕುಮಾರ್ ಸಿಂಗ್, ಸಹಾಯಕ ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ಇವರನ್ನು ಷರತ್ತುಗಳೊಂದಿಗೆ ಬಿಡುಗಡೆಗೊಳಿಸಿ ಹೊರಡಿಸಿದ ಬಿಡುಗಡೆ ಆದೇಶವನ್ನು ಸಭೆಯು ಸರ್ವಾನುಮತದಿಂದ ಒಪ್ಪಿತು.

**ಐಟಂ ಸಂಖ್ಯೆ 07**

ವಿಷಯ: ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಆಂತರಿಕ ಅಂಕಗಳ ಪರಿಶೀಲನಾ ಸಮಿತಿ ವರದಿ ಕುರಿತು.

****

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ಅಧೀನಕೊಳಪಟ್ಟ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಆಂತರಿಕ ಅಂಕಗಳ ಸಲ್ಲಿಕೆಯ ಸಮಸ್ಯೆಯನ್ನು ಪರಿಶೀಲಿಸಲು ರಚಿಸಲಾಗಿದ್ದ ಸಮಿತಿಯು ದಿನಾಂಕ: 09.10.2021, 12.10.2021, 29.10.2021, 02.12.2021 ಮತ್ತು 21.12.2021 ರಂದು ಈ ಕುರಿತಾಗಿ ಸಭೆಗಳನ್ನು ನಡೆಸಿ ಕೂಲಂಕುಷವಾಗಿ ಪರಿಶೀಲಿಸಿ ಅಂತಿಮ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದು, ಸದರಿ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

## ತೀರ್ಮಾನ

ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಆಂತರಿಕ ಅಂಕಗಳ ಪರಿಶೀಲನಾ ಸಮಿತಿಯ ವರದಿಯನ್ನು ತತ್ವಶಃ ಒಪ್ಪಿಕೊಂಡು ಎಲ್ಲಾ ಶಿಫಾರಸ್ಸುಗಳನ್ನು ಅಳವಡಿಸಿಕೊಳ್ಳಲು ಸಭೆಯು ನಿರ್ಣಯ ಕೈಗೊಂಡಿರುತ್ತದೆ. ಆದಾಗ್ಯೂ ಸದರಿ ಸಮಿತಿಯ 2.00 ಲಕ್ಷಗಳ ದಂಡ ಪಾವತಿಯ ನಿರ್ಧಾರವನ್ನು ರೂ. 1.00 ಲಕ್ಷಗಳಿಗೆ ಪರಿವರ್ತಿಸಲು ಸಭೆಯು ನಿರ್ಧರಿಸಿ, ಈ ದಂಡದ ಮೊತ್ತವು ಸಂಬಂಧಪಟ್ಟ ಮಹಾವಿದ್ಯಾಲಯಗಳಿಂದ ಪಾವತಿಯಾಗುವವರೆಗೆ ವಿದ್ಯಾರ್ಥಿಗಳ ಫಲಿತಾಂಶ ಘೋಷಣೆ ಮಾಡದಿರಲು ಸಭೆಯು ತೀರ್ಮಾನಿಸಿದೆ. ಮುಂದುವರೆದು, ದಂಡ ಪಾವತಿ ಕುರಿತು ಯಾವುದೇ ಪತ್ರ ವ್ಯವಹಾರಕ್ಕೆ ಆಸ್ಪದ ನೀಡದಿರಲು ಹಾಗೂ ನಿಗದಿತ ಸಮಯದೊಳಗೆ ದಂಡ ಪಾವತಿ ಮಾಡಲು ಸಂಬಂಧಿತ ಮಹಾವಿದ್ಯಾಲಯವು ವಿಫಲವಾದಲ್ಲಿ ಮುಂದಿನ ಒಂದು ವರ್ಷ ಆ ಮಹಾವಿದ್ಯಾಲಯವನ್ನು ಪ್ರವೇಶಾತಿ ನಿರ್ಬಂಧಿತ ಪ್ರವರ್ಗದಲ್ಲಿ (No Admission Category) ಸೇರಿಸಲು ನಿರ್ಧರಿಸಲಾಗಿದೆ. ಮುಂದುವರೆದು, ಸದರಿ ಮಾಹಿತಿಯನ್ನು ಸಂಬಂಧಪಟ್ಟ ಮಹಾವಿದ್ಯಾಲಯಗಳಿಗೆ ತಿಳಿಸಲು ತೀರ್ಮಾನಿಸಲಾಯಿತು.

**ಐಟಂ ಸಂಖ್ಯೆ 08**

ವಿಷಯ: ಶ್ರೀಮತಿ. ಕಮಲಮ್ಮ ಇವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಕುರಿತು.

ಉಲ್ಲೇಖ: 1. ಕಛೇರಿ ಪತ್ರ ಸಂಖ್ಯೆ: ವಿಶ್ರೀಕೃವಿಬ/ಆಡಳಿತ/ಡಿಪಿಎಆರ್-ಬೋಧಕೇತರ/2021-22/1412 ದಿನಾಂಕ: 10.11.2021

2. ಸರ್ಕಾರದ ಪತ್ರ ಸಂಖ್ಯೆ: ಇಡಿ 37 ಯುಆರ್‌ಇ 2021 ದಿನಾಂಕ 07.01.2022.

3. ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 05 ಬಿಇಎಂ 2020 ದಿನಾಂಕ 12.01.2021.

****

ಶ್ರೀಮತಿ. ಕಮಲಮ್ಮ ಇವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಸಂಬಂಧ ಉಲ್ಲೇಖ-01ರ ಮೂಲಕ ಸರ್ಕಾರಕ್ಕೆ ನಿರ್ದೇಶನ ಕೋರಲಾಗಿತ್ತು. ಸರ್ಕಾರವು ಉಲ್ಲೇಖ-02ರ ಪತ್ರದ ಮೂಲಕ ಉಲ್ಲೇಖ-03ರ ಸರ್ಕಾರದ ಸುತ್ತೋಲೆಯಂತೆ ಅನುಕಂಪ ಆಧಾರದ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಷರತ್ತಿಗೆ ಒಳಪಟ್ಟು ನೇಮಕಾತಿ ಆದೇಶ ನೀಡುವ ವಿನಾಯಿತಿಯನ್ನು ನೀಡಿರುವುದು ಮತ್ತು ಸದರಿಯವರ ನೇಮಕಾತಿ ಪ್ರಾಧಿಕಾರ ವಿಶ್ವವಿದ್ಯಾಲಯವೇ ಆಗಿರುವುದರಿಂದ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶಿಸಿದೆ. ಈ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

## ತೀರ್ಮಾನ

ಸರ್ಕಾರದ ನಿರ್ದೇಶನದಂತೆ ಶ್ರೀಮತಿ. ಕಮಲಮ್ಮ ಇವರಿಗೆ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996ರ ಪ್ರಕಾರ ಅನುಕಂಪ ಆಧಾರಿತ ಉದ್ಯೋಗ ನೀಡಲು ಸಭೆಯು ಅನುಮೋದಿಸಿದೆ.

**ಐಟಂ ಸಂಖ್ಯೆ 09**

ವಿಷಯ: ವಿಶ್ವವಿದ್ಯಾಲಯದ 2018-19 ಮತ್ತು 2019-20ನೇ ಸಾಲಿನಲ್ಲಿ ತೆರೆದಿರುವ 05 ಉಳಿತಾಯ ಬ್ಯಾಂಕ್ ಖಾತೆಗಳಿಗೆ ಪೂರ್ವಾನುಮತಿ ಪಡೆಯುವ ಕುರಿತು.

ಉಲ್ಲೇಖ: ಲೆಕ್ಕಪರಿಶೋಧನಾಧಿಕಾರಿಗಳು 2018-19 ಮತ್ತು 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ವಿಚಾರಣೆ ಸಂಖ್ಯೆ: 11 ದಿನಾಂಕ 27.09.2021.

*****

ಉಲ್ಲೇಖಿತ ಲೆಕ್ಕಪರಿಶೋಧನಾಧಿಕಾರಿಗಳ ವಿಚಾರಣೆಯನ್ವಯ ವಿಶ್ವವಿದ್ಯಾಲಯದ 2018-19 ಮತ್ತು 2019-20ನೇ ಸಾಲಿನಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ 05 ಬ್ಯಾಂಕ್‌ನ ಉಳಿತಾಯ ಖಾತೆಗಳನ್ನು ತೆರೆದಿರುವುದಿಲ್ಲ ಎಂದು ಆಕ್ಷೇಪಿಸಿರುವ ಹಿನ್ನೆಲೆಯಲ್ಲಿ ಸದರಿ ಆಕ್ಷೇಪಣೆಯನ್ನು ಕೈಬಿಡುವ ಸಂಬಂಧ ಈ ಕೆಳಕಂಡ ಬ್ಯಾಂಕ್ ಉಳಿತಾಯ ಖಾತೆಗಳಿಗೆ ಪೂರ್ವಾನುಮತಿ ಪಡೆಯಲು ಈ ವಿಷಯವನ್ನು ಸಿಂಡಿಕೇಟ್ ಸಭೆಗೆ ಸಲ್ಲಿಸಿದೆ.

| 2018-19ನೇ ಸಾಲಿನಲ್ಲಿ ತೆರೆದ ಹೊಸ ಬ್ಯಾಂಕ್ ಖಾತೆಗಳ ವಿವರ | | | |
|---|---|---|---|
| **SL.No** | **Bank A/c No.** | **Bank Name** | **Nature of Account** |
| 01 | 3866101001959 | Canara | Babu Jagjeevanram Study Centre Account |
| 02 | 50100246509980 | HDFC | Admission Fee Account |
| **2019-20ನೇ ಸಾಲಿನಲ್ಲಿ ತೆರೆದ ಹೊಸ ಬ್ಯಾಂಕ್ ಖಾತೆಗಳ ವಿವರ** | | | |

| | | | |
|---|---|---|---|
| 01 | 3866101002034 | Canara (PFMS) | Public Financial Management System Project Account |
| 02 | 3866101002151 | Canara (Fast Tag) | Fast Tag Account |
| 03 | 3866101001825 | Canara (NHRC) | National Human Rights Commission Project Account |

**ತೀರ್ಮಾನ**

ಸದರಿ ವಿಷಯವಾಗಿ ಕೂಲಂಕುಷವಾಗಿ ಚರ್ಚಿಸಿದ ಸಭೆಯು ಕಾರ್ಯಸೂಚಿಯ ಕೋಷ್ಟಕದಲ್ಲಿನ 2018-19 ಮತ್ತು 2019-20ನೇ ಸಾಲಿನಲ್ಲಿ ತೆರೆದಿರುವ 05 ಬ್ಯಾಂಕ್‌ನ ಉಳಿತಾಯ ಖಾತೆಗಳಿಗೆ ಪೂರ್ವಾನುಮತಿಯನ್ನು ನೀಡಿದ್ದು, ಮುಂದಿನ ದಿನಗಳಲ್ಲಿ ಹೊಸದಾಗಿ ತೆರೆಯುವ ಬ್ಯಾಂಕ್ ಖಾತೆಗಳನ್ನು ಕಾಲಕಾಲಕ್ಕೆ ಸರ್ಕಾರ ಹೊರಡಿಸುವ ಮಾರ್ಗಸೂಚಿಗಳಂತೆ ಕ್ರಮವಹಿಸಲು ಸೂಚಿಸಿದೆ.

**ಐಟಂ ಸಂಖ್ಯೆ 10**

ವಿಷಯ: ಪ್ರಶ್ನೆ ಪತ್ರಿಕೆಗಳ ಮುದ್ರಣದ ಒಡಂಬಡಿಕೆಯನ್ನು ನವೀಕರಿಸಿ ಆದೇಶ ನೀಡಲು ಆಡಳಿತಾತ್ಮಕ ಅನುಮೋದನೆ ಪಡೆಯುವ ಕುರಿತು.

ಉಲ್ಲೇಖ: 1. ಆದೇಶ ಸಂಖ್ಯೆ: ವಿಶ್ರೀಕೃವಿಬ/ಸ್ನಾತಕೋತ್ತರ/ಪರೀಕ್ಷಾ/ಆ/2020-21/2076 ದಿನಾಂಕ 31.03.2021

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 21.01.2022.

***

ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದ 2020-21ನೇ ಸಾಲಿನ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ಮುದ್ರಿಸಿಕೊಡಲು M/s. Gemini Graphics Pvt Ltd, 44 & 45, Naubad Industrial Area Bidar ಇವರೊಂದಿಗೆ ಇದ್ದ ಗೌಪ್ಯ ಮುದ್ರಣದ ಒಪ್ಪಂದವು ಮುಕ್ತಾಯಗೊಂಡಿರುತ್ತದೆ. ಅವರ ತೃಪ್ತಿದಾಯಕ ಸೇವೆಯನ್ನು ಪರಿಗಣಿಸಿ ಸದರಿ ಒಪ್ಪಂದದ ಪ್ರಕಾರ ಮುಂದಿನ ಒಂದು ವರ್ಷಗಳ ಅವಧಿಯವರೆಗೆ ಗುತ್ತಿಗೆಯನ್ನು ವಿಸ್ತರಿಸುವ ಅವಕಾಶವಿರುತ್ತದೆ. ಹಾಗೂ 2021-22ನೇ ಸಾಲಿನ ಪರೀಕ್ಷೆಗಳನ್ನು ಶೀಘ್ರವಾಗಿ ನಡೆಸಬೇಕಾಗಿರುತ್ತದೆ. ಆದ್ದರಿಂದ ಹಿಂದಿನ ಒಡಂಬಡಿಕೆಯ ದರಗಳನ್ನೇ ಅನ್ವಯಿಸಿ ಪ್ರಸ್ತುತ ಒಡಂಬಡಿಕೆಯನ್ನು ನವೀಕರಿಸಿ M/s. Gemini Graphics Pvt Ltd, 44 & 45, Naubad Industrial Area Bidar ಇವರ ಸೇವೆಯನ್ನು 2021-22ನೇ ಸಾಲಿನ ಎಲ್ಲಾ ಪರೀಕ್ಷೆಗಳಿಗೆ ಪಡೆಯುವ ಸಂಬಂಧ ಆಡಳಿತಾತ್ಮಕ ಅನುಮೋದನೆಗಾಗಿ ಸಿಂಡಿಕೇಟ್ ಸಭೆಗೆ ಸಲ್ಲಿಸಿದೆ.

**ತೀರ್ಮಾನ**

ಪರೀಕ್ಷಾ ವಿಭಾಗದ 2020-21ನೇ ಸಾಲಿನ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳನ್ನು ಮುದ್ರಿಸಿಕೊಡುವ ಕಾರ್ಯದ ಕುರಿತು ಸಭೆಯು ಚರ್ಚಿಸಿ, 2021-22ನೇ ಸಾಲಿನ ಪರೀಕ್ಷೆಗಳನ್ನು ಶೀಘ್ರವಾಗಿ ನಡೆಸುವ ಹಿನ್ನೆಲೆಯಲ್ಲಿ ಮತ್ತು ಸದರಿ ಸೇವಾದಾರರ ತೃಪ್ತಿದಾಯಕ ಸೇವೆಯನ್ನು ಪರಿಗಣಿಸಿ, ಹಿಂದಿನ ಒಡಂಬಡಿಕೆಯ ದರಗಳನ್ನೇ ಅನ್ವಯಿಸಿ ಪ್ರಸ್ತುತ ಒಡಂಬಡಿಕೆಯನ್ನು ನವೀಕರಿಸಿ M/s. Gemini Graphics Pvt Ltd, 44 & 45, Naubad Industrial Area Bidar ಇವರ ಸೇವೆಯನ್ನು 2021-22ನೇ ಸಾಲಿನ ಸ್ನಾತಕ/ಸ್ನಾತಕೋತ್ತರ/ಡಿಪ್ಲೋಮೊ/ಬಿ.ಇಡಿ ಪದವಿಗಳ 1, 3 ಮತ್ತು 5ನೇ ಸೆಮಿಸ್ಟರ್‌ಗಳ ಪರೀಕ್ಷೆಗಳಿಗೆ ಮಾತ್ರ ಪಡೆಯಲು ಸಭೆಯು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ. ಮುಂದುವರೆದು, ಪ್ರಶ್ನೆಪತ್ರಿಕೆಗಳ ಮುದ್ರಣ ಕುರಿತು ನೂತನ ಒಡಂಬಡಿಕೆ ಪ್ರಕ್ರಿಯೆ ಪ್ರಾರಂಭಿಸಲು ಸಲಹೆ ನೀಡಲಾಯಿತು. ಹೊಸ ಒಡಂಬಡಿಕೆಯನ್ನು 2021-22ನೇ ಸಾಲಿನ 2, 4 ಮತ್ತು 6ನೇ ಹಾಗೂ 2022-23ನೇ ಸಾಲಿನ 1, 3 ಮತ್ತು 5ನೇ ಸೆಮಿಸ್ಟರ್‌ಗಳ ಪರೀಕ್ಷೆಗಳಿಗೆ ಸೀಮಿತಗೊಳಿಸಿ ಒಟ್ಟು ಒಂದು ವರ್ಷದ ಸೇವೆಯ ಅವಕಾಶ ನೀಡಲು ನಿರ್ಧರಿಸಲಾಯಿತು.

ಐಟಂ ಸಂಖ್ಯೆ 11

ವಿಷಯ:-ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಜ್ಞಾನಸಾಗರ ಆವರಣ ಬಳ್ಳಾರಿ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ, ಸ್ನಾತಕೋತ್ತರ ಕೇಂದ್ರ, ಕೊಪ್ಪಳ ಮತ್ತು ಸ್ನಾತಕೋತ್ತರ ಕೇಂದ್ರ, ಯಲಬುರ್ಗಾಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಗೃಹ ರಕ್ಷಕರ ಕೆಲಸದ ಅವಧಿಯನ್ನು ವಿಸ್ತರಿಸುವ ಕುರಿತು.

ಅಂದಾಜು ವೆಚ್ಚ: ರೂ 111.73 ಲಕ್ಷಗಳು (ಭತ್ಯೆ ಪ್ರತಿ ದಿನಕ್ಕೆ ರೂ. 380.00 & ಸ್ವಚ್ಚತಾ ಭತ್ಯೆ: ಮಾಸಿಕ ರೂ.80.00)

ಉಲ್ಲೇಖ:- 1) ಎಸ್ಟೇಟ್ ಸಲಹಾ ಮಂಡಳಿ ನಡಾವಳಿ ಸಂಖ್ಯೆ:07, ದಿನಾಂಕ: 12.01.2021

2) ಸಿಂಡಿಕೇಟ್ ಸಭೆ ನಡಾವಳಿ ಸಂಖ್ಯೆ: 19, ದಿನಾಂಕ: 05.02.2021.

3) ಆರಕ್ಷಕ ಮಹಾನಿರ್ದೇಶಕರು, ಹಾಗೂ ಗೃಹ ರಕ್ಷಕದಳದ ಮಹಾ ಸಮಾದೇಷ್ಟರು, ಬೆಂಗಳೂರು ಇವರ ಫ್ಯಾಕ್ಸ್ ಸಂದೇಶ ಪತ್ರದ ಸಂಖ್ಯೆ: ಆಡಳಿತ (2)01/ಸಿಜಿಒ/2020-21, ದಿನಾಂಕ: 01.04.2020

***

ವಿಶ್ವವಿದ್ಯಾಲಯದ ಜ್ಞಾನಸಾಗರ ಆವರಣ ಬಳ್ಳಾರಿ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರ, ಕೊಪ್ಪಳ ಮತ್ತು ಸ್ನಾತಕೋತ್ತರ ಕೇಂದ್ರ ಯಲಬುರ್ಗಾಗಳಿಗೆ ಅಗತ್ಯವಾದ ಗೃಹ ರಕ್ಷಕರರನ್ನು ದಿನಾಂಕ: 01-03-2021 ರಿಂದ 28-02-2022 ರವರೆಗೆ ಮೂರು ಪಾಳಿಗಳಲ್ಲಿ ಕಾರ್ಯ ನಿರ್ವಹಿಸಲು ಈ ಕೆಳಕಂಡ ಕೋಷ್ಟಕದಲ್ಲಿನ 04ನೇ ಕಾಲಂನಂತೆ ನಿಯೋಜಿಸಲು ಉಲ್ಲೇಖ-01 ಮತ್ತು 02ರಂತೆ ಅನುಮೋದನೆಯನ್ನು ನೀಡಲಾಗಿದೆ. ವಿಶ್ವವಿದ್ಯಾಲಯವು ಉಲ್ಲೇಖ-03 ರ ಆರಕ್ಷಕ ಮಹಾನಿರ್ದೇಶಕರು, ಹಾಗೂ ಗೃಹ ರಕ್ಷಕದಳದ ಮಹಾ ಸಮಾದೇಷ್ಟರು, ಬೆಂಗಳೂರು ಇವರ ಫ್ಯಾಕ್ಸ್ ಸಂದೇಶ ಪತ್ರದನ್ವಯ ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಪತ್ರಗಳನ್ನು ಮೂರು ತಿಂಗಳಿಗೊಮ್ಮೆ ಬರೆದು ಗೃಹರಕ್ಷಕರ ಸೇವೆಯನ್ನು ಪಡೆಯಲಾಗುತ್ತಿದೆ.

| ಕ್ರಸಂ | ನಿಯೋಜಿಸಬೇಕಾದ ಜಿಲ್ಲೆಗಳು | ಕರ್ತವ್ಯದ ಸ್ಥಳ | 2020-21ರಲ್ಲಿ ಅನುಮೋದಿತ ಗೃಹರಕ್ಷಕರ ಸಂಖ್ಯೆ | 2021-22 ರಲ್ಲಿ ನಿಯೋಜಿಸಬೇಕಾದ ಗೃಹರಕ್ಷಕರ ಸಂಖ್ಯೆ |
|---|---|---|---|---|
| 01 | 02 | 03 | 04 | 05 |
| 01 | ಬಳ್ಳಾರಿ | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಮುಖ್ಯ ಆವರಣ, ಬಳ್ಳಾರಿ | 50 | 50 |
| 02 | ಬಳ್ಳಾರಿ | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ, ಸಂಡೂರು ತಾಲೂಕು. | 12 | 12 |
| 03 | ಕೊಪ್ಪಳ | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ಹಳೇ ಸಾರ್ವಜನಿಕ ಆಸ್ಪತ್ರೆ ಕಟ್ಟಡ, ಕೊಪ್ಪಳ. | 09 | 12 |
| 04 | ಕೊಪ್ಪಳ | ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ, ಕೊಪ್ಪಳ ಜಿಲ್ಲೆ. | 03 | 06 |
| | | | ಒಟ್ಟು 74 | ಒಟ್ಟು 80 |

ಮುಂದುವರೆದು, ದಿನಾಂಕ: 01-03-2022 ರಿಂದ 28-02-2023 ರವರೆಗೆ ( ಒಂದು ವರ್ಷದ ಅವಧಿಗೆ) ಮೇಲ್ಕಂಡ ಕೋಷ್ಟಕದಲ್ಲಿನ 05 ಕಾಲಂನಂತೆ ಮಾನ್ಯ ಜಿಲ್ಲಾಧಿಕಾರಿಗಳು ಬಳ್ಳಾರಿ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಕೊಪ್ಪಳ ಇವರುಗಳ ಮೂಲಕ ಆರಕ್ಷಕ ಮಹಾನಿರ್ದೇಶಕರು, ಹಾಗೂ ಗೃಹ ರಕ್ಷಕ ದಳದ ಮಹಾ ಸಮಾದೇಷ್ಟರು, ಬೆಂಗಳೂರು ಇವರಿಂದ ಗೃಹರಕ್ಷಕರನ್ನು ಪಡೆಯಲು ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಕಾರ್ಯಸೂಚಿಯಲ್ಲಿನ ಕೋಷ್ಟಕದಲ್ಲಿನ ಕಾಲಂ 05ರಂತೆ ವಿಶ್ವವಿದ್ಯಾಲಯದ ಜ್ಞಾನಸಾಗರ ಆವರಣ ಬಳ್ಳಾರಿ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರ, ಕೊಪ್ಪಳ ಮತ್ತು ಸ್ನಾತಕೋತ್ತರ ಕೇಂದ್ರ ಯಲಬುರ್ಗಾಗಳಿಗೆ ಅಗತ್ಯ ಗೃಹ ರಕ್ಷಕರರನ್ನು ದಿನಾಂಕ: 01-03-2022 ರಿಂದ 28-02-2023 ರವರೆಗೆ (ಒಂದು ವರ್ಷದ ಅವಧಿಗೆ) ಮೂರು ಪಾಳಿಯಲ್ಲಿ ಕಾರ್ಯ ನಿರ್ವಹಿಸಲು ಸಭೆಯು ಒಪ್ಪಿಗೆಯನ್ನು ಸೂಚಿಸಿತು.

ಐಟಂ ಸಂಖ್ಯೆ 12

ವಿಷಯ: ಪರೀಕ್ಷಾ ಕೆಲಸ ನಿರ್ವಹಣೆ ಪದ್ಧತಿ (EPMS) ಕುರಿತ ವಿಶ್ವವಿದ್ಯಾಲಯದ ಟೆಂಡರ್ ಆಹ್ವಾನಕ್ಕೆ ಸಂಬಂಧಿಸಿದಂತೆ ಡಾ.ಎಂ.ಆರ್ ನಿಂಬಾಳ್ಕರ್ ಅವರ ಪತ್ರ ಕುರಿತು ಪರಾಮರ್ಶೆ

ಉಲ್ಲೇಖ: 1. ದಿನಾಂಕ: 08.07.2021 ರಲ್ಲಿ ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ:07

2. VSKUB/EXAM/EPMS/2021-22/1372, dated:-14/01/2022
3. ಡಾ. ಎಂ.ಆರ್ ನಿಂಬಾಳ್ಕರ್ ರವರ ಪತ್ರ ದಿನಾಂಕ: 19.01.2022
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 27.01.2022

*****

ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯಗಳ ನಿರ್ವಹಣೆಗಾಗಿ (EPMS) ಹೊರಗುತ್ತಿಗೆ ಆಧಾರದ ಮೇಲೆ ಮೆ. ಲಾಜಿಸಿಸ್, ಬೆಂಗಳೂರು ಇವರ ಸೇವೆಯನ್ನು ಪಡೆಯಲಾಗುತ್ತಿದೆ. ಪ್ರಸ್ತುತ EPMS ಸೇವೆಗಾಗಿ ಹೊಸದಾಗಿ ಈ-ಟೆಂಡರ್ ಹೊರಡಿಸಲಾಗಿದೆ. ಈ ಟೆಂಡರ್ ಆಹ್ವಾನಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಪ್ರಸ್ತುತ ಹೊರಗುತ್ತಿಗೆದಾರರಾದ ಮೆ. ಲಾಜಿಸಿಸ್, ಬೆಂಗಳೂರು ಈ ಸಂಸ್ಥೆ ಹಾಗೂ ಅದರ ಒಡೆಯರನ್ನು ಕುರಿತು ಹಲವು ಆಕ್ಷೇಪಾರ್ಹ ವಿಷಯಗಳನ್ನು ನಮೂದಿಸಿ ವಿಶ್ವವಿದ್ಯಾಲಯಕ್ಕೆ ಡಾ. ಎಂ.ಆರ್ ನಿಂಬಾಳ್ಕರ್, ಬೆಳಗಾವಿ ಇವರು ಪತ್ರ ಬರೆದಿರುತ್ತಾರೆ. ಪ್ರಸ್ತುತ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುವುದರಿಂದ ಈ ಪತ್ರದ ಒಕ್ಕಣೆ ಕುರಿತು ಸೂಕ್ತ ಪರಾಮರ್ಶೆಗಾಗಿ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಗೆ ಸಲ್ಲಿಸಿದೆ.

**<u>ತೀರ್ಮಾನ</u>**

ವಿಶ್ವವಿದ್ಯಾಲಯದ ಹೊರಗುತ್ತಿಗೆ ಆಧಾರದ ಮೇಲೆ ಮೆ. ಲಾಜಿಸಿಸ್, ಬೆಂಗಳೂರು ಇವರ ಸೇವೆಯ ಕುರಿತು ವಿಶ್ವವಿದ್ಯಾಲಯದೊಂದಿಗೆ ಪರೀಕ್ಷಾ ಕಾರ್ಯಗಳ ನಿರ್ವಹಣೆ (EPMS) ಕಾರ್ಯವನ್ನು ಹೊರಗುತ್ತಿಗೆ ಹೊಂದಿದ ಮೆ. ಲಾಜಿಸಿಸ್, ಬೆಂಗಳೂರು ಈ ಸಂಸ್ಥೆ ಹಾಗೂ ಅದರ ಒಡೆಯರನ್ನು ಕುರಿತು ಹಲವು ಆಕ್ಷೇಪಾರ್ಹ ವಿಷಯಗಳನ್ನು ನಮೂದಿಸಿ ವಿಶ್ವವಿದ್ಯಾಲಯಕ್ಕೆ ಡಾ. ಎಂ.ಆರ್ ನಿಂಬಾಳ್ಕರ್, ಬೆಳಗಾವಿ ಇವರು ಬರೆದಿರುವ ಪತ್ರದ ಕುರಿತು ವಿಸ್ತೃತವಾಗಿ ಚರ್ಚಿಸಿದ ಸಭೆಯು, ಸದರಿ ಪತ್ರದಲ್ಲಿ ಸಂಸ್ಥೆ/ಮಾಲೀಕರ ಮೇಲೆ ಯಾವುದೇ ವಿಶ್ವವಿದ್ಯಾಲಯ/ಸಂಸ್ಥೆ ಆಗಲಿ ಯಾವುದೇ ಕ್ರಮ ಕೈಗೊಂಡಿರುವ ವಿವರಗಳು ಲಭ್ಯವಿರದದನ್ನು ಗಮನಿಸಿ, ಯಾವುದೇ ವ್ಯಕ್ತಿಗತ ಹಿತಾಸಕ್ತಿಗಳಿಗೆ ಆಸ್ಪದ ಕೊಡದೆ ಪ್ರಸ್ತುತ ಜಾರಿಯಲ್ಲಿ ಇ-ಟೆಂಡರ್ ಪ್ರಕ್ರಿಯೆಯನ್ನು ಜಾರಿಗೊಳಿಸುವಂತೆ ಸಭೆಯು ತೀರ್ಮಾನಿಸಿದೆ. ಈ ಕುರಿತಾಗಿ ವಿಶ್ವವಿದ್ಯಾಲಯದಿಂದ ಈಗಾಗಲೇ ಸಂಸ್ಥೆ/ಮಾಲೀಕರಿಗೆ ಸಮುಜಾಯಿಷಿ ಕೇಳಿ ಪತ್ರ ಬರೆದಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.

13. ಶಿಕ್ಷಣದ ಗುಣಮಟ್ಟ ಸುಧಾರಿಸುವ ಸಂಬಂಧ ವಿಶ್ವವಿದ್ಯಾಲಯದ ಅಧೀನಕೊಳಪಟ್ಟ ಎಲ್ಲಾ ಬಿ.ಇಡಿ ಮಹಾವಿದ್ಯಾಲಯಗಳಲ್ಲಿ ಕಲಿಸುವ ರೀತಿಯ ಮೇಲ್ವಿಚಾರಣೆಗಾಗಿ ಸಮಿತಿ ರಚಿಸುವ ಕುರಿತು.

**<u>ತೀರ್ಮಾನ</u>**

ಸದರಿ ವಿಷಯವಾಗಿ ಸನ್ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ. ಹೆಚ್.ಇ ದಾದಾ ಕಲಂದರ್ ಇವರು ಎಲ್ಲಾ ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯಗಳ ಕಾರ್ಯ ನಿರ್ವಹಣೆಯಲ್ಲಿ ಶಿಸ್ತುಪಾಲನೆ ತರುವ ಸಂಬಂಧ ಕುರಿತಾಗಿ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಮೇಲ್ವಿಚಾರಣೆ ಸಮಿತಿಯನ್ನು ರಚಿಸುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು. ನಂತರ ಸದರಿಯವರ ಅಭಿಪ್ರಾಯದಂತೆ ಸಮಿತಿ ರಚಿಸಲು ಸಭೆಯು ಅನುಮೋದಿಸಿತು.

14. ವಿಶ್ವವಿದ್ಯಾಲಯದ ಆರಂಭದ ದಿನಗಳಲ್ಲಿ ರಚಿಸಿದ ಶಾಸನಗಳನ್ನು ಪರಿಶೀಲಿಸಿ ಅಗತ್ಯವಿದ್ದರೆ ತಿದ್ದುಪಡಿಗಾಗಿ ಸಮಿತಿ ರಚನೆ ಕುರಿತು.

### ತೀರ್ಮಾನ

ಸದರಿ ವಿಷಯವಾಗಿ ಈಗಾಗಲೇ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಆಡಳಿತ ನಿರ್ವಹಣೆಯ ಸಂಬಂಧ 06 ಪರಿನಿಯಮಾವಳಿಯನ್ನು ಸಿದ್ಧಪಡಿಸಿ ದಿನಾಂಕ 09.07.2020 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ. ಮುಂದುವರೆದು, ಮುಂದಿನ ದಿನಗಳಲ್ಲಿ ಅವಶ್ಯವಿರುವ ಪರಿನಿಯಮಾವಳಿಗಳನ್ನು ಇದೆ ಸಮಿತಿಯ ಮೂಲಕ ಸಿದ್ಧಪಡಿಸಲಾಗುವುದು ಎಂದು ಸಭೆಗೆ ತಿಳಿಯಪಡಿಸಲಾಯಿತು. ಇದನ್ನು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

15. ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗೌರವಾನ್ವಿತ ಖಾಯಂ ಬೋಧಕ, ಬೋಧಕೇತರ ಹಾಗೂ ಅತಿಥಿ ಉಪನ್ಯಾಸಕ, ಉಪನ್ಯಾಸಕೇತರ ಸಿಬ್ಬಂದಿಗಳ ಸಾಮಾನ್ಯ ಹಾಗೂ ವಿಶೇಷ ವರ್ಗಾವಣೆ ಕುರಿತು ನಿಯಮಗಳನ್ನು ರೂಪಿಸುವುದು. ರೂಪಿಸಿದ್ದಲ್ಲಿ ಮಾಹಿತಿಯನ್ನು ಒದಗಿಸುವ ಕುರಿತು.

### ತೀರ್ಮಾನ

ಸದರಿ ವಿಷಯವಾಗಿ ಈಗಾಗಲೇ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಮಿತಿ ರಚಿಸಿದ್ದು, ಆ ಸಮಿತಿಯು ದಿನಾಂಕ 12.10.2021 ಮತ್ತು 27.01.2022 ರಂದು ಸಭೆಯು ನಡೆಸಿ ಕರಡು ವರ್ಗಾವಣೆಯನ್ನು ಸಿದ್ಧಗೊಳಿಸುತ್ತಿದ್ದು, ಸದರಿ ಕರಡು ವರ್ಗಾವಣೆಯನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗುವುದು ಎಂದು ಸಭೆಗೆ ತಿಳಿಸಲಾಯಿತು. ಈ ವಿಷಯವನ್ನೂ ಸಹ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**ಟೇಬಲ್ ಅಜೆಂಡಾ**

**➲ ಐಟಂ ನಂ. 01:**

ವಿಷಯ: ಶ್ರೀ ವಿನಾಯಕ.ಎಸ್. ಇವರಿಗೆ ಅನುಕಂಪ ಆಧಾರದ ಮೇಲೆ ಉದ್ಯೋಗ ನೀಡುವ ಕುರಿತು.

ಉಲ್ಲೇಖ: ಶ್ರೀ ವಿನಾಯಕ.ಎಸ್. ಇವರ ಮನವಿ ಪತ್ರ ದಿನಾಂಕ: 05.01.2022

***

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ದಿ: ಸತೀಶ್ ಹೆಚ್. ಅನುಚರ ಇವರು ದಿನಾಂಕ: 28.10.1995 ರಿಂದ ವಿಶ್ವವಿದ್ಯಾಲಯದಲ್ಲಿ ಖಾಯಂ ನೌಕರರಾಗಿ ಕಾರ್ಯನಿರ್ವಹಿಸುತ್ತಿದ್ದರು. ದಿನಾಂಕ:11.12.2021 ರಂದು ಮರಣ ಹೊಂದಿರುವ ಹಿನ್ನೆಲೆಯಲ್ಲಿ ಅವರ ಮೊದಲನೇ ಮಗನಾದ ಶ್ರೀ ವಿನಾಯಕ ಎಸ್ ಇವರು ಅನುಕಂಪ ಆಧಾರದ ಮೇಲೆ ಉದ್ಯೋಗ ನೀಡುವಂತೆ ಉಲ್ಲೇಖಿದನ್ವಯ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

ಮುಂದುವರೆದು ಶ್ರೀ. ವಿನಾಯಕ ಎಸ್ ಇವರಿಗೆ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996 ಪ್ರಕಾರ ಅನುಕಂಪ ಅಧಾರಿತ ಉದ್ಯೋಗ ನೀಡಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### ತೀರ್ಮಾನ

ದಿ: ಸತೀಶ್ ಹೆಚ್. ಅನುಚರ ವಿಶ್ರೀಕೃ ವಿಶ್ವವಿದ್ಯಾಲಯ ಇವರು ದಿನಾಂಕ: 11.12.2021 ರಂದು ಮರಣ ಹೊಂದಿರುವ ಹಿನ್ನೆಲೆಯಲ್ಲಿ ಸದರಿಯವರ ಮಗನಾದ ಶ್ರೀ ವಿನಾಯಕ.ಎಸ್. ಇವರಿಗೆ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996ರ ಪ್ರಕಾರ ಅನುಕಂಪ ಅಧಾರಿತ ಉದ್ಯೋಗ ನೀಡುವ ಕ್ರಮವಹಿಸಲು ಸಭೆಯು ಅನುಮೋದಿಸಿದೆ.

**➲ ಐಟಂ ನಂ. 02:**

ವಿಷಯ: ಖನಿಜ ಸಂಸ್ಕರಣ ವಿಭಾಗದ ಖನಿಜ ಸಂಸ್ಕರಣೆಯ ವಿವಿಧ ಸಲಹಾ ಕಾರ್ಯಗಳ ಪರೀಕ್ಷಾ ಶುಲ್ಕಗಳನ್ನು ಪರಿಷ್ಕರಿಸುವ ಕುರಿತು.

ಉಲ್ಲೇಖ: 1. ವಿಶ್ರೀಕೃವಿಬ/ಆಡಳಿತ/ಖನಿಜ-ಐಎಂಎ/2019-20/1578 ದಿನಾಂಕ: 20.11.2019

2. ಮುಖ್ಯಸ್ಥರು, ಖನಿಜ ಸಂಸ್ಕರಣ ವಿಭಾಗ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ ಇವರ ಮನವಿ ಪತ್ರ ದಿನಾಂಕ: 20.01.2022.

*****

ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿಯಲ್ಲಿರುವ ಖನಿಜ ಸಂಸ್ಕರಣ ವಿಭಾಗದ ಪ್ರಯೋಗಾಲಯದಲ್ಲಿ ವಿವಿಧ ಖನಿಜ ಸಂಸ್ಕರಣಾ ವಿವಿಧ ಸಲಹಾ ಕಾರ್ಯಗಳ ಪರೀಕ್ಷಾ ಶುಲ್ಕಗಳನ್ನು (Testing Charge) ಉಲ್ಲೇಖ-01ರನ್ವಯ ಕೆಳಕಂಡ ಕೋಷ್ಟಕದ ಕಾಲಂ ಸಂಖ್ಯೆ 03ರಂತೆ ಪರೀಕ್ಷಾ ಶುಲ್ಕಗಳನ್ನು ನಿಗದಿಪಡಿಸಿ ಆದೇಶಿಸಲಾಗಿತ್ತು. ಆದರೆ ಸದರಿ ಪರೀಕ್ಷೆಗಳ ದರಗಳನ್ನು ಪರಿಷ್ಕರಿಸುವ ಅವಶ್ಯಕತೆಯ ಹಿನ್ನೆಲೆಯಲ್ಲಿ ಕಾಲಂ 04ರಂತೆ ದರಗಳ ಪರಿಷ್ಕರಣೆಗಾಗಿ ಮುಖ್ಯಸ್ಥರು, ಖನಿಜ ಸಂಸ್ಕರಣ ವಿಭಾಗ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ ಇವರು ಮನವಿ ಪತ್ರ ಸಲ್ಲಿಸಿದ್ದಾರೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

| The Charges are Single Ore Dressing Unit Operation under Specified Condition Excluding Chemical Analysis and Mineralogy (Per Test) | | | |
|---|---|---|---|
| Sl No | Name of Test | Old Charges | New charges |
| 01 | Gravity Separation(Jigging, Tabling, Special, Cycloning, Heavy Media Separation) | 20,000/- | 30,000/- |
| 02 | Magnetic Separation (Dry or Wet) | 15.000/- | 20,000/- |
| 03 | Bonds Work Index determination (Ball/Rod mill) | 15,000/- | 20,000/- |
| 04 | Hard Groove Grindability Index | 10,000/- | 15,000/- |
| 05 | Shatter Index determination | 5,000/- | 10,000/- |
| 06 | Sieve Analysis (Dry/wet) | 5,000/- | 10,000/- |
| 07 | Flotation Studies | 20,000/- | 30,000/- |
| 08 | Laboratory Thickening Tests | 15,000/- | 20,000/- |
| 09 | Pelletisation Studies (only for Green pellet Making) | 10,000/- | 15,000/- |
| 10 | Proximate Analysis of coal | 2,000/- | 5,000/- |
| 11 | Air Classification | 10,000/- | 15,000/- |

**ತೀರ್ಮಾನ**

ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿಯಲ್ಲಿರುವ ಖನಿಜ ಸಂಸ್ಕರಣ ವಿಭಾಗದ ಪ್ರಯೋಗಾಲಯದಲ್ಲಿ ಕಾರ್ಯಸೂಚಿಯಲ್ಲಿನ ಕೋಷ್ಟಕದ ವಿವಿಧ ಖನಿಜ ಸಂಸ್ಕರಣಾ ವಿವಿಧ ಸಲಹಾ ಕಾರ್ಯಗಳ ಪರೀಕ್ಷಾ ಶುಲ್ಕಗಳನ್ನು ಪರೀಕ್ಷಾ ಕಾರ್ಯದ ಅಗತ್ಯ ವಸ್ತುಗಳ ಬೆಲೆ ಏರಿಕೆ ಹಿನ್ನೆಲೆಯಲ್ಲಿ ಪರೀಕ್ಷೆಗಳ ದರಗಳನ್ನು ಪರಿಷ್ಕರಿಸುವ ಅವಶ್ಯಕತೆಯನ್ನು ಮನಗಂಡು ಸಭೆಯು ಕಾಲಂ 04ರ ಪರಿಷ್ಕೃತ ದರಗಳನ್ನು ಅನುಮೋದಿಸಿತು.

**➲ ಐಟಂ ನಂ. 03**

ವಿಷಯ: ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳ ಬೋಧಕ ಸಿಬ್ಬಂದಿಗಳಿಗೆ ಯುಜಿಸಿಯ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ನೀಡುವ ಕುರಿತು.

*****

ವಿಶ್ವವಿದ್ಯಾಲಯದ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ವಾಣಿಜ್ಯಶಾಸ್ತ್ರ, ಔದ್ಯೋಗಿಕ ರಸಾಯನಶಾಸ್ತ್ರ, ಗಣಿತಶಾಸ್ತ್ರ ನಿರ್ವಹಣಾಶಾಸ್ತ್ರ, ಸಮಾಜಶಾಸ್ತ್ರ ಮತ್ತು ಸಮಾಜಕಾರ್ಯ ಅಧ್ಯಯನ ವಿಭಾಗಗಳ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ.ಯ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ನೀಡುವ ಸಂಬಂಧ ವಿಭಾಗವಾರು ಸ್ಕ್ರೀನಿಂಗ್-ಕಮ್-ಮೌಲ್ಯಮಾಪನ ಸಮಿತಿಗಳನ್ನು ರಚಿಸಿದೆ. ತದನಂತರ ಸದರಿ ಸಮಿತಿಗಳು ಕಾರ್ಯ ಪ್ರವೃತ್ತಗೊಂಡು ಯು.ಜಿ.ಸಿ ಹಾಗೂ ಸರ್ಕಾರದ ನಿಯಮಗಳಂತೆ ಬೋಧಕ ಸಿಬ್ಬಂದಿಗಳಿಗೆ ಯುಜಿಸಿಯ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ನೀಡುವ ಸಂಬಂಧ ಸ್ಕ್ರೀನಿಂಗ್-ಕಮ್-ಮೌಲ್ಯಮಾಪನ ನಡೆಸಿ ವಿಭಾಗವಾರು ಪಟ್ಟಿಗಳನ್ನು ಸಿದ್ಧಪಡಿಸಿ ಸಲ್ಲಿಸಿದ್ದು, ಸದರಿ ಪಟ್ಟಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## ತೀರ್ಮಾನ

ವಿಶ್ವವಿದ್ಯಾಲಯದ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ವಾಣಿಜ್ಯಶಾಸ್ತ್ರ, ಔದ್ಯೋಗಿಕ ರಸಾಯನಶಾಸ್ತ್ರ, ಗಣಿತಶಾಸ್ತ್ರ ನಿರ್ವಹಣಾಶಾಸ್ತ್ರ, ಸಮಾಜಶಾಸ್ತ್ರ ಮತ್ತು ಸಮಾಜಕಾರ್ಯ ಅಧ್ಯಯನ ವಿಭಾಗಗಳ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ.ಯ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿಗಾಗಿ ರಚಿಸಿದ ಸ್ಕ್ರೀನಿಂಗ್–ಕಮ್–ಮೌಲ್ಯಮಾಪನ ಸಮಿತಿಗಳು ಸಲ್ಲಿಸಿದ ನಡಾವಳಿಯನ್ನು ಸಭೆಯು ಈ ಕೆಳಕಂಡಂತೆ ಅನುಮೋದಿಸಿತು. ಮುಂದುವರೆದು, ಸದರಿ ಪ್ರಯೋಜನಗಳನ್ನು ಸಿಂಡಿಕೇಟ್ ದಿನಾಂಕದಿಂದ ಅನ್ವಯಿಸಿ ಪಡೆಯಬಹುದಾಗಿದೆ.

| ಕ್ರಸಂ | ಅಧ್ಯಾಪಕರ ಹೆಸರು | ವೃತ್ತಿ ಪದೋನ್ನತಿ ಹಂತ | ಸಮಿತಿಯು ಶಿಫಾರಸು ಮಾಡಿದ ಬಡ್ತಿ ದಿನಾಂಕ | ತೀರ್ಮಾನ |
|---|---|---|---|---|
| ಅರ್ಥಶಾಸ್ತ್ರ | | | | Recommendations of the Screening cum evaluation committee's is approved. (ವಿಭಾಗವಾರು ಸ್ಕ್ರೀನಿಂಗ್–ಕಮ್–ಮೌಲ್ಯಮಾಪನ ಸಮಿತಿಗಳು ಸಲ್ಲಿಸಿದ ಶಿಫಾರಸ್ಸುಗಳನ್ನು ಸಭೆಯು ಅನುಮೋದಿಸಿದೆ.) |
| 01 | ಡಾ. ನಿರಂಜನ ಆರ್. | AGP 7,000 (Level 11) - AGP 8,000 (Level 12) | 26.11.2021 | |
| ಗಣಿತಶಾಸ್ತ್ರ | | | | |
| 01 | ಡಾ. ಜಿತೇಂದ್ರ ಕುಮಾರ ಸಿಂಗ್ | AGP 7,000 (Level 11) - AGP 8,000 (Level 12) | 20.10.2021 | |
| ಸಮಾಜಶಾಸ್ತ್ರ | | | | |
| 01 | ಡಾ. ವೀರೇಂದ್ರ ಕುಮಾರ ಎನ್. | AGP 7,000 (Level 11) - AGP 8,000 (Level 12) | 23.01.2022 | |
| ವಾಣಿಜ್ಯಶಾಸ್ತ್ರ | | | Not Recommended | |
| 01 | ಡಾ. ಚಲವಾದಿ ಚನಬಸಪ್ಪ ಐ. | AGP 7,000 (Level 11) - AGP 8,000 (Level 12) | | |
| ಔದ್ಯೋಗಿಕ ರಸಾಯನಶಾಸ್ತ್ರ | | | | |
| 01 | ಡಾ. ಎಂ.ಕೆ. ಅಂಶುಮಾಲಿ | AGP 7,000 (Level 11) - AGP 8,000 (Level 12) | | |
| ಸಮಾಜಶಾಸ್ತ್ರ | | | | |
| 01 | ಡಾ. ರಾಜೇಂದ್ರ ಪ್ರಸಾದ ಎನ್.ಎಲ್. | AGP 7,000 (Level 11) - AGP 8,000 (Level 12) | | |
| ಸಮಾಜಕಾರ್ಯ | | | | |
| 01 | ಡಾ. ಪವಿತ್ರಾ ರವಿಂದ್ರ ಆಲೂರ್ | AGP 7,000 (Level 11) - AGP 8,000 (Level 12) | | |
| ರಾಜ್ಯಶಾಸ್ತ್ರ | | | | ಮುಂದಿನ ಸಿಂಡಿಕೇಟ್ ಸಭೆಗೆ ಮುಂದೂಡಲಾಗಿದೆ. |
| 01 | ಡಾ. ಮೋಹನ್ ದಾಸ್ ಕೆ. | AGP 7,000 (Level 11) - AGP 8,000 (Level 12) | - | |
| ನಿರ್ವಹಣಾಶಾಸ್ತ್ರ | | | | |
| 01 | ಶ್ರೀ. ಸುನೀಲ್ ಕುಮಾರ ಎಂ.ಎಸ್. | AGP 7,000 (Level 11) - AGP 8,000 (Level 12) | - | |
| 02 | ಡಾ. ಅರುಣಕುಮಾರ ಜಿ. | AGP 7,000 (Level 11) - AGP 8,000 (Level 12) | - | |
| 03 | ಡಾ. ರವಿನಾರಾಯಣ ಕೆ.ಎಸ್. | AGP 7,000 (Level 11) - AGP 8,000 (Level 12) | - | |

## ➲ ಐಟಂ ನಂ. 04

ವಿಷಯ : ಪರೀಕ್ಷೆ ನಿರ್ವಹಣೆ ವ್ಯವಸ್ಥೆಯ ಒಡಂಬಡಿಕೆಯನ್ನು ಮುಂದುವರೆಸುವ ಕುರಿತು

ಉಲ್ಲೇಖ:
1. ಮೆ.ಲಾಜಿಸಿಸ್, ಬೆಂಗಳೂರು ಇವರೊಂದಿಗೆ ಮಾಡಿಕೊಂಡ ಕರಾರು ಪತ್ರದ ದಿನಾಂಕ: 31.08.2017
2. ಮೆ.ಲಾಜಿಸಿಸ್, ಬೆಂಗಳೂರು ಇವರಿಗೆ ನೀಡಿದ ಈ ಕಛೇರಿ ಆದೇಶ ಸಂಖ್ಯೆ: 1554 ದಿನಾಂಕ:31.08.2017.
3. ಸಿಂಡಿಕೇಟ್ ಸಭೆಯ ನಡಾವಳಿ ಸಂಖ್ಯೆ: 07 ದಿನಾಂಕ:09.07.2020.
4. ಗುತ್ತಿಗೆ ಅವಧಿಯನ್ನು ವಿಸ್ತರಿಸಿದ ಈ ಕಛೇರಿ ಆದೇಶ ಸಂಖ್ಯೆ:1055ಎ ದಿನಾಂಕ:08.12.2020
5. ಸಿಂಡಿಕೇಟ್ ಸಭೆಯ ನಡಾವಳಿ ಸಂಖ್ಯೆ 07 ದಿನಾಂಕ: 08.07.2021
6. ಸಂಖ್ಯೆ:ವಿಶ್ರೀಕೃವಿಬ/ಪರೀಕ್ಷಾ/ಲಾಜಿಸಿಸ್/2021–22/503(ಎ) ದಿನಾಂಕ:24.08.2021
7. VSKUB/EXAM/EPMS/2021-22/1372 dated:-14/01/2022
8. ಸಂಖ್ಯೆ:ವಿಶ್ರೀಕೃವಿಬ/ಸ್ನಾತಕೋತ್ತರ/ಪರೀಕ್ಷಾ/ಅಧಿಸೂಚನೆ/2021–22/1378 ದಿನಾಂಕ:14.01.2022
9. ಸಂಖ್ಯೆ:ವಿಶ್ರೀಕೃವಿಬ/ಸ್ನಾತಕ/ಪರೀಕ್ಷಾ/2021–22/1364 ದಿನಾಂಕ:13.01.2022
10. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:31.01.2022

*****

ವಿಶ್ವವಿದ್ಯಾಲಯದ ಪರೀಕ್ಷೆಗಳ ನಿರ್ವಹಣೆ ಹಾಗೂ ಇತ್ಯಾದಿ ಕೆಲಸಗಳನ್ನು (EPMS) ನಿರ್ವಹಿಸಲು ಮೆ: ಲಾಜಿಸಿಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರಿಗೆ ಈ ಕೆಳಗಿನಂತೆ ದಿನಾಂಕ: 31.08.2017 ರಿಂದ ಆಗಸ್ಟ್ 2020 ರವರೆಗೆ ಗುತ್ತಿಗೆಯನ್ನು ನೀಡಲಾಗಿತ್ತು. ಈ ಗುತ್ತಿಗೆ ಅವಧಿಯು ಮುಕ್ತಾಯವಾಗಿದ್ದರಿಂದ ಸೆಪ್ಟೆಂಬರ್/ಅಕ್ಟೋಬರ್ 2020 ರ ಪರೀಕ್ಷೆಗಳ ನಿರ್ವಹಣೆಯ ಹಾಗೂ ಇತ್ಯಾದಿ ಕೆಲಸಗಳನ್ನು ನಿರ್ವಹಿಸಲು ಉಲ್ಲೇಖ (3&4) ರನ್ವಯ ಮೆ. ಲಾಜಿಸಿಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರಿಗೆ ತಮ್ಮ ಸೇವೆಯನ್ನು ಮುಂದುವರೆಸಲು ಗುತ್ತಿಗೆಯನ್ನು ಹಾಲಿ ದರದನ್ವಯ ಮುಂದಿನ ಒಂದು ಪರೀಕ್ಷೆ ಅಥವಾ ಹೊಸ ಇ-ಟೆಂಡರ್ ಪ್ರಕ್ರಿಯೆ ಮುಕ್ತಾಯದವರೆಗೆ (ಇವುಗಳಲ್ಲಿ ಯಾವುದು ನಂತರ ಘಟಿಸುವುದೋ ಅಲ್ಲಿಯವರಗೆ) ನೀಡಲಾಗಿತ್ತು. ಆದರೆ ಕೋವಿಡ್-19 2ನೇ ಅಲೆಯ ಹಿನ್ನೆಲೆಯಲ್ಲಿ ಪರೀಕ್ಷೆಗಳನ್ನು ಮುಂದೂಡಿದ್ದರಿಂದ ಉಲ್ಲೇಖ (5&6)ರನ್ವಯ, 2020-21ನೇ ಸಾಲಿನ ಸಮ ಸೆಮಿಸ್ಟರ್ ಪರೀಕ್ಷೆಗಳು ಮುಗಿದು ಎಲ್ಲಾ ಸೆಮಿಸ್ಟರ್ ಪರೀಕ್ಷೆಗಳ ಪರಿಣಾಮ ಘೋಷಣೆಯವರೆಗೆ ಹಾಲಿ ದರಗಳನ್ನೇ ಅನ್ವಯಿಸಿ ಒಡಂಬಡಿಕೆಯನ್ನು ಪುನಃ ಮುಂದುವರಿಸಲಾಗಿತ್ತು. ತದನಂತರ EPMS ಸೇವೆಗಾಗಿ ಹೊರಗುತ್ತಿಗೆ ನೀಡಲು ಸಿಂಡಿಕೇಟ್ ನಿರ್ಧಾರದನ್ವಯ ಈ-ಟೆಂಡರ್ ಹೊರಡಿಸಲಾಗಿದ್ದು, ಅದರ ಪ್ರಕ್ರಿಯೆ ಜಾರಿಯಲ್ಲಿದೆ. ಪ್ರಸ್ತುತ 2021-22ನೇ ಶೈಕ್ಷಣಿಕ ಸಾಲಿನ 1, 3 ಮತ್ತು 5ನೇ ಸೆಮಿಸ್ಟರ್ ಪರೀಕ್ಷೆಗಳು ಫೆಬ್ರವರಿ-2022ರ ಮೂರನೇ ವಾರದಿಂದ ಪ್ರಾರಂಭವಾಗಬೇಕಾಗಿದೆ. ಈಗಾಗಲೆ ಪರೀಕ್ಷೆಗಳನ್ನು ಕುರಿತು ಅಧಿಸೂಚನೆಗಳನ್ನು ಹೊರಡಿಸಲಾಗಿದೆ. ಈ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ನಿರ್ವಹಣಾ ಕಾರ್ಯಕ್ಕಾಗಿ ಪ್ರಸ್ತುತ ಯಾವುದೇ ಸಂಸ್ಥೆಯೊಂದಿಗೆ ಹೊಸ ಒಡಂಬಡಿಕೆ ಇಲ್ಲಿಯವರೆಗೆ ಆಗದಿರುವುದರಿಂದ ಪರೀಕ್ಷಾ ಸಿದ್ಧತೆಯಲ್ಲಿ ಅಡಚಣೆ ಉಂಟಾಗಿರುತ್ತದೆ. ಆದ್ದರಿಂದ 2021-22ನೇ ಸಾಲಿನ ಸ್ನಾತಕ/ಸ್ನಾತಕೋತ್ತರ 1, 3, 5ನೇ ಸೆಮಿಸ್ಟರ್ ಪರೀಕ್ಷೆಗಳನ್ನು ಸಮಯಕ್ಕೆ ಸರಿಯಾಗಿ ಹಾಗೂ ಕ್ರಮಬದ್ಧವಾಗಿ ನಡೆಸಿ, ಮೌಲ್ಯಮಾಪನ ಮಾಡಿ ಪರಿಣಾಮ ಘೋಷಣೆ ಮಾಡುವವರೆಗೆ ಮೆಲಾಜಿಸಿಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರ ಸೇವೆಯನ್ನು ಹಾಲಿದರಗಳನ್ನು ಅನ್ವಯಿಸಿ ವಿಸ್ತರಿಸಲು ಮುಂಬರುವ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ಮುಂದುವರೆದು, ಈ ಮಧ್ಯೆ ರಾಜ್ಯ ಸರ್ಕಾರದಿಂದ ಇಪಿಎಂಎಸ್ ಸೇವೆಗೆ ಸಂಬಂಧಿಸಿದಂತೆ ಯೋಜನೆಗಳು ಜಾರಿಯಾದರೆ ಅದನ್ನು ಅಳವಡಿಸಿಕೊಂಡು ಒಡಂಬಡಿಕೆಯನ್ನು ರದ್ದುಪಡಿಸಲಾಗುವುದು.

<u>ತೀರ್ಮಾನ</u>

ವಿಶ್ವವಿದ್ಯಾಲಯದ ಪರೀಕ್ಷೆಗಳ ನಿರ್ವಹಣೆ ಹಾಗೂ ಇತ್ಯಾದಿ ಕೆಲಸಗಳನ್ನು (EPMS) ನಿರ್ವಹಿಸುವ ಕುರಿತು ಕೂಲಂಕುಷವಾಗಿ ಪರಿಶೀಲಿಸಿದ ಸಭೆಯು, ದಿನಾಂಕ:09.07.2020 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿ ಸಂಖ್ಯೆ: 07ರಲ್ಲಿ ಮೆ. ಲಾಜಿಸಿಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರ ಸೇವೆಯನ್ನು ಹಾಲಿ ದರದನ್ವಯ ಮುಂದಿನ ಒಂದು ಪರೀಕ್ಷೆ ಅಥವಾ ಹೊಸ ಇ-ಟೆಂಡರ್ ಪ್ರಕ್ರಿಯೆ ಮುಕ್ತಾಯದವರೆಗೆ (ಇವುಗಳಲ್ಲಿ ಯಾವುದು ನಂತರ ಘಟಿಸುವುದೋ ಅಲ್ಲಿಯವರಗೆ) ಮುಂದುವರೆಸಲು ನಿರ್ಣಯಿಸಲಾಗಿತ್ತು. ಆದರೆ, ಸದ್ಯ ಈವರೆಗೂ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುವುದರಿಂದ ಹಿಂದಿನ ಸಿಂಡಿಕೇಟ್ ಸಭೆಯ ನಿರ್ಣಯದಂತೆಯೇ 2021-22ನೇ ಸಾಲಿನ ಸ್ನಾತಕ/ಸ್ನಾತಕೋತ್ತರ 1, 3 ಮತ್ತು 5ನೇ ಸೆಮಿಸ್ಟರ್ ಪರೀಕ್ಷೆಗಳನ್ನು ಸಮಯಕ್ಕೆ ಸರಿಯಾಗಿ ಹಾಗೂ ಕ್ರಮಬದ್ಧವಾಗಿ ನಡೆಸಿ, ಮೌಲ್ಯಮಾಪನ ಮಾಡಿ ಪರಿಣಾಮ ಘೋಷಣೆ ಮಾಡುವವರೆಗೆ ಮೆ. ಲಾಜಿಸಿಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರ ಸೇವೆಯನ್ನು ಹಾಲಿದರಗಳನ್ನು ಹಾಗೂ ಈ ಹಿಂದಿನ ಎಲ್ಲಾ ಷರತ್ತುಗಳು ಮತ್ತು ನಿರ್ಬಂಧನೆಗಳನ್ನು ಅನ್ವಯಿಸಿ ವಿಸ್ತರಿಸಲು ಸಭೆಯು ಅನುಮೋದಿಸಿದೆ.

**➲ ಐಟಂ ನಂ. 05**

ವಿಷಯ: ಮೆ: ಜೆಮಿನಿ ಗ್ರಾಫಿಕ್ಸ್, ಬೀದರ್ ಇವರಿಂದ 3.5 ಲಕ್ಷ ಉತ್ತರ ಪತ್ರಿಕೆಗಳನ್ನು ಈ ಹಿಂದಿನ ಒಡಂಬಡಿಕೆ ಹಾಗೂ ದರ ಅನ್ವಯಿಸಿ ಖರೀದಿ ಮಾಡಲು ಅನುಮೋದನೆ ಕುರಿತು.

ಉಲ್ಲೇಖ: 1) ಸಿಂಡಿಕೇಟ್ ಸಭೆಯ ಅನುಮೋದನೆ ದಿನಾಂಕ. 22.09.2021(ನಿ.ಸಂ:09),

2) ಇ-ಟೆಂಡರ್ ಪ್ರಕಟಣೆ ದಿನಾಂಕ: (ಸಂಖ್ಯೆ: ವಿಶ್ರೀಕೃವಿಬ/ಪರೀಕ್ಷಾ/ಉತ್ತರಪತ್ರಿಕೆ/ಲಕೋಟೆ 2021-22/830,VSKU/2021-22/IND99 ಕರೆ-02),

3) ಉತ್ತರ ಪತ್ರಿಕೆ ಸರಬರಾಜು ಆದೇಶ ಸಂಖ್ಯೆ:390 ದಿನಾಂಕ:17.07.2020

4) ಮೆ: ಜೆಮಿನಿ ಗ್ರಾಫಿಕ್ಸ್, ಬೀದರ್ ಇವರೊಂದಿಗಿನ ಒಪ್ಪಂದ ಪತ್ರ ದಿನಾಂಕ: 17.07.2020

5) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ. 01.02.2022

*****

ವಿಶ್ವವಿದ್ಯಾಲಯದ ಪರೀಕ್ಷೆಗಳಿಗಾಗಿ ಅಗತ್ಯ ಉತ್ತರ ಪತ್ರಿಕೆಗಳನ್ನು ಖರೀದಿಸಲು ಸಿಂಡಿಕೇಟ್ ಸಭೆಯ ನಿರ್ಧಾರದನ್ವಯ ಈ-ಟೆಂಡರ್ ಹೊರಡಿಸಲಾಗಿತ್ತು. ಟೆಂಡರ್ ಪ್ರಕ್ರಿಯೆ ಪ್ರಕಾರ ದಿನಾಂಕ: 21.01.2022ರಂದು ಮಾದರಿ ಪ್ರತಿಗಳ ಪರಿಶೀಲನೆಯಲ್ಲಿ ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾದ ಎಲ್ಲಾ 03 ಸಂಸ್ಥೆಗಳ ಮಾದರಿ ಪ್ರತಿಗಳು ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ, ಪ್ರಸ್ತುತ ಟೆಂಡರ್‌ನ ಮೂರನೇ ಕರೆಯನ್ನು ಪ್ರಕಟಿಸಬೇಕಾದ ಅನಿವಾರ್ಯತೆ ಉಂಟಾಗಿರುತ್ತದೆ. ಹೀಗಾಗಿ ಈ ಟೆಂಡರ್ ಪ್ರಕ್ರಿಯೆ ಮುಗಿಯಲು ಇನ್ನೂ ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ. ಆದರೆ, Calendar of events ಪ್ರಕಾರ 2021-22ನೇ ಸಾಲಿನ 1, 3 ಹಾಗೂ 5ನೇ ಸೆಮಿಸ್ಟರ್‌ಗಳ ಪರೀಕ್ಷೆಗಳನ್ನು ಫೆಬ್ರವರಿ-ಮಾರ್ಚ್ ತಿಂಗಳಿನಲ್ಲಿ ನಡೆಸಬೇಕಾಗಿರುತ್ತದೆ. ಈ ಕುರಿತು ಈಗಾಗಲೇ ಪರೀಕ್ಷೆಗಳ ಅಧಿಸೂಚನೆಗಳನ್ನು ಹೊರಡಿಸಲಾಗಿದೆ ಈ ಪರೀಕ್ಷೆಗಳಿಗೆ ಅಗತ್ಯವಾದ ಪ್ರಮಾಣದಲ್ಲಿ ಉತ್ತರ ಪತ್ರಿಕೆಗಳು ಲಭ್ಯವಿರುವುದಿಲ್ಲ. ಆದರಿಂದ ಈ ಹಿಂದಿನ ಒಡಂಬಡಿಕೆ ಪ್ರಕಾರ ಮೆ: ಜೆಮಿನಿ ಗ್ರಾಫಿಕ್ಸ್, ಬೀದರ್ ಇವರಿಂದ ಈ ಹಿಂದಿನ ದರವನ್ನೇ ಅನ್ವಯಿಸಿ ಒಟ್ಟು 3.5 ಲಕ್ಷ ಉತ್ತರ ಪತ್ರಿಕೆಗಳನ್ನು ಖರೀದಿಸಲು ಸಿಂಡಿಕೇಟ್ ಸಭೆಯ ಅನುಮೋದನೆ ಕೋರಲಾಗಿದೆ.

**<u>ತೀರ್ಮಾನ</u>**

ಸದರಿ ವಿಷಯವಾಗಿ ಸುದೀರ್ಘವಾಗಿ ಚರ್ಚಿಸಿದ ಸಭೆಯು, ಟೆಂಡರ್‌ನ ಮೂರನೇ ಕರೆಯನ್ನು ಪ್ರಕಟಿಸಬೇಕಾದ ಅನಿವಾರ್ಯತೆ ಮತ್ತು ಟೆಂಡರ್ ಪ್ರಕ್ರಿಯೆ ಮುಗಿಯಲು ಇನ್ನೂ ಸಾಕಷ್ಟು ಸಮಯ ತೆಗೆದುಕೊಳ್ಳುವ ಹಿನ್ನೆಲೆಯಲ್ಲಿ 2021-22ನೇ ಸಾಲಿನ 1, 3 ಹಾಗೂ 5ನೇ ಸೆಮಿಸ್ಟರ್‌ಗಳ ಪರೀಕ್ಷೆಗಳನ್ನು ಫೆಬ್ರವರಿ-ಮಾರ್ಚ್ ತಿಂಗಳಿನಲ್ಲಿ ಶುರು ಮಾಡಬೇಕಾದ ಕಾರಣ ಮೆ: ಜೆಮಿನಿ ಗ್ರಾಫಿಕ್ಸ್, ಬೀದರ್ ಇವರಿಂದ ಈ ಹಿಂದಿನ ದರವನ್ನೇ ಅನ್ವಯಿಸಿ ಒಟ್ಟು 3.5 ಲಕ್ಷಗಳಿಗೆ ಮೀರದಂತೆ ಅಗತ್ಯ ಸಂಖ್ಯೆಯಲ್ಲಿ ಉತ್ತರ ಪತ್ರಿಕೆಗಳನ್ನು ಖರೀದಿಸಲು ಸಭೆಯು ಅನುಮೋದಿಸಿದೆ.

**➲ ಐಟಂ ನಂ. 06**

ವಿಷಯ:- ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಎಸ್ಟೇಟ್ ಸಲಹಾ ಮಂಡಳಿಯ ಸದಸ್ಯರಲ್ಲಿ ಒಬ್ಬರಾದ ಮುಖ್ಯ ಇಂಜಿನೀಯರ್ ಅಥವಾ ಅವರ ನಾಮಿನಿ ಸಿ & ಬಿ, ಬೆಂಗಳೂರು ಇವರ ಸದಸ್ಯತ್ವದ ಪದನಾಮ ಬದಲಾವಣೆ ಕುರಿತು.

ಉಲ್ಲೇಖ:-1) Vijayanagara Sri Krishnadevaraya University Statute Governing Estate Advisory Board framed under section 37(1) of KSU ACT, 2000,

2) ಸರ್ಕಾರದ ಆದೇಶ ಸಂಖ್ಯೆ: ಲೋಇ 702 ಸೇ ಸ ಎ 2014 ಬೆಂಗಳೂರು ದಿನಾಂಕ: 08.01.2016,

****

ಉಲ್ಲೇಖ-01 ರ ವಿಶ್ವವಿದ್ಯಾಲಯದ ಎಸ್ಟೇಟ್ ಸಲಹಾ ಮಂಡಳಿಯ Statute ಅನ್ವಯ ಮುಖ್ಯ ಇಂಜಿನೀಯರ್ ಅಥವಾ ಅವರ ನಾಮಿನಿ ಸಿ & ಬಿ, ಬೆಂಗಳೂರು ಇವರು ಸದಸ್ಯರಾಗಿರುತ್ತಾರೆ. ಉಲ್ಲೇಖ -02ರ ಸರ್ಕಾರದ ಆದೇಶದಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಮುಖ್ಯ ಇಂಜಿನೀಯರ್ ಸಿ & ಬಿ, ಬೆಂಗಳೂರು(ದ), ಧಾರವಾಡ(ಉ) ಮತ್ತು ಕಲಬುರಗಿ(ಈ) ಹುದ್ದೆಗಳನ್ನು ಸೃಷ್ಟಿಸಿ ವಿಭಜನೆಗೊಳಿಸಲಾಗಿದೆ. ಇದರನ್ವಯ ಅಧೀಕ್ಷಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ಬಳ್ಳಾರಿ ವೃತ್ತ ಅಧೀನದಲ್ಲಿ ಬರುವ ಎಲ್ಲಾ ಲೋಕೋಪಯೋಗಿ ಕಛೇರಿಗಳನ್ನು ಮುಖ್ಯ ಇಂಜಿನೀಯರ್ ಸಿ & ಬಿ, ಕಲಬುರಗಿ(ಈ) ರವರ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸಲು ಆದೇಶಿಸಲಾಗಿರುತ್ತದೆ.

ವಿಶ್ವವಿದ್ಯಾಲಯದ ಎಸ್ಟೇಟ್ ಸಲಹಾ ಮಂಡಳಿಯ Statute ಅನ್ವಯ ಮುಖ್ಯ ಇಂಜಿನೀಯರ್ ಅಥವಾ ಅವರ ನಾಮಿನಿ ಸಿ & ಬಿ, ಬೆಂಗಳೂರು ರವರ ಬದಲಾಗಿ ಮುಖ್ಯ ಇಂಜಿನೀಯರ್ ಅಥವಾ ಅವರ ನಾಮಿನಿ ಸಿ & ಬಿ, ಕಲಬುರಗಿ (ಈ) ಇವರನ್ನು ಪರಿಗಣಿಸಬೇಕಾಗಿರುತ್ತದೆ.

ಕಾರಣ, ವಿಶ್ವವಿದ್ಯಾಲಯದ ಎಸ್ಟೇಟ್ ಸಲಹಾ ಮಂಡಳಿಯನ್ವಯ ಮುಖ್ಯ ಇಂಜಿನೀಯರ್ ಅಥವಾ ಇವರ ನಾಮಿನಿ ಸಿ & ಬಿ, ಕಲಬುರಗಿ (ಈ) ಸದಸ್ಯರಾಗುವುದರಿಂದ ಇವರ ನಾಮಿನಿಯಾಗಿ ಕಾರ್ಯಪಾಲಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ಬಳ್ಳಾರಿ ವಿಭಾಗ, ಬಳ್ಳಾರಿ ಇವರನ್ನು ಎಸ್ಟೇಟ್ ಸಲಹಾ ಮಂಡಳಿಯಲ್ಲಿ ಭಾಗವಹಿಸಲು ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

## ತೀರ್ಮಾನ

ಸದರಿ ವಿಷಯವಾಗಿ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಎಸ್ಟೇಟ್ ಸಲಹಾ ಮಂಡಳಿಯ Statute ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ಮುಖ್ಯ ಇಂಜಿನೀಯರ್ ಸಿ & ಬಿ, ಬೆಂಗಳೂರು (ದ), ಧಾರವಾಡ(ಉ) ಮತ್ತು ಕಲಬುರಗಿ(ಈ) ಹುದ್ದೆಗಳನ್ನು ಸೃಷ್ಟಿಸಿ ವಿಭಜನೆಗೊಳಿಸಲಾಗಿದೆ. ಇದರನ್ವಯ ಅಧೀಕ್ಷಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ಬಳ್ಳಾರಿ ವೃತ್ತ ಅಧೀನದಲ್ಲಿ ಬರುವ ಎಲ್ಲಾ ಲೋಕೋಪಯೋಗಿ ಕಛೇರಿಗಳನ್ನು ಮುಖ್ಯ ಇಂಜಿನೀಯರ್ ಸಿ & ಬಿ, ಕಲಬುರಗಿ(ಈ) ರವರ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸಲು ಹೊರಡಿಸಿರುವ ಆದೇಶವನ್ನು ಗಮನಿಸಿದ ಸಭೆಯು, ಮುಖ್ಯ ಇಂಜಿನೀಯರ್ ಅಥವಾ ಇವರ ನಾಮಿನಿ ಸಿ & ಬಿ, ಕಲಬುರಗಿ(ಈ) ಸದಸ್ಯರಾಗುವುದರಿಂದ ಇವರ ನಾಮಿನಿಯಾಗಿ ಕಾರ್ಯಪಾಲಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ಬಳ್ಳಾರಿ ವಿಭಾಗ, ಬಳ್ಳಾರಿ ಇವರನ್ನು ಎಸ್ಟೇಟ್ ಸಲಹಾ ಮಂಡಳಿಯಲ್ಲಿ ಸದಸ್ಯರನ್ನಾಗಿ ನಾಮ ನಿರ್ದೇಶನಗೊಳಿಸಲು ಸಭೆಯು ಅನುಮೋದಿಸಿದೆ.

➲ ಐಟಂ ನಂ. 07

ವಿಷಯ: ಶ್ರೀಕೃಷ್ಣದೇವರಾಯ ಸಂಶೋಧನೆ ಮತ್ತು ಅಧ್ಯಯನ ಪೀಠ ಸ್ಥಾಪನೆ ಕುರಿತು.
ಉಲ್ಲೇಖ: ದಿನಾಂಕ 22.09.2021 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ 05

******

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯಲ್ಲಿ ಶ್ರೀಕೃಷ್ಣದೇವರಾಯ ಸಂಶೋಧನೆ ಮತ್ತು ಅಧ್ಯಯನ ಪೀಠ ಸ್ಥಾಪನೆ ಪ್ರಸ್ತಾವನೆಯ ಕುರಿತು ಶ್ರೀಕೃಷ್ಣದೇವರಾಯ ಸಂಶೋಧನೆ ಮತ್ತು ಅಧ್ಯಯನ ಪೀಠ ಸ್ಥಾಪನೆ ದಿನಾಂಕ 22.09.2021 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ 05 ರ ಸದರಿ ಅಧ್ಯಯನ ಕೇಂದ್ರ ಸ್ಥಾಪನೆಗಾಗಿ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಆರಂಭಿಕ ಮೊತ್ತ ರೂ. 50.00 ಲಕ್ಷಗಳನ್ನು ಸ್ಥಿರ ಠೇವಣಿಯನ್ನಾಗಿಸಿ (Fixed Deposit) ಸದರಿ ಠೇವಣಿಯಿಂದ ಲಭಿಸಿದ ಬಡ್ಡಿ ಮೊತ್ತವನ್ನು ಮಾತ್ರ ಬಳಕೆ ಮಾಡಲು ಹಾಗೂ ಇನ್ನೂ ಹೆಚ್ಚಿನ ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

## ತೀರ್ಮಾನ

ದಿನಾಂಕ 22.09.2021 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ಐಟಂ ಸಂಖ್ಯೆ 05ರಲ್ಲಿ ಶ್ರೀಕೃಷ್ಣದೇವರಾಯ ಸಂಶೋಧನೆ ಮತ್ತು ಅಧ್ಯಯನ ಪೀಠ ಪ್ರಾಂಭಿಸಲು ಸಭೆಯು ನಿರ್ಣಯಿಸಿತ್ತು, ಅಧ್ಯಯನ ಕೇಂದ್ರ ಸ್ಥಾಪನೆಗಾಗಿ ಇನ್ನೂ ಹೆಚ್ಚಿನ ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಸಂಬಂಧ ಸುದೀರ್ಘವಾಗಿ ಚರ್ಚಿಸಿದ ಸಭೆಯು, ಹೆಚ್ಚಿನ ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ಅನುಮೋದಿಸಿತು. ಮುಂದುವರೆದು, ಸದರಿ ಶ್ರೀಕೃಷ್ಣದೇವರಾಯ ಸಂಶೋಧನೆ ಮತ್ತು ಅಧ್ಯಯನ ಪೀಠದ ಬದಲಾಗಿ ವಿಜಯನಗರ ಸಾಮ್ರಾಜ್ಯದ ಕುರಿತು ಬಹು ಆಯಾಮದ ಅಧ್ಯಯನ ಕೇಂದ್ರ (Establishment of Center for Multi-dimensional studies on Vijayanagara Empire) ಎಂಬ ಹೆಸರಿನಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸಲು ಸಭೆಯು ನಿರ್ಧರಿಸಿದೆ.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105

ಕುಲಸಚಿವರು


ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2022–23/**239** ದಿನಾಂಕ: 30.04.2022

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ 26.03.2022 ರಂದು ಮಧ್ಯಾಹ್ನ 01:00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 01.04.2022

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ 26.03.2022 ರಂದು ಮಧ್ಯಾಹ್ನ 01:00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 26.03.2022 ರಂದು ಮಧ್ಯಾಹ್ನ 01:00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿ

### ➲ ಐಟಂ ನಂ. 01:

**ವಿಷಯ:–** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂಶೋಧನಾ ವಿದ್ಯಾರ್ಥಿಗಳಿಗಾಗಿ ಲ್ಯಾಪಟಾಪ್‌ಗಳನ್ನು ಖರೀದಿಸಿರುವ ವಿಷಯವನ್ನು ಅನುಸಮರ್ಥಿಸುವ ಕುರಿತು.

**ಉಲ್ಲೇಖ:–** 1. ಖರೀದಿ ಸಮಿತಿ ಸಭೆಯ ದಿ 30.1.2020 ನಿರ್ಣಯ ಸಂಖ್ಯೆ 05

2. ಸಾಮಾನ್ಯ ಸಿಂಡಿಕೇಟ್ ಸಭೆಯ ದಿನಾಂಕ: 04.02.2020 ನಿರ್ಣಯ ಸಂಖ್ಯೆ: 17 ಮತ್ತು 18

3. ಖರೀದಿ ಸಮಿತಿ ಸಭೆಯ ದಿನಾಂಕ 16.02.2022 ನಿರ್ಣಯ ಸಂಖ್ಯೆ 02

*****

2018–19ನೇ ಸಾಲಿನ 11 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪಿಎಚ್.ಡಿ ಸಂಶೋಧನಾರ್ಥಿಗಳಿಗೆ ಹಾಗೂ 2020–21ನೇ ಸಾಲಿನಲ್ಲಿ ವಿವಿಧ ವಿಭಾಗಗಳಿಗೆ ಪ್ರವೇಶಾತಿ ಪಡೆದ 39 ಒಟ್ಟು 50 ಸಂಶೋಧನಾರ್ಥಿಗಳಿಗೆ 2021–22ನೇ ಸಾಲಿನ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ ಲ್ಯಾಪ್‌ಟಾಪ್‌ಗಳನ್ನು KTPP ಕಾಯ್ದೆಯನ್ವಯ GEM ಮೂಲಕ ಖರೀದಿಸಿದೆ. ಈಗಾಗಲೇ 11 ಲ್ಯಾಪ್‌ಟಾಪ್‌ಗಳಿಗೆ ಉಲ್ಲೇಖ–01 & 02ರನ್ವಯ ಖರೀದಿ ಸಮಿತಿ ಮತ್ತು ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯಲಾಗಿದೆ. ಬಾಕಿ ಉಳಿದ 39 ಲ್ಯಾಪ್‌ಟಾಪ್‌ಗಳನ್ನು ಖರೀದಿಸಲು ಉಲ್ಲೇಖ–03ರನ್ವಯ ಖರೀದಿ ಸಮಿತಿಯ ಸಭೆಯ ಅನುಮೋದನೆ ಪಡೆದಿದ್ದು, GEMನ ಫೈನಾನ್ಸಿಯಲ್ ಬಿಡ್‌ನಲ್ಲಿ ಅತ್ಯಂತ ಕಡಿಮೆ ಮೊತ್ತವನ್ನು ಸೂಚಿಸಿರುವ L1 ಬಿಡ್‌ದಾರರಿಗೆ ಸರಬರಾಜು ಆದೇಶವನ್ನು ನೀಡಲು ಖರೀದಿ ಸಮಿತಿ ಸಭೆಯು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

### <u>ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನ</u>

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ, ಎಸ್‌ಸಿಪಿ ಟಿಎಸ್‌ಪಿ ಯೋಜನೆಯಡಿಯಲ್ಲಿ ಲ್ಯಾಪ್‌ಟಾಪ್‌ಗಳನ್ನು Gem ಮೂಲಕ ಖರೀದಿಗೆ ಪ್ರಕ್ರಿಯೆ ಶುರು ಮಾಡಲಾಗಿದ್ದು, ಬಾಕಿ ಉಳಿದ 39 ಲ್ಯಾಪ್‌ಟಾಪ್‌ಗಳಿಗೆ ಖರೀದಿಸಲು ಖರೀದಿ ಸಮಿತಿ ಸಭೆಯು ಒಪ್ಪಿಗೆ ಸೂಚಿಸಿದ್ದು, GEMನ ಫೈನಾನ್ಸಿಯಲ್ ಬಿಡ್‌ನಲ್ಲಿ ಅತ್ಯಂತ ಕಡಿಮೆ ಮೊತ್ತವನ್ನು ಸೂಚಿಸಿರುವ L1 ಬಿಡ್‌ದಾರರಾದ M/s. RLAN TECHNOLOGIES ಇವರಿಗೆ ಸರಬರಾಜು ಆದೇಶವನ್ನು ನೀಡಲು ಖರೀದಿ ಸಮಿತಿ ಸಭೆಯು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಅನುಮೋದನೆ ನೀಡಿದೆ.

**ಸಿಂಡಿಕೇಟ್ ಸಭೆಯ ತೀರ್ಮಾನ**

ಎಸ್‌ಸಿಪಿ ಟಿಎಸ್‌ಪಿ ಯೋಜನೆಯಡಿಯಲ್ಲಿ 2018-19 & 2019-20ನೇ ಶೈಕ್ಷಣಿಕ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ 11 ಸಂಖ್ಯೆ ಸಂಶೋಧನಾ ವಿದ್ಯಾರ್ಥಿಗಳಿಗೆ, 2020-21ನೇ ಸಾಲಿನ 39 ಸಂಖ್ಯೆ ಸಂಶೋಧನಾ ವಿದ್ಯಾರ್ಥಿಗಳಿಗೆ ಹೀಗೆ ಒಟ್ಟು 50 ಸಂಖ್ಯೆ ಲ್ಯಾಪಟಾಪ್‌ಗಳನ್ನು ಖರೀದಿಸುತ್ತಿದ್ದು, 11 ಲ್ಯಾಪಟಾಪ್‌ಗಳ ಖರೀದಿಗೆ ಈ ಹಿಂದಿನ ಖರೀದಿ ಮತ್ತು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದಿದ್ದು, ಬಾಕಿ ಉಳಿದ 39 ಲ್ಯಾಪ್‌ಟಾಪ್‌ಗಳನ್ನು ಖರೀದಿಸಲು ಖರೀದಿ ಸಮಿತಿ ಸಭೆಯು ಒಪ್ಪಿಗೆ ಸೂಚಿಸಿದ್ದು, GEMನ ಫೈನಾನ್ಸಿಯಲ್ ಬಿಡ್‌ನಲ್ಲಿ ಅತ್ಯಂತ ಕಡಿಮೆ ಮೊತ್ತವನ್ನು ಸೂಚಿಸಿರುವ L1 ಬಿಡ್‌ದಾರರಾದ M/s. RLAN TECHNOLOGIES ಇವರಿಗೆ ಸರಬರಾಜು ಆದೇಶವನ್ನು ನೀಡಲು ಖರೀದಿ ಸಮಿತಿ ಸಭೆಯು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಅನುಮೋದನೆ ನೀಡಿರುವ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿದೆ. ಮುಂದುವರೆದು, ಸದರಿ ಬಿಡ್‌ದಾರರಿಗೆ ಒಟ್ಟು 50 ಸಂಖ್ಯೆ ಲ್ಯಾಪಟಾಪ್‌ಗಳ ಸರಬರಾಜು ಆದೇಶವನ್ನು ನೀಡಲು ಸಭೆಯು ತೀರ್ಮಾನಿಸಿದೆ.



ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105

ಕುಲಸಚಿವರು


ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2022–23/**240** ದಿನಾಂಕ: 30.04.2022

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ 30.03.2022 ರಂದು ಬೆಳಿಗ್ಗೆ 11:30 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 08.04.2022

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ 30.03.2022 ರಂದು ಬೆಳಿಗ್ಗೆ 11:30 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 30.03.2022 ರಂದು ಬೆಳಿಗ್ಗೆ 11:30 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ

### ➲ ಐಟಂ ನಂ. 01:

ದಿನಾಂಕ. 03.02.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮದ ವರದಿಯನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

**ತೀರ್ಮಾನ**

ದಿನಾಂಕ. 03.02.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮಗಳ ವರದಿಗಳನ್ನು ಸಭೆಯು ದೃಢೀಕರಿಸಿ ಅನುಮೋದಿಸಿದೆ. ಮುಂದುವರೆದು, ದಿನಾಂಕ 03.02.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನ ಸಂಖ್ಯೆ 07ರ ಕುರಿತು ಆಂತರಿಕ ಅಂಕಗಳಿಗೆ ಸಂಬಂಧಿಸಿದಂತೆ, ಸದರಿ ಮಹಾವಿದ್ಯಾಲಯಕ್ಕೆ ಕ್ರಮವಹಿಸುವಂತೆ ಪತ್ರವನ್ನು ಬರೆಯಲಾಗಿತ್ತು. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಈಗಾಗಲೇ ಫಲಿತಾಂಶದ ಪ್ರಕಟಿಸಿರುವುದನ್ನು ಸಭೆಯು ಅನುಸಮರ್ಥಿಸಿತು.

### ➲ ಐಟಂ ನಂ. 02:

ವಿಷಯ: ರಾಷ್ಟ್ರೀಯ ಸೇವಾ ಯೋಜನೆಯ ಹಣಕಾಸು ವ್ಯವಹಾರಕ್ಕಾಗಿ ಬ್ಯಾಂಕ್ ಖಾತೆ ತೆರೆದ ವಿಷಯ ಕುರಿತಾಗಿ ಅನುಸಮರ್ಥಿಸುವ ಬಗ್ಗೆ.

ಉಲ್ಲೇಖ:
1. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕೊಪ್ಪಳ ಇವರ ಮನವಿ ಪತ್ರ ಸಂಖ್ಯೆ: ವಿಶ್ರೀಕೃವಿ/ಸ್ನಾಕೆಕೊ/ಎನ್‌ಎಸ್‌ಎಸ್/ಮು.ಹ.ಮಂ/2021–22/8, ದಿನಾಂಕ: 28.01.2022.
2. ಕುಲಸಚಿವರ ಆದೇಶ ಪತ್ರ ಸಂಖ್ಯೆ:ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ ರಾ.ಸೇ.ಯೋ./2021–22/2489, ದಿನಾಂಕ: 22.02.2022
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 21.02.2022.

*****

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ, ಕೊಪ್ಪಳದಲ್ಲಿ ಉಲ್ಲೇಖ–01ರ ಮನವಿಯಂತೆ ರಾಷ್ಟ್ರೀಯ ಸೇವಾ ಯೋಜನೆ ಘಟಕಕ್ಕೆ ಸಂಬಂಧಿಸಿದಂತೆ ಹಣಕಾಸಿನ ವ್ಯವಹಾರವನ್ನು ನಿರ್ವಹಿಸಲು ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕೊಪ್ಪಳ ಮತ್ತು ಕಾರ್ಯಕ್ರಮಾಧಿಕಾರಿಗಳು, ರಾಷ್ಟ್ರೀಯ ಸೇವಾ ಯೋಜನಾ ಘಟಕ, ಕೊಪ್ಪಳ ಇವರ ಹೆಸರಿನಲ್ಲಿ ಜಂಟಿ ಖಾತೆಯನ್ನು (Joint Account) ತೆರೆಯಲು ಉಲ್ಲೇಖ–02ರನ್ವಯ ಅನುಮತಿ ನೀಡಲಾಗಿರುತ್ತದೆ. ಇದನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ರಾಷ್ಟ್ರೀಯ ಸೇವಾ ಯೋಜನೆ ಘಟಕದ ಹಣಕಾಸಿನ ವ್ಯವಹಾರವನ್ನು ನಿರ್ವಹಿಸಲು ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕೊಪ್ಪಳ ಮತ್ತು ಕಾರ್ಯಕ್ರಮಾಧಿಕಾರಿಗಳು, ರಾಷ್ಟ್ರೀಯ ಸೇವಾ ಯೋಜನಾ ಘಟಕ, ಕೊಪ್ಪಳ ಇವರ ಹೆಸರಿನಲ್ಲಿ ಜಂಟಿ ಖಾತೆಯನ್ನು (Joint Account) ತೆರೆಯಲು ಹೊರಡಿಸಿದ ಆದೇಶವನ್ನು ಅವಲೋಕಿಸಿ ಸಭೆಯು ಅನುಸಮರ್ಥಿಸಿದೆ.

➲ **ಐಟಂ ನಂ. 03:**

ವಿಷಯ: ವಿಶ್ವವಿದ್ಯಾಲಯದ ಕಾನೂನು ಸಲಹೆಯ ವಿಭಾಗದ ವಕೀಲರ ಪಟ್ಟಿಗೆ ನೂತನ ವಕೀಲರನ್ನು ಸೇರಿಸುವ ಕುರಿತು.

****

ಶ್ರೀ. ವಿಶ್ವನಾಥ ಹೆಗಡೆ, ವಕೀಲರು, ಧಾರವಾಡ ಇವರನ್ನು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಕಾನೂನು ಸಲಹೆಯ ವಿಭಾಗಕ್ಕೆ ನೂತನವಾಗಿ ವಿಶ್ವವಿದ್ಯಾಲಯದ ವಕೀಲರ ಪಟ್ಟಿಗೆ (Empanel of Advocates) ಸೇರಿಸಲಾಗಿದ್ದು, ಸದರಿ ವಿಷಯನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

**<u>ತೀರ್ಮಾನ</u>**

ವಿಶ್ವವಿದ್ಯಾಲಯದ ವಕೀಲರ ಪಟ್ಟಿಗೆ (Empanel of Advocates) ಶ್ರೀ. ವಿಶ್ವನಾಥ ಹೆಗಡೆ, ವಕೀಲರು, ಧಾರವಾಡ ಇವರನ್ನು ಸೇರಿಸಲು ಸಭೆಯು ಸದರಿಯವರ ಸ್ವವಿವರವನ್ನು ಅವಲೋಕಿಸಿ ವಿಶ್ವವಿದ್ಯಾಲಯದ ವಕೀಲರ ಪಟ್ಟಿಗೆ ಸೇರಿಸಿರುವುದನ್ನು ಸಭೆಯು ಅನುಸಮರ್ಥಿಸಿದೆ.

➲ **ಐಟಂ ನಂ. 04**

ವಿಷಯ: ಡೀನರ ನೇಮಕಾತಿಯನ್ನು ಸಿಂಡಿಕೇಟ್ ಸಭೆಯಲ್ಲಿ ಅನುಸಮರ್ಥಿಸುವ ಕುರಿತು.
ಉಲ್ಲೇಖ: 1. ಈ ಕಛೇರಿ ಅಧಿಸೂಚನೆ ಸಂಖ್ಯೆ: ವಿಶ್ರೀಕೃವಿಬ/ಡಿಪಿಎಆರ್–ಭೋಧಕ/ಡೀ.ನೇ/ 2021–22/2716 ದಿನಾಂಕ: 14.03.2022
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 14.03.2022

***

ಡಾ. ಅನಂತ ಎಲ್. ಝುಂಡೇಕರ್, ಸಹ ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ಇವರನ್ನು ದಿನಾಂಕ: 04.03.2022 ರಿಂದ ಅನ್ವಯಿಸಿ 02 ವರ್ಷಗಳ ಅವಧಿಗೆ ಸಮಾಜ ವಿಜ್ಞಾನ ನಿಕಾಯದ ಡೀನರನ್ನಾಗಿ ಮತ್ತು ಇದರ ಜೊತೆಗೆ ಹೆಚ್ಚುವರಿಯಾಗಿ ಕಾನೂನು ನಿಕಾಯದ ಡೀನರ ಜವಾಬ್ದಾರಿಯನ್ನು ನಿರ್ವಹಿಸಲು ಸೂಚಿಸಿ ನೇಮಕ ಮಾಡಿದ ಉಲ್ಲೇಖಿತ ಅಧಿಸೂಚನೆ ಹೊರಡಿಸಿದ್ದು, ಸದರಿ ನೇಮಕಾತಿಯನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

**<u>ತೀರ್ಮಾನ</u>**

ಡಾ. ಅನಂತ ಎಲ್. ಝುಂಡೇಕರ್, ಸಹ ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ಇವರನ್ನು ದಿನಾಂಕ: 04.03.2022 ರಿಂದ ಅನ್ವಯಿಸಿ 02 ವರ್ಷಗಳ ಅವಧಿಗೆ ಸಮಾಜ ವಿಜ್ಞಾನ ನಿಕಾಯದ ಡೀನರನ್ನಾಗಿ ಮತ್ತು ಇದರ ಜೊತೆಗೆ ಹೆಚ್ಚುವರಿಯಾಗಿ ಕಾನೂನು ನಿಕಾಯದ ಡೀನರ ಜವಾಬ್ದಾರಿಯನ್ನು ನಿರ್ವಹಿಸಲು ಸೂಚಿಸಿ ನೇಮಕ ಮಾಡಿ ಹೊರಡಿಸಿದ ಆದೇಶವನ್ನು ಸಭೆಯು ಅನುಸಮರ್ಥಿಸಿದೆ.

➲ **ಐಟಂ ನಂ. 05**

ವಿಷಯ: ಶ್ರೀಮತಿ ಕಮಲಮ್ಮ, ಇವರಿಗೆ ಅನುಕಂಪ ಆಧಾರದ ಮೇಲೆ ಅನುಚರ ಹುದ್ದೆಯನ್ನು ನೀಡಿರುವ ವಿಷಯವನ್ನು ಅನುಸಮರ್ಥಿಸುವ ಕುರಿತು.
ಉಲ್ಲೇಖ: ಈ ಕಛೇರಿ ಆದೇಶ ಪತ್ರ ಸಂಖ್ಯೆ: ವಿಶ್ರೀಕೃವಿಬ/ಆಡಳಿತ/ಡಿಪಿಎಆರ್– ಬೋಧಕೇತರ/ 2021–22/2574 ದಿನಾಂಕ: 03.03.2022

***

ದಿ: ರಾಜೇಶ್.ಟಿ, ಅನುಚರ ಇವರು ದಿನಾಂಕ: 08.09.2020 ರಂದು ಮರಣ ಹೊಂದಿರುವ ಹಿನ್ನೆಲೆಯಲ್ಲಿ ಅವರ ಹೆಂಡತಿಯಾದ ಶ್ರೀಮತಿ ಕಮಲಮ್ಮ ಇವರಿಗೆ ಉಲ್ಲೇಖದನ್ವಯ ಅನುಕಂಪ ಆಧಾರದ ಮೇಲೆ ಅನುಚರ ಹುದ್ದೆಯನ್ನು ನೀಡಲಾಗಿದ್ದು, ಸದರಿಯವರು ದಿನಾಂಕ: 03.03.2022ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಕಾರಣ ಸದರಿಯವರಿಗೆ ಅನುಚರ ಹುದ್ದೆ ನೀಡಿರುವುದನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

**<u>ತೀರ್ಮಾನ</u>**

ಶ್ರೀಮತಿ ಕಮಲಮ್ಮ ಇವರಿಗೆ ಅನುಕಂಪ ಆಧಾರದ ಮೇಲೆ ಅನುಚರ ಹುದ್ದೆಯನ್ನು ನೀಡಲಾದ ವಿಷಯದ ಕುರಿತು ಚರ್ಚಿಸಿದ ಸಭೆಯು ಸದರಿ ಆದೇಶವನ್ನು ಅನುಸಮರ್ಥಿಸಿದೆ.

### ➲ ಐಟಂ ನಂ. 06

ವಿಷಯ: ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳ ಬೋಧಕ ಸಿಬ್ಬಂದಿಗಳಿಗೆ ಯುಜಿಸಿಯ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ನೀಡುವ ಕುರಿತು.

*****

ದಿನಾಂಕ 03.02.2021ರ ಸಿಂಡಿಕೇಟ್ ಸಭೆಯಲ್ಲಿ ಮುಂದೂಡಲಾಗಿದ್ದ ವಿಶ್ವವಿದ್ಯಾಲಯದ ನಿರ್ವಹಣಾಶಾಸ್ತ್ರ ಮತ್ತು ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ.ಯ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ವಿಷಯ ಸಂಬಂಧ ಸದರಿ ವಿಭಾಗಗಳ ಸ್ಕ್ರೀನಿಂಗ್-ಕಮ್-ಮೌಲ್ಯಮಾಪನ ಸಮಿತಿಯು ಯು.ಜಿ.ಸಿ ಹಾಗೂ ಸರ್ಕಾರದ ನಿಯಮಗಳಂತೆ ನಿರ್ವಹಣಾಶಾಸ್ತ್ರ ಮತ್ತು ರಾಜ್ಯಶಾಸ್ತ್ರ ಅಧ್ಯಯನ ವಿಭಾಗಗಳ ಸ್ಕ್ರೀನಿಂಗ್-ಕಮ್-ಮೌಲ್ಯಮಾಪನ ನಡೆಸಿ ವಿಭಾಗದ ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸಿದ್ದು, ಸದರಿ ಪಟ್ಟಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮರು ಮಂಡಿಸಿದೆ.

**<u>ತೀರ್ಮಾನ</u>**

ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ, ಮತ್ತು ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗಗಳ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ.ಯ ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿಗಾಗಿ ರಚಿಸಿದ ಸ್ಕ್ರೀನಿಂಗ್-ಕಮ್-ಮೌಲ್ಯಮಾಪನ ಸಮಿತಿಗಳು ಸಲ್ಲಿಸಿದ ನಡಾವಳಿಯನ್ನು ಸಭೆಯು ಈ ಕೆಳಕಂಡಂತೆ ಅನುಮೋದಿಸಿತು. ಮುಂದುವರೆದು, ಸದರಿ ಪ್ರಯೋಜನಗಳನ್ನು ಸಿಂಡಿಕೇಟ್ ಸಭೆಯ ದಿನಾಂಕದಿಂದ ಅನ್ವಯಿಸಿ ಪಡೆಯಬಹುದಾಗಿದೆ.

| ಕ್ರಸಂ | ಅಧ್ಯಾಪಕರ ಹೆಸರು | ವೃತ್ತಿ ಪದೋನ್ನತಿ ಹಂತ | ಸಮಿತಿಯು ಶಿಫಾರಸು ಮಾಡಿದ ಬಡ್ತಿ ದಿನಾಂಕ | ತೀರ್ಮಾನ |
|---|---|---|---|---|
| ರಾಜ್ಯಶಾಸ್ತ್ರ | | | | Recommendations of the Screening cum evaluation committee's is approved. (ವಿಭಾಗವಾರು ಸ್ಕ್ರೀನಿಂಗ್-ಕಮ್-ಮೌಲ್ಯಮಾಪನ ಸಮಿತಿಗಳು ಸಲ್ಲಿಸಿದ ಶಿಫಾರಸ್ಸುಗಳನ್ನು ಸಭೆಯು ಅನುಮೋದಿಸಿದೆ.) |
| 01 | ಡಾ. ಮೋಹನ್ ದಾಸ್ ಕೆ. | AGP 7,000 (Level 11) - AGP 8,000 (Level 12) | 07.12.2021 | |
| ನಿರ್ವಹಣಾಶಾಸ್ತ್ರ | | | | |
| 01 | ಶ್ರೀ. ಸುನೀಲ್ ಕುಮಾರ ಎಂ.ಎಸ್. | AGP 7,000 (Level 11) - AGP 8,000 (Level 12) | 20.12.2021 | |
| 02 | ಡಾ. ಅರುಣಕುಮಾರ ಜಿ. | AGP 7,000 (Level 11) - AGP 8,000 (Level 12) | 25.10.2020 | |
| 03 | ಡಾ. ರವಿನಾರಾಯಣ ಕೆ.ಎಸ್. | AGP 7,000 (Level 11) - AGP 8,000 (Level 12) | 16.10.2021 | |

### ➲ ಐಟಂ ನಂ. 07

ವಿಷಯ: ಡಾ. ಬಸವರಾಜ ಎಸ್ ಬೆಣ್ಣಿ ಇವರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿರುವುದನ್ನು ಸಿಂಡಿಕೇಟ್ ಸಭೆಯಲ್ಲಿ ಅನುಸಮರ್ಥಿಸುವ ಕುರಿತು.

ಉಲ್ಲೇಖ: 1. ಈ ಕಛೇರಿ ಅಧಿಸೂಚನೆ ಸಂಖ್ಯೆ: ವಿಶ್ರೀಕೃವಿಬ/ಡಿಪಿಎಆರ್-ಬೋಧಕ/ಬಿ.ಆ/ 2021-22/2569 ದಿನಾಂಕ: 03.03.2022

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 02.03.2022

***

ಕರ್ನಾಟಕ ಸರ್ಕಾರದ ಆದೇಶದನ್ವಯ ಡಾ. ಬಸವರಾಜ್ ಎಸ್. ಬೆಣ್ಣಿ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ ಹಾಗೂ ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕೊಪ್ಪಳ ಇವರನ್ನು ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗಕ್ಕೆ ವರ್ಗಾವಣೆಗೊಳಿಸಿ ಹೊರಡಿಸಿರುವ ಬಿಡುಗಡೆಯ ಆದೇಶವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ. ಮುಂದುವರೆದು, ಸದರಿಯವರ ಸ್ಥಾನದಲ್ಲಿ ಮತ್ತೋರ್ವ ಸೂಕ್ತ ಪ್ರಾಧ್ಯಾಪಕರನ್ನು ನಿರ್ದೇಶಕರನ್ನಾಗಿ ನೇಮಿಸುವ ವಿಷಯವನ್ನು ಸಹ ಸಿಂಡಿಕೇಟ್ ಸಭೆಯ ತೀರ್ಮಾನಕ್ಕಾಗಿ ಸಲ್ಲಿಸಿದೆ.

**ತೀರ್ಮಾನ**

ಡಾ. ಬಸವರಾಜ್ ಎಸ್. ಬೆಣ್ಣಿ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ ಹಾಗೂ ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕೊಪ್ಪಳ ಇವರನ್ನು ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗಕ್ಕೆ ವರ್ಗಾವಣೆ ಸಂಬಂಧ ಹೊರಡಿಸಿದ ಬಿಡುಗಡೆ ಆದೇಶವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿದೆ. ಮುಂದುವರೆದು, ಸದರಿಯವರ ನಿರ್ದೇಶಕರ ಸ್ಥಾನಕ್ಕೆ ಸ್ನಾತಕೋತ್ತರ ಕೇಂದ್ರ, ಕೊಪ್ಪಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಲ್ಲಿ ಸಂಯೋಜಕರನ್ನು ನೇಮಿಸಲು ಮಾನ್ಯ ಕುಲಪತಿಗಳ ವಿವೇಚನೆಗೆ ಬಿಟ್ಟದ್ದು ಎಂದು ಸಭೆಯು ನಿರ್ಧರಿಸಿತು. ಇದನ್ನು ಎಲ್ಲಾ ಸದಸ್ಯರು ಸರ್ವಾನುಮತದಿಂದ ಒಪ್ಪಿದರು.

**➲ ಐಟಂ ನಂ. 08**

ವಿಷಯ: ಖರೀದಿ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

ಉಲ್ಲೇಖ: ದಿನಾಂಕ 16.02.2022 ರಂದು ಜರುಗಿದ ಖರೀದಿ ಸಲಹಾ ಸಮಿತಿ ಸಭೆ

*****

ವಿಶ್ವವಿದ್ಯಾಲಯದಲ್ಲಿ ದಿನಾಂಕ 16.02.2022 ರಂದು ಜರುಗಿದ ಖರೀದಿ ಸಲಹಾ ಸಮಿತಿ ಸಭೆಯು ಎಲ್ಲಾ ಕಾರ್ಯಸೂಚಿಗಳನ್ನು ಪರಿಶೀಲಿಸಿ ತೀರ್ಮಾನಿಸಿದ ನಡಾವಳಿಯನ್ನು ಸಲ್ಲಿಸಲಾಗಿದ್ದು, ಈ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ದಿನಾಂಕ 16.02.2022 ರಂದು ಜರುಗಿದ ಖರೀದಿ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಈ ಕೆಳಕಂಡಂತೆ ವಿಷಯವಾರು ದೃಢೀಕರಿಸಿ ಅನುಮೋದಿಸಿತು.

ವಿಷಯ: 01. ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹೊಸದಾಗಿ ನಿರ್ಮಿಸಿರುವ ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಸ್ನಾತಕೋತ್ತರ ವಸತಿ ನಿಲಯಗಳಿಗೆ ಅಗತ್ಯವಾದ Mattress ಮತ್ತು Pillowಗಳನ್ನು ಪೂರೈಸುವ ಕೆಲಸದ ಟೆಂಡರನ್ನು ಅನುಮೋದಿಸುವ ಕುರಿತು. ಅಂದಾಜು ವೆಚ್ಚ: ರೂ. 08,93,000.00 (ಮಾರುಕಟ್ಟೆ ದರಗಳನ್ವಯ ಜಿ.ಎಸ್.ಟಿ ಹಾಗೂ ಸಾಗಣೆ ವೆಚ್ಚ ಸೇರಿದಂತೆ)

**ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನ**

ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಸ್ನಾತಕೋತ್ತರ ವಸತಿ ನಿಲಯಗಳಿಗೆ ಅಗತ್ಯವಾದ Mattress ಮತ್ತು Pillowಗಳನ್ನು ಪೂರೈಸುವ ಕೆಲಸದ ಟೆಂಡರ್‌ನಲ್ಲಿ M/S Badiger's Classic Interiors Private Limited, Belgaum ಇವರ ಸಂಧಾನದ ನಂತರ ಇ–ತಂತ್ರಾಂಶದ ಮೂಲಕ Mattress ಗಳಿಗೆ ಸಂಧಾನದ ದರ ಪ್ರತಿಯೊಂದಕ್ಕೆ ರೂ.3150.00 ಮತ್ತು Pillowಗಳಿಗೆ ಸಂಧಾನದ ದರ ಪ್ರತಿಯೊಂದಕ್ಕೆ ರೂ.350.00 ನಮೂದಿಸಿ ದರಗಳನ್ನು ಪರಿಗಣಿಸಿ ಟೆಂಡರನ್ನು ಒಪ್ಪಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ಸ್ನಾತಕೋತ್ತರ ವಸತಿ ನಿಲಯಗಳಿಗೆ ಅಗತ್ಯವಾದ Mattress ಮತ್ತು Pillowಗಳನ್ನು ಪೂರೈಸುವ ಕೆಲಸದ ಟೆಂಡರ್‌ನಲ್ಲಿ M/S Badiger's Classic Interiors Private Limited, Belgaum ಇವರ ಸಂಧಾನದ ನಂತರ ಇ–ತಂತ್ರಾಂಶದ ಮೂಲಕ Mattressಗಳಿಗೆ ಸಂಧಾನದ ದರ ಪ್ರತಿಯೊಂದಕ್ಕೆ ರೂ.3150.00 ಮತ್ತು Pillowಗಳಿಗೆ ಸಂಧಾನದ ದರ ಪ್ರತಿಯೊಂದಕ್ಕೆ ರೂ.350.00 ನಮೂದಿಸಿ ದರಗಳನ್ನು ಪರಿಗಣಿಸಿ ಟೆಂಡರನ್ನು ಒಪ್ಪಿರುವ ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

ವಿಷಯ:–02. ಎಸ್‌ಸಿಪಿ & ಟಿಎಸ್‌ಪಿ ಯೋಜನೆಯಡಿಯಲ್ಲಿ ಲ್ಯಾಪ್‌ಟಾಪ್‌ಗಳನ್ನು ಖರೀದಿಸುವ ಕುರಿತು ಕುರಿತು

**ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನ**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ, ಎಸ್‌ಸಿಪಿ ಟಿಎಸ್‌ಪಿ ಯೋಜನೆಯಡಿಯಲ್ಲಿ ಲ್ಯಾಪ್‌ಟಾಪ್‌ಗಳನ್ನು Gem ಮೂಲಕ ಖರೀದಿಗೆ ಪ್ರಕ್ರಿಯೆ ಶುರು ಮಾಡಲಾಗಿದ್ದು, ಬಾಕಿ ಉಳಿದ 39 ಲ್ಯಾಪ್‌ಟಾಪ್‌ಗಳನ್ನು ಖರೀದಿಸಲು ಖರೀದಿ ಸಮಿತಿ ಸಭೆಯು ಒಪ್ಪಿಗೆ ಸೂಚಿಸಿದ್ದು, GEMನ ಫೈನಾನ್ಸಿಯಲ್ ಬಿಡ್‌ನಲ್ಲಿ ಅತ್ಯಂತ ಕಡಿಮೆ ಮೊತ್ತವನ್ನು ಸೂಚಿಸಿರುವ L1 ಬಿಡ್‌ದಾರರಾದ M/s. RLAN TECHNOLOGIES ಇವರಿಗೆ ಸರಬರಾಜು ಆದೇಶವನ್ನು ನೀಡಲು ಖರೀದಿ ಸಮಿತಿ ಸಭೆಯು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಅನುಮೋದನೆ ನೀಡಲು ಒಪ್ಪಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಎಸ್‌ಸಿಪಿ ಟಿಎಸ್‌ಪಿ ಯೋಜನೆಯಡಿಯಲ್ಲಿ 2018–19 & 2019–20ನೇ ಶೈಕ್ಷಣಿಕ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ 11 ಸಂಖ್ಯೆ ಸಂಶೋಧನಾ ವಿದ್ಯಾರ್ಥಿಗಳಿಗೆ, 2020–21ನೇ ಸಾಲಿನ 39 ಸಂಖ್ಯೆ ಸಂಶೋಧನಾ ವಿದ್ಯಾರ್ಥಿಗಳಿಗೆ ಹೀಗೆ ಒಟ್ಟು 50 ಸಂಖ್ಯೆ ಲ್ಯಾಪ್‌ಟಾಪ್‌ಗಳನ್ನು ಖರೀದಿಸುತ್ತಿದ್ದು, 11 ಲ್ಯಾಪ್‌ಟಾಪ್‌ಗಳ ಖರೀದಿಗೆ ಈ ಹಿಂದಿನ ಖರೀದಿ ಸಲಹಾ ಸಮಿತಿ ಮತ್ತು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದಿದ್ದು, ಬಾಕಿ ಉಳಿದ 39 ಲ್ಯಾಪ್‌ಟಾಪ್‌ಗಳನ್ನು ಖರೀದಿಸಲು ಖರೀದಿ ಸಮಿತಿ ಸಭೆಯು ಒಪ್ಪಿಗೆ ಸೂಚಿಸಿದ್ದು, GEMನ ಫೈನಾನ್ಸಿಯಲ್ ಬಿಡ್‌ನಲ್ಲಿ ಅತ್ಯಂತ ಕಡಿಮೆ ಮೊತ್ತವನ್ನು ಸೂಚಿಸಿರುವ L1 ಬಿಡ್‌ದಾರರಾದ M/s. RLAN TECHNOLOGIES ಇವರಿಗೆ ಸರಬರಾಜು ಆದೇಶವನ್ನು ನೀಡಲು ಖರೀದಿ ಸಮಿತಿ ಸಭೆಯು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಅನುಮೋದನೆ ನೀಡಿರುವ ತೀರ್ಮಾನವನ್ನು ದಿನಾಂಕ 26.03.2022 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಅನುಸಮರ್ಥಿಸಿ, L1 ಬಿಡ್‌ದಾರರಿಗೆ ಒಟ್ಟು 50 ಸಂಖ್ಯೆ ಲ್ಯಾಪಟಾಪ್‌ಗಳ ಸರಬರಾಜು ಆದೇಶವನ್ನು ನೀಡುವ ತೀರ್ಮಾನವನ್ನು ಈ ಸಿಂಡಿಕೇಟ್ ಸಭೆಯಲ್ಲಿಯೂ ಸಹ ಎಲ್ಲಾ ಸದಸ್ಯರ ಅವಗಾಹನೆಗೆ ತರಲಾಯಿತು.

**ಟೇಬಲ್ ಅಜೆಂಡಾ**

ವಿಷಯ:–01. Solar water heater for all SC/ST boys and girls Hostel.

**ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನ**

GEM (Government e-marketing) ಆನ್‌ಲೈನ್ ಮೂಲಕ ಅಥವಾ KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಖರೀದಿಸಲು ಆಡಳಿತಾತ್ಮಕ ಅನುಮೋದನೆ

ನೀಡಲಾಯಿತು ಹಾಗೂ ಸೋಲಾರ್ ವಾಟರ್ ಹೀಟರ್‌ಗಳ ನಿರ್ವಹಣೆಯನ್ನು Annual Maintenance Contract (AMC) ನೀಡಲು ಸೂಚಿಸಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

GEM (Government e-marketing) ಆನ್‌ಲೈನ್ ಮೂಲಕ ಅಥವಾ KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಖರೀದಿಸಲು ಆಡಳಿತಾತ್ಮಕ ಅನುಮೋದನೆ ಹಾಗೂ ಸೋಲಾರ್ ವಾಟರ್ ಹೀಟರ್‌ಗಳ ನಿರ್ವಹಣೆಯನ್ನು Annual Maintenance Contract (AMC) ನೀಡಲು ಸೂಚಿಸಿರುವ ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

ವಿಷಯ:–02. Ladies Hostel Sanitary Napkin Vending Machine and disposing Electrical Machine.

**ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನ**

GEM (Government e-marketing) ಆನ್‌ಲೈನ್ ಮೂಲಕ ಅಥವಾ KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ Sanitary Napkin Vending Machine and disposing Electrical Machineಗಳನ್ನು ಆದ್ಯತೆಗೆ ಅನುಗುಣವಾಗಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

GEM (Government e-marketing) ಆನ್‌ಲೈನ್ ಮೂಲಕ ಅಥವಾ KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ Sanitary Napkin Vending Machine and disposing Electrical Machineಗಳನ್ನು ಆದ್ಯತೆಗೆ ಅನುಗುಣವಾಗಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಿರುವ ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

ವಿಷಯ: 03. 2021–22ನೇ ವರ್ಷಕ್ಕೆ ವಿಶ್ವವಿದ್ಯಾಲಯದ ಕ್ರೀಡಾ ವಿಭಾಗಕ್ಕೆ ಬೇಕಾಗಿರುವ ಕ್ರೀಡಾ ಸಾಮಗ್ರಿಗಳನ್ನು ಖರೀದಿಸುವ ಕುರಿತು.

**ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನ**

GEM (Government e-marketing) ಆನ್‌ಲೈನ್ ಮೂಲಕ ಅಥವಾ KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಮೇಲೆ ತಿಳಿಸಿರುವ ಪಟ್ಟಿಯಲ್ಲಿರುವ ಕ್ರ.ಸಂ 1. Badminton Pole ಒಂದು ಜೊತೆಯನ್ನು, 2. Kabaddi Mat 14x17 mtr ನ ಒಂದು ಸೆಟ್, 3. Wrestling Mat 12x12 mtr ನ ಒಂದು ಸೆಟ್ ಮತ್ತು ಕ್ರ.ಸಂ. 6. Table Tennis Board ಎರಡು ಬೋರ್ಡ್‌ನ್ನು ಮಾತ್ರ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಹಾಗೂ ಕ್ರೀಡಾ ಸಾಮಗ್ರಿಗಳನ್ನು ಉಪಯೋಗಿಸಲು ಸೂಕ್ತ ದಾಖಾಲಾತಿಗಳೊಂದಿಗೆ ಮತ್ತು ತಾಂತ್ರಿಕವಾಗಿ ಸ್ಥಿರವಾಗಿರುವ ಮಾಹಿತಿಯೊಂದಿಗೆ ಸಲ್ಲಿಸಲು ನಿರ್ದೇಶಕರು ಕ್ರೀಡಾ ವಿಭಾಗ ಇವರಿಗೆ ಸೂಚಿಸಲಾಗಿದೆ.

**ಸಿಂಡಿಕೇಟ್ ಸಭೆಯ ತೀರ್ಮಾನ**

GEM (Government e-marketing) ಆನ್‌ಲೈನ್ ಮೂಲಕ ಅಥವಾ KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಮೇಲೆ ತಿಳಿಸಿರುವ ಪಟ್ಟಿಯಲ್ಲಿರುವ ಕ್ರ.ಸಂ 1. Badminton Pole ಒಂದು ಜೊತೆಯನ್ನು, 2. Kabaddi Mat 14x17 mtr ನ ಒಂದು ಸೆಟ್, 3. Wrestling Mat 12x12 mtr ನ ಒಂದು ಸೆಟ್ ಮತ್ತು ಕ್ರ.ಸಂ. 6. Table Tennis Board ಎರಡು ಬೋರ್ಡ್‌ನ್ನು ಮಾತ್ರ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಹಾಗೂ ಕ್ರೀಡಾ ಸಾಮಾಗ್ರಿಗಳನ್ನು ಉಪಯೋಗಿಸಲು ಸೂಕ್ತ ದಾಖಾಲಾತಿಗಳೊಂದಿಗೆ ಮತ್ತು ತಾಂತ್ರಿಕವಾಗಿ ಸ್ಥಿರವಾಗಿರುವ ಮಾಹಿತಿಯನ್ನು ನಿದೇರ್ಶಕರು ಕ್ರೀಡಾ ವಿಭಾಗ

ಇವರು ಸಲ್ಲಿಸುವಂತೆ ಸೂಚಿಸಿರುವ ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

➲ **ಐಟಂ ನಂ. 09**

ವಿಷಯ: ಸ್ನಾತಕ ಪದವಿ ಮಹಾವಿದ್ಯಾಲಯಗಳ ಪ್ರವೇಶಾತಿ ವ್ಯತ್ಯಾಸದ ಬಾಕಿ ಶುಲ್ಕ ಪರಿಶೀಲನಾ ಸಮಿತಿ ವರದಿ ಅನುಮೋದನೆ ಕುರಿತು.

******

ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಸ್ನಾತಕ ಪದವಿ ಮಹಾವಿದ್ಯಾಲಯಗಳ 2018–19 ರಿಂದ 2020–21ನೇ ಶೈಕ್ಷಣಿಕ ವರ್ಷಗಳ ಬಾಕಿ ಇರುವ ಪ್ರವೇಶಾತಿ ವ್ಯತ್ಯಾಸದ ಶುಲ್ಕವನ್ನು ಪರಿಶೀಲಿಸಲು ರಚಿಸಿದ ಸಮಿತಿಯು ಕಾರ್ಯಪ್ರವೃತ್ತಗೊಂಡು ದಿನಾಂಕ 08.02.2022 ರಂದು ಈ ಕುರಿತಾಗಿ ಸಭೆ ನಡೆಸಿ ಸದರಿ ಸಭೆಯ ನಡಾವಳಿಯನ್ನು ಸಲ್ಲಿಸಿದ್ದು, ನಡಾವಳಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಸ್ನಾತಕ ಪದವಿ ಮಹಾವಿದ್ಯಾಲಯಗಳ 2018–19 ರಿಂದ 2020–21ನೇ ಶೈಕ್ಷಣಿಕ ವರ್ಷಗಳ ಬಾಕಿ ಇರುವ ಪ್ರವೇಶಾತಿ ವ್ಯತ್ಯಾಸದ ಶುಲ್ಕ ಪರಿಶೀಲನಾ ಸಮಿತಿ ಸಭೆಯ ನಡಾವಳಿಯನ್ನು ಸಭೆಯು ಯಥಾವತ್ತಾಗಿ ಅನುಮೋದಿಸಿತು. ಮುಂದುವರೆದು, ಈ ಕುರಿತಾಗಿ ಶುಲ್ಕ ಪರಿಶೀಲನಾ ಸಮಿತಿಯ ಶಿಫಾರಸುಗಳಂತೆ ಶುಲ್ಕ ಬಾಕಿ ಉಳಿಸಿಕೊಂಡ ಎಲ್ಲಾ ಮಹಾವಿದ್ಯಾಲಯಗಳಿಗೆ ಪತ್ರ ಬರೆದು ಕಡ್ಡಾಯವಾಗಿ ಶುಲ್ಕ ಮರುಪಾವತಿ ಮಾಡಿಕೊಳ್ಳಲು ಮತ್ತು ಈ ಕುರಿತಾಗಿ ಯಾವುದೇ ಪತ್ರ ವ್ಯವಹಾರಕ್ಕೆ ಆಸ್ಪದ ನೀಡದಿರಲು ಸಭೆಯು ನಿರ್ಣಯಿಸಿತು.

➲ **ಐಟಂ ನಂ. 10**

ವಿಷಯ: ಬಿ.ಇಡಿ ಮಹಾವಿದ್ಯಾಲಯಗಳ ಶೈಕ್ಷಣಿಕ ಗುಣಮಟ್ಟ ಸುಧಾರಣಾ ಮಾರ್ಗಸೂಚಿ ಸಮಿತಿ ವರದಿ ಅನುಮೋದನೆ ಕುರಿತು.

****

ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯಗಳ ಶೈಕ್ಷಣಿಕ ಗುಣಮಟ್ಟ ಪರಿಶೀಲನೆಗೆ ಸಂಬಂಧಿಸಿದಂತೆ ಸಮಿತಿಯನ್ನು ರಚಿಸಲಾಗಿದ್ದು, ಸಮಿತಿಯು ದಿನಾಂಕ 21.03.2022 ರಂದು ಸದರಿ ವಿಷಯ ಕುರಿತಾಗಿ ಸಭೆಯನ್ನು ನಡೆಸಿ ಕೂಲಂಕುಷವಾಗಿ ಚರ್ಚಿಸಲಾದ ಶಿಫಾರಸ್ಸುಗಳ ಅಂತಿಮ ವರದಿಯನ್ನು ಸಲ್ಲಿಸಿದ್ದು, ಆ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯಗಳ ಶೈಕ್ಷಣಿಕ ಗುಣಮಟ್ಟ ಪರಿಶೀಲನಾ ಸಮಿತಿ ಸಲ್ಲಿಸಿದ ಮಾರ್ಗಸೂಚಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಸಭೆಯು, ಸದರಿ ಸಮಿತಿ ನೀಡಿರುವ ಶೈಕ್ಷಣಿಕ, ಆಡಳಿತಾತ್ಮಕ ಮತ್ತು ಪರೀಕ್ಷಾ ವಿಷಯಕ್ಕೆ ಸಂಬಂಧಿಸಿದಂತೆ ಶಿಫಾರಸುಗಳನ್ನು ಅಳವಡಿಸಿಕೊಳ್ಳಲು ಸರ್ವಾನುಮತದಿಂದ ಒಪ್ಪಿತು.

➲ **ಐಟಂ ನಂ. 11**

ವಿಷಯ: ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Clerk/Computer Operator/ Data Entry Operator/Lab Technician) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾವನೆಯನ್ನು ಮಂಡಿಸುವ ಕುರಿತು.

***

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Clerk/Computer Operator/ Data Entry Operator/Lab Technician) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ದಿನಾಂಕ: 27.12.2021 ರಂದು ಟೆಂಡರ್ ಅಧಿಸೂಚನೆ ಹೊರಡಿಸಿದ್ದು, ದಿನಾಂಕ: 28.01.2022 ರಂದು ತಾಂತ್ರಿಕ ಬಿಡ್ ತೆರೆಯಲಾಗಿ ಅದರಲ್ಲಿ 07 ಬಿಡ್‌ದಾರರು ಭಾಗವಹಿಸಿರುತ್ತಾರೆ. ದಿನಾಂಕ: 14.02.2022 ರಂದು ನಡೆದ ತಾಂತ್ರಿಕ ಬಿಡ್‌ಗೆ ಸಂಬಂಧಿಸಿದ ಈ ಟೆಂಡರ್ ಸಮಿತಿ ಸಭೆಯಲ್ಲಿ ಟೆಂಡರ್‌ದಾರರ ದಾಖಲೆಗಳನ್ನು ಪರಿಶೀಲಿಸಿ 06 ಬಿಡ್ ದಾರರು ಅರ್ಹರಾಗಿರುತ್ತಾರೆ. ದಿನಾಂಕ: 23.02.2022 ರಂದು ಫೈನಾನ್ಸಿಯಲ್ ಬಿಡ್ ತೆರೆದು ದಿನಾಂಕ: 28.02.2022ರಂದು ಈ ಟೆಂಡರ್ ಸಮಿತಿ ಸಭೆಯಲ್ಲಿ ಚರ್ಚಿಸಿ ಟೆಂಡರ್ ನಿಯಮಾನುಸಾರ L- 01 ಬಿಡ್‌ದಾರರಿಗೆ ಟೆಂಡರ್ ನೀಡಲು ಈ ಟೆಂಡರ್ ಸಮಿತಿ ಸಭೆಯು ತೀರ್ಮಾನಿಸಿರುತ್ತದೆ.

ಕಾರಣ L–01 ಬಿಡ್‌ದಾರರಿಗೆ ಟೆಂಡರ್ ನೀಡಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Clerk/Computer Operator/ Data Entry Operator/Lab Technician) ಮಾನವ ಶಕ್ತಿಗಳನ್ನು ಒದಗಿಸುವ ಟೆಂಡರ್ ಕುರಿತಾಗಿ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ ಸಭೆಯು ಟೆಂಡರ್ ನಿಯಮಾನುಸಾರ L-01 ಬಿಡ್‌ದಾರರಿಗೆ ಟೆಂಡರ್ ನೀಡುವ ಟೆಂಡರ್ ಸಮಿತಿ ಸಭೆಯ ತೀರ್ಮಾನದ ಕುರಿತು ಚರ್ಚಿಸಿದ ಸಭೆಯು ಸದರಿ L-01 ಬಿಡ್‌ದಾರರು ಸದ್ಯ ಚಾಲ್ತಿಯಲ್ಲಿರುವ ಬಿಡ್‌ದಾರರು ಒಬ್ಬರೆ ಆಗಿರುವ ಹಿನ್ನೆಲೆಯಲ್ಲಿ ಸದರಿಯವರು ಎಲ್ಲಾ ದಾಖಲೆಗಳನ್ನು ಮುಂಬರುವ ಸಿಂಡಿಕೇಟ್ ಸಭೆಗೆ ಪ್ರಸ್ತುತಪಡಿಸಿದ ನಂತರ ದಾಖಲೆಗಳ ಪರಿಶೀಲನೆ ನಡೆಸಿ ನಿರ್ಧಾರ ಕೈಗೊಳ್ಳುವ ತೀರ್ಮಾನವನ್ನು ಸಭೆ ಕೈಗೊಂಡಿದೆ.

**➲ ಐಟಂ ನಂ. 12**

ವಿಷಯ: ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Attender/Peon/Cleaning of office/ Sweeper/other unskilled & Driver, & Scavenger) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾವನೆಯನ್ನು ಮಂಡಿಸುವ ಕುರಿತು.

***

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Attender/Peon/Cleaning of office/ Sweeper/other unskilled & Driver, & Scavenger) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ದಿನಾಂಕ: 27.12.2021 ರಂದು ಟೆಂಡರ್ ಅಧಿಸೂಚನೆ ಹೊರಡಿಸಿದ್ದು, ದಿನಾಂಕ: 28.01.2022 ರಂದು ತಾಂತ್ರಿಕ ಬಿಡ್ ತೆರೆಯಲಾಗಿ ಅದರಲ್ಲಿ 06 ಬಿಡ್‌ದಾರರು ಭಾಗವಹಿಸಿರುತ್ತಾರೆ. ದಿನಾಂಕ: 14.02.2022 ರಂದು ನಡೆದ ತಾಂತ್ರಿಕ ಬಿಡ್‌ಗೆ ಸಂಬಂಧಿಸಿದ ಈ ಟೆಂಡರ್ ಸಮಿತಿ ಸಭೆಯಲ್ಲಿ ಟೆಂಡರ್‌ದಾರರ ದಾಖಲೆಗಳನ್ನು ಪರಿಶೀಲಿಸಿ 05 ಬಿಡ್‌ದಾರರು ಅರ್ಹರಾಗಿರುತ್ತಾರೆ. ದಿನಾಂಕ: 23.02.2022 ರಂದು ಫೈನಾನ್ಸಿಯಲ್ ಬಿಡ್ ತೆರೆದು ದಿನಾಂಕ: 28.02.2022ರಂದು ಈ ಟೆಂಡರ್ ಸಮಿತಿ ಸಭೆಯಲ್ಲಿ ಚರ್ಚಿಸಿ ಟೆಂಡರ್ ನಿಯಮಾನುಸಾರ L- 01 ಬಿಡ್‌ದಾರರಿಗೆ ಟೆಂಡರ್ ನೀಡಲು ಈ ಟೆಂಡರ್ ಸಮಿತಿ ಸಭೆಯು ತೀರ್ಮಾನಿಸಿರುತ್ತದೆ.

ಕಾರಣ L- 01 ಬಿಡ್‌ದಾರರಿಗೆ ಟೆಂಡರ್ ನೀಡಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Attender/Peon/Cleaning of office/ Sweeper/other unskilled & Driver, & Scavenger) ಮಾನವ ಶಕ್ತಿಗಳನ್ನು ಒದಗಿಸುವ ಟೆಂಡರ್ ಕುರಿತಾಗಿ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ ಸಭೆಯು ಟೆಂಡರ್ ನಿಯಮಾನುಸಾರ L-01 ಬಿಡ್‌ದಾರರಿಗೆ ಟೆಂಡರ್ ನೀಡುವ ಟೆಂಡರ್ ಸಮಿತಿ ಸಭೆಯ ತೀರ್ಮಾನದ ಕುರಿತು ಚರ್ಚಿಸಿದ ಸಭೆಯು ಸದರಿ L-01 ಬಿಡ್‌ದಾರರು ಸದ್ಯ ಚಾಲ್ತಿಯಲ್ಲಿರುವ ಬಿಡ್‌ದಾರರು ಒಬ್ಬರೆ ಆಗಿರುವ ಹಿನ್ನೆಲೆಯಲ್ಲಿ ಸದರಿಯವರು ಎಲ್ಲಾ ದಾಖಲೆಗಳನ್ನು ಮುಂಬರುವ ಸಿಂಡಿಕೇಟ್ ಸಭೆಗೆ ಪ್ರಸ್ತುತಪಡಿಸಿದ ನಂತರ ದಾಖಲೆಗಳ ಪರಿಶೀಲನೆ ನಡೆಸಿ ನಿರ್ಧಾರ ಕೈಗೊಳ್ಳುವ ತೀರ್ಮಾನವನ್ನು ಸಭೆ ಕೈಗೊಂಡಿದೆ.

➲ **ಐಟಂ ನಂ. 13**

ವಿಷಯ: ವಿಶ್ವವಿದ್ಯಾಲಯದಲ್ಲಿ KTPP Act 2000 Chapter-1 Rule (4) (e) (i) ರ ನಿಯಮವನ್ನು ಅಳವಡಿಸಿಕೊಳ್ಳುವ ಕುರಿತು.

ಉಲ್ಲೇಖ:ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 25 ಶಾಸನ 2019, ಬೆಂಗಳೂರು, ದಿನಾಂಕ 27.04.2020.

***

ಕರ್ನಾಟಕ ಸರ್ಕಾರದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2000ದಲ್ಲಿ KTPP Act 2000 Chapter-1 Rule (4) (e) (i) ರಡಿಯಲ್ಲಿ "ನಿರ್ಮಾಣ ಕಾಮಗಾರಿಗಳು ಮತ್ತು ಸಮಾಲೋಚನೆಗಳು ಒಳಗೊಂಡಂತೆ ಸರಕುಗಳು ಮತ್ತು ಸೇವೆಗಳನ್ನು" ರೂ.05.00 ಲಕ್ಷಗಳವರೆಗೆ ಟೆಂಡರ್ ಕರೆಯದೆ ನಿರ್ವಹಿಸಲು ಅವಕಾಶವಿದೆ ಎಂದು ಉಲ್ಲೇಖಿತ ಅಧಿಸೂಚನೆ ಹೊರಡಿಸಿದೆ. ಸದರಿ ನಿಯಮವನ್ನು ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳಲು ಸಿಂಡಿಕೇಟ್ ಸಭೆಯ ಅನುಮೋದನೆಗೆ ಸಲ್ಲಿಸಿದೆ.

**ತೀರ್ಮಾನ**

ಈ ಕುರಿತಾಗಿ ಕರ್ನಾಟಕ ಸರ್ಕಾರದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ, 2000ದಲ್ಲಿ KTPP Act 2000 Chapter-1 Rule (4) (e) (i) ನಿಯಮವನ್ನು ಗಮನಿಸಿ, ವಿಶ್ವವಿದ್ಯಾಲಯದ "ನಿರ್ಮಾಣ ಕಾಮಗಾರಿಗಳು ಮತ್ತು ಸಮಾಲೋಚನೆಗಳು ಒಳಗೊಂಡಂತೆ ಸರಕುಗಳು ಮತ್ತು ಸೇವೆಗಳನ್ನು" ರೂ.05.00 ಲಕ್ಷಗಳವರೆಗೆ ಟೆಂಡರ್ ಕರೆಯದೆ ನಿರ್ವಹಿಸುವ ನಿಯಮವನ್ನು ವಿಶ್ವವಿದ್ಯಾಲಯದಲ್ಲಿ ಉಲ್ಲೇಖಿತ ಅಧಿಸೂಚನೆಯ ದಿನದಿಂದ ಅನ್ವಯಿಸಿ ಅಳವಡಿಸಿಕೊಳ್ಳಲು ಸಭೆಯು ಸೂಚಿಸಿದೆ.

➲ **ಐಟಂ ನಂ. 14**

ವಿಷಯ: ನೂತನ ಪರೀಕ್ಷಾ ಕೇಂದ್ರವನ್ನು ಮಂಜೂರಿಸುವ ನಿಯಮಗಳ ಅನುಮೋದನೆ ಕುರಿತು.

****

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ ಮಹಾವಿದ್ಯಾಲಯಗಳಿಗೆ ನೂತನ ಪರೀಕ್ಷಾ ಕೇಂದ್ರವನ್ನು ಮಂಜೂರಿಸಲು ಯಾವುದೇ ನಿಯಮಗಳು ಇಲ್ಲದೇ ಇರುವುದರಿಂದ ನೂತನ ಪರೀಕ್ಷಾ ಕೇಂದ್ರಗಳನ್ನು ತೆರೆಯಲು ಈ ಕೆಳಗಿನಂತೆ ನಿಯಮಗಳನ್ನು ರೂಪಿಸಿದ್ದು, ಸದರಿ ನಿಯಮಗಳ ತೀರ್ಮಾನ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

1. ಆಪೇಕ್ಷಿತ ಪರೀಕ್ಷಾ ಕೇಂದ್ರವು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಪರಿಶೀಲನಾ ಶುಲ್ಕ ರೂ.25,000/– ಭರಿಸುವುದು.
2. ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳನ್ನೊಳಗೊಂಡ ಪರಿಶೀಲನಾ ಸಮಿತಿ ರಚಿಸಿ, ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುವುದು.

**ತೀರ್ಮಾನ**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ ಮಹಾವಿದ್ಯಾಲಯಗಳಿಗೆ ನೂತನ ಪರೀಕ್ಷಾ ಕೇಂದ್ರವನ್ನು ಮಂಜೂರಿಸಲು ಯಾವುದೇ ನಿಯಮಗಳು ಇಲ್ಲದೇ ಇರುವುದರಿಂದ ನೂತನ ಪರೀಕ್ಷಾ ಕೇಂದ್ರಗಳನ್ನು ತೆರೆಯಲು ಈ ಕೆಳಗಿನಂತೆ ನಿಯಮಗಳನ್ನು ರೂಪಿಸಿದ್ದು, ಸದರಿ ನಿಯಮಗಳ ತೀರ್ಮಾನ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

1. ಅಪೇಕ್ಷಿತ ಪರೀಕ್ಷಾ ಕೇಂದ್ರವು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಪರಿಶೀಲನಾ ಶುಲ್ಕ ರೂ.25,000/– ಭರಿಸುವುದು.
2. ವಿಶ್ವವಿದ್ಯಾಲಯದ ಉನ್ನತ ಮಟ್ಟದ ಪರಿಶೀಲನಾ ಸಮಿತಿಯನ್ನು ರಚಿಸಿ, ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುವುದು ಸಮಿತಿಯು ವಿಧಿಸುವ ಷರತ್ತುಗಳನ್ನು ಪೂರೈಸಿಕೊಂಡು ತದನಂತರ ಒಪ್ಪಿಗೆ ಪತ್ರವನ್ನು ಮಹಾವಿದ್ಯಾಲಯದ ಪ್ರಾಚಾರ್ಯರು ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು.

**➲ ಐಟಂ ನಂ. 15**

ವಿಷಯ: ಭಾರತೀಯ ಶಿಕ್ಷಣ ಮಂಡಲ, ಕರ್ನಾಟಕ ಇವರ ಕಡೆಯಿಂದ ಜರುಗಲಿರುವ ರಾಷ್ಟ್ರೀಯ ಸಮ್ಮೇಳನಕ್ಕೆ ವಿಶ್ವವಿದ್ಯಾಲಯದ ವತಿಯಿಂದ ಧನ ಸಹಾಯ ನೀಡುವ ಕುರಿತು.

*****

ದಿನಾಂಕ: 29.04.2022 ಮತ್ತು 30.04.2022 ರಂದು ರಾಷ್ಟ್ರೀಯ ಶಿಕ್ಷಣ ನೀತಿ ಕುರಿತಾಗಿ "Challenges in Implementation of NEP-2020" ಎಂಬ ವಿಷಯದ ಕುರಿತು ಸಮ್ಮೇಳನವನ್ನು VTU (Vishweshwara Technological University) ಬೆಳಗಾವಿಯಲ್ಲಿ ಭಾರತೀಯ ಶಿಕ್ಷಣ ಮಂಡಲ, ಕರ್ನಾಟಕ ಉತ್ತರ ಪ್ರಾಂತ, ಹುಬ್ಬಳ್ಳಿ ಇವರ ಕಡೆಯಿಂದ ಆಯೋಜಿಸಲಿದ್ದು, ಸದರಿ ಸಮ್ಮೇಳನದಲ್ಲಿ ವಿಶ್ವವಿದ್ಯಾಲಯದ ಸಿಬ್ಬಂದಿ ಭಾಗವಹಿಸಲು ಮತ್ತು ವಿಶ್ವವಿದ್ಯಾಲಯದ ವತಿಯಿಂದ ಧನ ಸಹಾಯ ಕೋರಿರುತ್ತಾರೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಸದರಿ ವಿಷಯದ ಕುರಿತು ಸುದೀರ್ಘವಾಗಿ ಚರ್ಚಿಸಿದ ಸಭೆಯು ಸಮ್ಮೇಳನಕ್ಕೆ ಸಿಬ್ಬಂದಿಗಳನ್ನು ಕಳುಹಿಸಲು ಮತ್ತು ವಿಶ್ವವಿದ್ಯಾಲಯ ವತಿಯಿಂದ ರೂ. 1.00 ಲಕ್ಷಗಳ ಧನ ಸಹಾಯ ನೀಡಲು ತೀರ್ಮಾನಿಸಿದೆ.

**➲ ಐಟಂ ನಂ. 16**

ವಿಷಯ: ಎಬಿವಿಪಿ, ಕರ್ನಾಟಕ ವಾರ್ಷಿಕ ಸ್ಮೃತಿ ಸಂಚಿಕೆಗೆ ಜಾಹೀರಾತು ನೀಡುವ ಕುರಿತು.

***

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಕರ್ನಾಟಕ ಇವರು ಶಾಶ್ವತ ನೆನಪಿಗಾಗಿ ವಾರ್ಷಿಕ ಸ್ಮೃತಿ ಸಂಚಿಕೆಯನ್ನು ಹೊರತರುವುದರಿಂದ, ಸದರಿಯವರು ಸಂಚಿಕೆಗೆ ಜಾಹೀರಾತು ನೀಡಲು ಮನವಿ ಸಲ್ಲಿಸಿದ್ದು, ಈ ಮನವಿಯನ್ನು ಸಿಂಡಿಕೇಟ್ ಸಭೆಯ ನಿರ್ಣಯ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಕರ್ನಾಟಕ ಇವರ ವಾರ್ಷಿಕ ಸ್ಮೃತಿ ಸಂಚಿಕೆಗೆ ರೂ. 50,000/– ಗಳ ಜಾಹೀರಾತು ನೀಡಲು ಸಭೆಯು ತೀರ್ಮಾನಿಸಿದೆ.

**➲ ಐಟಂ ನಂ. 17**

ವಿಷಯ: ವಿಶ್ವವಿದ್ಯಾಲಯದ ಅತಿಥಿ ಉಪನ್ಯಾಸಕರುಗಳ ವೇತನ ಹೆಚ್ಚಳ ಕುರಿತು.
ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಇಡಿ 242 ಡಿಸಿಇ 2021, ಬೆಂಗಳೂರು ದಿನಾಂಕ 14.01.2022.

*****

ವಿಶ್ವವಿದ್ಯಾಲಯದ ಅತಿಥಿ ಉಪನ್ಯಾಸಕರುಗಳ ವೇತನ ಹೆಚ್ಚಳ ಮತ್ತು ಇನ್ನಿತರೆ ಬೇಡಿಕೆಗಳ ಕುರಿತಾಗಿ ಉಲ್ಲೇಖಿತ ಆದೇಶವನ್ನು ಸರ್ಕಾರದಿಂದ ಹೊರಡಿಸಲಾಗಿದ್ದು, ಸದರಿ ಆದೇಶದಲ್ಲಿ ಎಲ್ಲಾ ಅತಿಥಿ ಉಪನ್ಯಾಸಕರುಗಳ ಬೇಡಿಕೆಗಳ ಕುರಿತು ಸಮಿತಿಯ ಶಿಫಾರಸ್ಸಿನಂತೆ ಹೊರಡಿಸಿರುವ ಆದೇಶಗಳನ್ನು ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳುವ ಕುರಿತು ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ ಅತಿಥಿ ಉಪನ್ಯಾಸಕರುಗಳ ವೇತನ ಹೆಚ್ಚಳ ಮತ್ತು ಇನ್ನಿತರೆ ಬೇಡಿಕೆಗಳ ಕುರಿತಾಗಿ ಸುದೀರ್ಘವಾಗಿ ಚರ್ಚಿಸಿದ ಸಭೆಯು, ಈ ಆದೇಶದಿಂದ ಆಗಲಿರುವ ಹೆಚ್ಚಿನ ಆರ್ಥಿಕ ಹೊರೆಯನ್ನು ಗಮನಿಸಿ, ಉಪನ್ಯಾಸಕರುಗಳ ಬೇಡಿಕೆಗಳ ಕುರಿತು ಸಮಿತಿಯ ಶಿಫಾರಸ್ಸಿನಂತೆ ಹೊರಡಿಸಿರುವ ಸರ್ಕಾರದ ಆದೇಶವನ್ನು ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳುವಂತೆ ಸಭೆಯು ಸೂಚಿಸಿದೆ.

| ವಿವರ | ಪೂರ್ಣಕಾಲಿಕ | ಅರೆಕಾಲಿಕ (ಗಂಟೆಗೆ) |
|---|---|---|
| 5 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ಅವಧಿಗೆ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಮತ್ತು ಯು.ಜಿ.ಸಿ ನಿಗಧಿಪಡಿಸಿದ ವಿದ್ಯಾರ್ಹತೆ ಹೊಂದಿರುವವರಿಗೆ | Rs. 32,000.00 | Rs. 500.00 |
| 5 ವರ್ಷಕ್ಕಿಂತ ಕಡಿಮೆ ಅವಧಿಗೆ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಮತ್ತು ಯು.ಜಿ.ಸಿ ನಿಗಧಿಪಡಿಸಿದ ವಿದ್ಯಾರ್ಹತೆ ಹೊಂದಿರುವವರಿಗೆ | Rs. 30,000.00 | Rs. 469.00 |
| 5 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ಅವಧಿಗೆ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಮತ್ತು ಯು.ಜಿ.ಸಿ ನಿಗಧಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ | Rs. 28,000.00 | Rs. 438.00 |
| 5 ವರ್ಷಕ್ಕಿಂತ ಕಡಿಮೆ ಅವಧಿಗೆ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಮತ್ತು ಯು.ಜಿ.ಸಿ ನಿಗಧಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ | Rs. 26,000.00 | Rs. 406.00 |

**➲ ಐಟಂ ನಂ. 18**

ವಿಷಯ: ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

****

ಹಣಕಾಸು ವಿಷಯಕ್ಕೆ ಸಂಬಂಧಿಸಿದಂತೆ 2021–22ನೇ ಆರ್ಥಿಕ ಸಾಲಿನ ವಿಶ್ವವಿದ್ಯಾಲಯದ ತೃತೀಯ ಮತ್ತು ನಾಲ್ಕನೇ ಹಣಕಾಸು ಸಮಿತಿ ಸಭೆಯನ್ನು ಆಯೋಜಿಸಿ, ಸದರಿ ಸಮಿತಿ ಸಭೆಯು ಈ ಕುರಿತು ನಡಾವಳಿಗಳನ್ನು ಸಲ್ಲಿಸಿದೆ. ಈ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ ತೃತೀಯ ಮತ್ತು ನಾಲ್ಕನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ದೃಢೀಕರಿಸಿ ಅನುಮೋದಿಸಿತು. 31ನೇ ಮಾರ್ಚ್ 2022ರ ಪ್ರಾರಂಭಿಕ ಶುಲ್ಕವನ್ನು ಪರಿಗಣಿಸಲು ಅನುಮತಿಸಿ, 2022–23ನೇ ಆರ್ಥಿಕ ಸಾಲಿನ ಆಯ–ವ್ಯಯವನ್ನು ಕೂಲಂಕುಷವಾಗಿ ಪರಿಶೀಲಿಸಿ ಸಭೆಯು ಅನುಮೋದಿಸಿದೆ.

## ಟೇಬಲ್ ಅಜೆಂಡಾ

**➲ ಐಟಂ ನಂ. 01**

ವಿಷಯ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಘಟಕದ ಸಲಹಾ ಸಮಿತಿಯ ನಡಾವಳಿಯನ್ನು ಅನುಮೋದಿಸುವ ಕುರಿತು.

*****

2022–23ನೇ ಸಾಲಿನ SCP ಮತ್ತು TSP ಯೋಜನೆಯಡಿ ಒಟ್ಟು ರೂ. 177.97ಗಳ ಕ್ರಿಯಾ ಯೋಜನೆಗೆ ಸಂಬಂಧಿಸಿದಂತೆ ದಿನಾಂಕ 28.03.2022ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಘಟಕದ ಸಲಹಾ ಸಮಿತಿಯ ಸಭೆಯು ಎಲ್ಲಾ ಕಾರ್ಯಸೂಚಿಗಳನ್ನು ಪರಿಶೀಲಿಸಿ ತೀರ್ಮಾನಿಸಿದ ನಡಾವಳಿಯನ್ನು ಸಲ್ಲಿಸಲಾಗಿದ್ದು, ಈ ನಡಾವಳಿಯನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಘಟಕದ ಸಲಹಾ ಸಮಿತಿಯ ನಡಾವಳಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಯಥಾವತ್ತಾಗಿ ಅನುಮೋದಿಸಿ, 2022–23ನೇ ಸಾಲಿನ ಎಸ್‌ಸಿಪಿ ಮತ್ತು ಟಿಎಸ್‌ಪಿ ಯೋಜನೆಯ ಕ್ರೀಯಾ ಯೋಜನೆಗೆ ಸರ್ಕಾರದ ಅನುಮೋದನೆ ಪಡೆಯಲು ಪತ್ರ ಬರೆಯಲು ಸೂಚಿಸಿ, ಸಲಹಾ ಸಮಿತಿ ಶಿಫಾರಸಿನಂತೆ ಕಾರ್ಯ ನಿರ್ವಹಿಸಲು ಸಭೆಯು ತೀರ್ಮಾನಿಸಿದೆ.

➲ **ಐಟಂ ನಂ. 02**

ವಿಷಯ: ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

***

ದಿನಾಂಕ 29.03.2022 ರಂದು ಕಟ್ಟಡ ಸಲಹಾ ಸಮಿತಿ ಸಭೆಯು ಜರುಗಿದ್ದು, ಈ ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ದಿನಾಂಕ 29.03.2022ರ ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಈ ಕೆಳಕಂಡಂತೆ ವಿಷಯವಾರು ದೃಢೀಕರಿಸಿ ಅನುಮೋದಿಸಿತು.

ವಿಷಯ:–1. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಜ್ಞಾನಸಾಗರ ಆವರಣದಲ್ಲಿ 2016–17 ನೇ ಸಾಲಿನ KKRDBಯ ಮ್ಯಾಕ್ರೋ ಯೋಜನೆ ಅಡಿಯಲ್ಲಿ ಹೊಸದಾಗಿ ನಿರ್ಮಿಸಿರುವ ಓ.ಬಿ.ಸಿ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಅಗತ್ಯವಾದ ನೀರಿನ ಸಂಪ್ ಮತ್ತು ವಾರ್ಡ್‌ರೋಬ್ (Wardrobe) ಗಳನ್ನು ನಿರ್ಮಿಸುವ ಕಾಮಗಾರಿ ಕುರಿತು. ಅಂದಾಜು ವೆಚ್ಚ ರೂ.18.22 ಲಕ್ಷಗಳು (ಲೋಕೋಪಯೋಗಿ ಇಲಾಖೆ, ಬಳ್ಳಾರಿ ವಲಯದ 2018–19ನೇ ಸಾಲಿನ ಸಿವಿಲ್ ದರಪಟ್ಟಿಯ ದರಗಳನ್ವಯ)

**ಕಟ್ಟಡ ಸಲಹಾ ಸಮಿತಿ ಸಭೆಯ ನಿರ್ಣಯ**

ಸದರಿ ಕಾಮಗಾರಿಯ ಟೆಂಡರಿನಲ್ಲಿ (ಸಿವಿಲ್ ಕೆಲಸಗಳಿಗೆ 12% GST ಹೊರತುಪಡಿಸಿ) ಕಡಿಮೆ ದರ ರೂ.15,04,051.69 (ರೂಪಾಯಿ ಹದಿನೈದು ಲಕ್ಷದ ನಾಲ್ಕು ಸಾವಿರದ ಐವತ್ತೊಂದು ಮತ್ತು ಪೈಸೆ ಅರವತ್ತೊಂಬತ್ತು ಮಾತ್ರ.) ನಮೂದಿಸಿದ R.G.Venkatesh, Class-I PWD Civil Contractor, S.N. Pet, Ballari ಇವರ ಟೆಂಡರನ್ನು ಪರಿಗಣಿಸಿ ಒಪ್ಪಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಸದರಿ ಕಾಮಗಾರಿಯ ಟೆಂಡರಿನಲ್ಲಿ (ಸಿವಿಲ್ ಕೆಲಸಗಳಿಗೆ 12% GST ಹೊರತುಪಡಿಸಿ) ಕಡಿಮೆ ದರ ರೂ.15,04,051.69 (ರೂಪಾಯಿ ಹದಿನೈದು ಲಕ್ಷದ ನಾಲ್ಕು ಸಾವಿರದ ಐವತ್ತೊಂದು ಮತ್ತು ಪೈಸೆ ಅರವತ್ತೊಂಬತ್ತು ಮಾತ್ರ.) ನಮೂದಿಸಿದ R.G.Venkatesh, Class-I PWD Civil Contractor, S.N. Pet, Ballari ಇವರ ಟೆಂಡರನ್ನು ಪರಿಗಣಿಸಿ ಒಪ್ಪಲಾದ ಕಟ್ಟಡ ಸಲಹಾ ಸಮಿತಿ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

ವಿಷಯ:–2. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಯರ ಮತ್ತು ವಿದ್ಯಾರ್ಥಿಗಳ ಹಾಸ್ಟೆಲ್‌ಗಳಿಗೆ SOLAR WATER HEATERಗಳನ್ನು ಪೂರೈಸಿ ಪ್ರತಿಷ್ಠಾಪಿಸುವ ಕಾಮಗಾರಿ ಕುರಿತು. ಅಂದಾಜು ವೆಚ್ಚ: ರೂ.26.05 ಲಕ್ಷಗಳು (ಲೋಕೋಪಯೋಗಿ ಇಲಾಖೆ, ಬಳ್ಳಾರಿ ವಲಯದ 2019–20ನೇ ಸಾಲಿನ ವಿದ್ಯುತ್ ದರಪಟ್ಟಿ, 2018–19ನೇ ಸಾಲಿನ ಸಿವಿಲ್ ದರಪಟ್ಟಿ ಹಾಗೂ Gem ದರಗಳನ್ವಯ)

**ಕಟ್ಟಡ ಸಲಹಾ ಸಮಿತಿ ಸಭೆಯ ನಿರ್ಣಯ**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಯರ ಮತ್ತು ವಿದ್ಯಾರ್ಥಿಗಳ ಹಾಸ್ಟೆಲ್‌ಗಳಿಗೆ SOLAR WATER HEATERಗಳನ್ನು ಪೂರೈಸಿ ಪ್ರತಿಷ್ಠಾಪಿಸುವ ಕಾಮಗಾರಿಯ ಅಂದಾಜು ಪಟ್ಟಿ ಮೊತ್ತ ರೂ.26,05,000.00 (ರೂಪಾಯಿ ಇಪ್ಪತ್ತಾರು ಲಕ್ಷದ ಐದು ಸಾವಿರ ಮಾತ್ರ.)ಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಹಾಗೂ ಇ–ಪ್ರೋಕ್ಯೂರ್ಮೆಂಟ್ ಮೂಲಕ ನಿಯಮಾನುಸಾರ ಟೆಂಡರ್ ಕರೆಯಲು ಸಹ ಅನುಮತಿಸಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ವಿಶ್ವವಿದ್ಯಾಲಯದ ಜ್ಞಾನಸಾಗರ ಆವರಣದಲ್ಲಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಯರ ಮತ್ತು ವಿದ್ಯಾರ್ಥಿಗಳ ಹಾಸ್ಟೆಲ್‌ಗಳಿಗೆ SOLAR WATER HEATERಗಳನ್ನು ಪೂರೈಸಿ ಪ್ರತಿಷ್ಠಾಪಿಸುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ನಿಯಮಾನುಸಾರ ಟೆಂಡರ್ ಕರೆಯುವ ಕಟ್ಟಡ ಸಲಹಾ ಸಮಿತಿ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

ವಿಷಯ:–3. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿನ ವಿದ್ಯಾರ್ಥಿನಿಯರ ಇತರೆ ಹಿಂದುಳಿದ ವರ್ಗಗಳ (OBC) ಮತ್ತು ಸಾಮಾನ್ಯ ಹಾಸ್ಟೆಲ್‌ಗಳಿಗೆ SOLAR WATER HEATERಗಳನ್ನು ಪೂರೈಸಿ ಪ್ರತಿಷ್ಠಾಪಿಸುವ ಕಾಮಗಾರಿ ಕುರಿತು. ಅಂದಾಜು ವೆಚ್ಚ: ರೂ. 16.10ಲಕ್ಷಗಳು (ಲೋಕೋಪಯೋಗಿ ಇಲಾಖೆ, ಬಳ್ಳಾರಿ ವಲಯದ 2019–20ನೇ ಸಾಲಿನ ವಿದ್ಯುತ್ ದರಪಟ್ಟಿ, 2018–19ನೇ ಸಾಲಿನ ಸಿವಿಲ್ ದರಪಟ್ಟಿ ಹಾಗೂ Gem ದರಗಳನ್ವಯ)

**ಕಟ್ಟಡ ಸಲಹಾ ಸಮಿತಿ ಸಭೆಯ ನಿರ್ಣಯ**

ವಿಶ್ವವಿದ್ಯಾಲಯದ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿನ ವಿದ್ಯಾರ್ಥಿನಿಯರ ಇತರೆ ಹಿಂದುಳಿದ ವರ್ಗಗಳ (OBC) ಮತ್ತು ಸಾಮಾನ್ಯ ಹಾಸ್ಟೆಲ್‌ಗಳಿಗೆ SOLAR WATER HEATERಗಳನ್ನು ಪೂರೈಸಿ ಪ್ರತಿಷ್ಠಾಪಿಸುವ ಕಾಮಗಾರಿಯ ಅಂದಾಜು ಪಟ್ಟಿ ಮೊತ್ತ ರೂ.16,10,000.00 (ರೂಪಾಯಿ ಹದಿನಾರು ಲಕ್ಷದ ಹತ್ತು ಸಾವಿರ ಮಾತ್ರ.)ಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಹಾಗೂ ಇ–ಪ್ರೋಕ್ಯೂರ್ಮೆಂಟ್ ಮೂಲಕ ನಿಯಮಾನುಸಾರ ಟೆಂಡರ್ ಕರೆಯಲು ಸಹ ಅನುಮತಿಸಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ವಿಶ್ವವಿದ್ಯಾಲಯದ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿನ ವಿದ್ಯಾರ್ಥಿನಿಯರ ಇತರೆ ಹಿಂದುಳಿದ ವರ್ಗಗಳ (OBC) ಮತ್ತು ಸಾಮಾನ್ಯ ಹಾಸ್ಟೆಲ್‌ಗಳಿಗೆ SOLAR WATER HEATERಗಳನ್ನು ಪೂರೈಸಿ ಪ್ರತಿಷ್ಠಾಪಿಸುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ನಿಯಮಾನುಸಾರ ಟೆಂಡರ್ ಕರೆಯುವ ಕಟ್ಟಡ ಸಲಹಾ ಸಮಿತಿ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

ವಿಷಯ:–4. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿನ ಸೈನ್ಸ್ ಫ್ಯಾಕಲ್ಟಿ ಕಟ್ಟಡದ ಕೆಮಿಸ್ಟ್ರಿ ವಿಭಾಗದಲ್ಲಿ ಸೆಲ್ಫ್‌ಗಳನ್ನು ನಿರ್ಮಿಸುವ, ಪ್ಲಾಟ್ ಫಾರಂಗಳಿಗೆ ಬಣ್ಣವನ್ನು ಬಳಿಯುವ ಮತ್ತು ವಿದ್ಯುತ್ ದುರಸ್ಥಿ ಕೆಲಸಗಳನ್ನು ಕೈಗೊಳ್ಳುವ ಕಾಮಗಾರಿ ಕುರಿತು. ಅಂದಾಜು ವೆಚ್ಚ: ರೂ.04.60 ಲಕ್ಷಗಳು (ಲೋಕೋಪಯೋಗಿ ಇಲಾಖೆ, ಬಳ್ಳಾರಿ ವಲಯದ 2018–19ನೇ ಸಾಲಿನ ಸಿವಿಲ್ ದರಪಟ್ಟಿ ಹಾಗೂ 2019–20ನೇ ಸಾಲಿನ ವಿದ್ಯುತ್ ದರಪಟ್ಟಿ ಹಾಗೂ ಮಾರುಕಟ್ಟೆ ದರಗಳನ್ವಯ)

**<u>ಕಟ್ಟಡ ಸಲಹಾ ಸಮಿತಿ ಸಭೆಯ ನಿರ್ಣಯ</u>**

ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿನ ಸೈನ್ಸ್ ಫ್ಯಾಕಲ್ಟಿ ಕಟ್ಟಡದ ಕೆಮಿಸ್ಟ್ರಿ ವಿಭಾಗದಲ್ಲಿ ಸೆಲ್ಫ್‌ಗಳನ್ನು ನಿರ್ಮಿಸುವ, ಪ್ಲಾಟ್ ಫಾರಂಗಳಿಗೆ ಬಣ್ಣವನ್ನು ಬಳಿಯುವ ಮತ್ತು ವಿದ್ಯುತ್ ದುರಸ್ಥಿ ಕೆಲಸಗಳನ್ನು ಕೈಗೊಳ್ಳುವ ಕಾಮಗಾರಿಯ ಅಂದಾಜು ಪಟ್ಟಿ ಮೊತ್ತ ರೂ.04,60,000.00 (ರೂಪಾಯಿ ನಾಲ್ಕು ಲಕ್ಷದ ಅರವತ್ತು ಸಾವಿರ ಮಾತ್ರ)ಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಹಾಗೂ ಇ-ಪ್ರೋಕ್ಯೂರ್ಮೆಂಟ್ ಮೂಲಕ ನಿಯಮಾನುಸಾರ ಟೆಂಡರ್ ಕರೆಯಲು ಸಹ ಅನುಮತಿಸಲಾಯಿತು.

**<u>ಸಿಂಡಿಕೇಟ್ ಸಭೆಯ ತೀರ್ಮಾನ</u>**

ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿನ ಸೈನ್ಸ್ ಫ್ಯಾಕಲ್ಟಿ ಕಟ್ಟಡದ ಕೆಮಿಸ್ಟ್ರಿ ವಿಭಾಗದಲ್ಲಿ ಸೆಲ್ಫ್‌ಗಳನ್ನು ನಿರ್ಮಿಸುವ, ಪ್ಲಾಟ್ ಫಾರಂಗಳಿಗೆ ಬಣ್ಣವನ್ನು ಬಳಿಯುವ ಮತ್ತು ವಿದ್ಯುತ್ ದುರಸ್ಥಿ ಕೆಲಸಗಳನ್ನು ಕೈಗೊಳ್ಳುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ನಿಯಮಾನುಸಾರ ಟೆಂಡರ್ ಕರೆಯುವ ಕಟ್ಟಡ ಸಲಹಾ ಸಮಿತಿ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

**➲ ಐಟಂ ನಂ. 03**

ವಿಷಯ: ಖರೀದಿ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

ಉಲ್ಲೇಖ: ದಿನಾಂಕ 29.03.2022 ರಂದು ಜರುಗಿದ ಖರೀದಿ ಸಲಹಾ ಸಮಿತಿ ಸಭೆ

*****

ವಿಶ್ವವಿದ್ಯಾಲಯದಲ್ಲಿ ದಿನಾಂಕ 29.03.2022 ರಂದು ಜರುಗಿದ ಖರೀದಿ ಸಲಹಾ ಸಮಿತಿ ಸಭೆಯು ಎಲ್ಲಾ ಕಾರ್ಯಸೂಚಿಗಳನ್ನು ಪರಿಶೀಲಿಸಿ ತೀರ್ಮಾನಿಸಿದ ನಡಾವಳಿಯನ್ನು ಸಲ್ಲಿಸಲಾಗಿದ್ದು, ಈ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ದಿನಾಂಕ 29.03.2022 ರಂದು ಜರುಗಿದ ಖರೀದಿ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಈ ಕೆಳಕಂಡಂತೆ ವಿಷಯವಾರು ದೃಢೀಕರಿಸಿ ಅನುಮೋದಿಸಿತು.

ವಿಷಯ: 01. ವಿಶ್ವವಿದ್ಯಾಲಯದ ಜ್ಞಾನಸಾಗರ ಆವರಣದಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಸತಿನಿಲಯಗಳಿಗೆ, ಕುಲಸಚಿವರ ಕಛೇರಿ ಹಾಗೂ ಇತರೆ ವಿಭಾಗಗಳಿಗೆ ಅಗತ್ಯವಾದ Steel Almirahಗಳನ್ನು ಪೂರೈಸುವ ಕೆಲಸದ ಕುರಿತು. ಅಂದಾಜು ವೆಚ್ಚ: ರೂ. 20,80,000.00 (ಮಾರುಕಟ್ಟೆ ದರಗಳನ್ವಯ ಜಿ.ಎಸ್.ಟಿ ಹಾಗೂ ಸಾಗಣೆ ವೆಚ್ಚ ಸೇರಿದಂತೆ)

**<u>ಖರೀದಿ ಸಲಹಾ ಸಮಿತಿ ಸಭೆಯ ನಿರ್ಣಯ</u>**

ವಿಶ್ವವಿದ್ಯಾಲಯದ ಜ್ಞಾನಸಾಗರ ಆವರಣದಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಸತಿನಿಲಯಗಳಿಗೆ, ಕುಲಸಚಿವರ ಕಛೇರಿ ಹಾಗೂ ಇತರೆ ವಿಭಾಗಗಳಿಗೆ ಅಗತ್ಯವಾದ Steel Almirahಗಳನ್ನು ಪೂರೈಸುವ ಕೆಲಸದ ಟೆಂಡರಿನಲ್ಲಿ (2ನೇ ಕರೆ) M/S. A-Four Enterprises, Manufactures, Traders & Service Vijayapur-586104 ಇವರು Steel Almirah: (for SC&ST Boys & Girls new Hostels) ರೂ.12,500.00 (ಪ್ರತಿಯೊಂದಕ್ಕೆ) ಹಾಗೂ Steel Almirah: (for Office & Departments)ಗೆ ರೂ.14,000.00 (ಪ್ರತಿಯೊಂದಕ್ಕೆ) ನಮೂದಿಸಿರುವ L-01 ದರಗಳನ್ನು ಪರಿಗಣಿಸಿ ಖರೀದಿಸಲು ಅನುಮೋದಿಸಲಾಯಿತು.

**<u>ಸಿಂಡಿಕೇಟ್ ಸಭೆಯ ತೀರ್ಮಾನ</u>**

ವಿಶ್ವವಿದ್ಯಾಲಯದ ಜ್ಞಾನಸಾಗರ ಆವರಣದಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಸತಿನಿಲಯಗಳಿಗೆ, ಕುಲಸಚಿವರ ಕಛೇರಿ ಹಾಗೂ ಇತರೆ ವಿಭಾಗಗಳಿಗೆ ಅಗತ್ಯವಾದ Steel Almirahಗಳನ್ನು ಪೂರೈಸುವ ಕೆಲಸದ ಟೆಂಡರಿನಲ್ಲಿ (2ನೇ ಕರೆ) M/S. A-Four Enterprises, Manufactures, Traders & Service Vijayapur-586104 ಇವರು Steel Almirah: (for SC&ST Boys & Girls new Hostels) ರೂ.12,500.00 (ಪ್ರತಿಯೊಂದಕ್ಕೆ) ಹಾಗೂ Steel Almirah: (for Office & Departments)ಗೆ ರೂ.14,000.00 (ಪ್ರತಿಯೊಂದಕ್ಕೆ) ನಮೂದಿಸಿರುವ L-01 ದರಗಳನ್ನು ಪರಿಗಣಿಸಿ ಖರೀದಿಸಲು ತೀರ್ಮಾನಿಸಿರುವ ಖರೀದಿ ಸಲಹಾ ಸಮಿತಿ ಸಭೆಯ ನಿರ್ಧಾರವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು

**1.** ಮೆ// ಈಶ್ವರ್ ಎಂಟರ್‌ಪ್ರೈಸಸ್ ಬಳ್ಳಾರಿ ಇವರು ವಿಶ್ವವಿದ್ಯಾಲಯಕ್ಕೆ ಬಾಡಿಗೆ ವಾಹನಗಳನ್ನು ಸರಬರಾಜು ಮಾಡಿದ ಬಿಲ್ಲಿನ ಮೊತ್ತವನ್ನು ಪಾವತಿಸುವಂತೆ ಸನ್ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ. ಮಲ್ಲಿಕಾರ್ಜುನ ಮರ್ಚೆಡ್‌ರವರ ಪ್ರಸ್ತಾವನೆ ಕುರಿತು.

**<u>ಪ್ರಸ್ತಾವನೆ</u>**

ದಿನಾಂಕ: 30.03.2022ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಸನ್ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ. ಮಲ್ಲಿಕಾರ್ಜುನ ಮರ್ಚೆಡ್‌ರವರು ಮೆ// ಈಶ್ವರ್ ಎಂಟರ್‌ಪ್ರೈಸಸ್ ಬಳ್ಳಾರಿ ಇವರು ವಿಶ್ವವಿದ್ಯಾಲಯಕ್ಕೆ ಬಾಡಿಗೆ ವಾಹನಗಳನ್ನು ಸರಬರಾಜು ಮಾಡಿದ ಬಿಲ್ಲಿನ ಮೊತ್ತವನ್ನು ಪಾವತಿಸಲು ಹಿಂದಿನ ಸಿಂಡಿಕೇಟ್ ಸಭೆಗಳಲ್ಲಿ ಸೂಚಿಸಿದ್ದರೂ ವಿಳಂಬಕ್ಕೆ ಕಾರಣವನ್ನು ತಿಳಿಸಲು ಒತ್ತಾಯಿಸಿದರು. ಈ ಹಿನ್ನೆಲೆಯಲ್ಲಿ ಕುಲಸಚಿವರು (ಮೌಲ್ಯಮಾಪನ) ಇವರು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಾಹನ ಸರಬರಾಜು ಕಡತವನ್ನು ಪರಿಶೀಲಿಸಲಾಗಿ ಈ ಕೆಳಕಂಡ ಸಮಗ್ರವಾದ ಮಾಹಿತಿಯನ್ನು ಸಿಂಡಿಕೇಟ್ ಸಭೆಗೆ ಸಲ್ಲಿಸಿದರು.

ಮೆ. ಈಶ್ವರ್ ಎಂಟರ್‌ಪ್ರೈಸಸ್, ಸಿದ್ದಾರ್ಥ ಕಾಲೋನಿ, ಚೈತನ್ಯ ಕಾಲೇಜು ಹತ್ತಿರ, ಬಳ್ಳಾರಿ ಇವರಿಂದ ಸರಬರಾಜು ಆದೇಶವಿಲ್ಲದೆ ಮೌಖಿಕ ನಿರ್ದೇಶನದ ಮೇರೆಗೆ, ನವೆಂಬರ್/ಡಿಸೆಂಬರ್–2019ರ ಸ್ನಾತಕ ವಿಶೇಷ ವಿಚಕ್ಷಕದಳಗಳು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಲು 06 ವಾಹನಗಳನ್ನು ಮತ್ತು ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಕೇಂದ್ರಗಳಿಗೆ ರವಾನಿಸಲು 01 ವಾಹನವನ್ನು ಒಟ್ಟು 07 ವಾಹನಗಳನ್ನು ಬಳಸಿರುವುದು ಕಡತಗಳಿಂದ ದೃಢವಾಗಿದೆ.

ನವೆಂಬರ್/ಡಿಸೆಂಬರ್–2019ರ ಸ್ನಾತಕ ಪದವಿ ಪರೀಕ್ಷೆಗಳು ಮುಗಿದ ನಂತರ ಮೆ. ಈಶ್ವರ್ ಎಂಟರ್ ಪ್ರೈಸಸ್, ಬಳ್ಳಾರಿ ರವರು ವಾಹನಗಳನ್ನು ಸರಬರಾಜು ಮಾಡಿದ ಬಿಲ್ಲಿನ ಮೊತ್ತವನ್ನು ಪಾವತಿಸಲು ವಿಶ್ವವಿದ್ಯಾಲಯಕ್ಕೆ ಬಿಲ್ಲುಗಳನ್ನು ಸಲ್ಲಿಸಿರುವುದಿಲ್ಲ. ತದನಂತರ ಎರಡು ಬಾರಿ (ದಿನಾಂಕ: 20.04.2021 & 02.09.2021) ಮೊತ್ತ ರೂ.3,74,290/–ಗಳನ್ನು ಪಾವತಿಸಲು ಮನವಿಯನ್ನು ಸಲ್ಲಿಸಿರುತ್ತಾರೆ. ಆದರೆ ಕರ್ನಾಟಕ ಹಣಕಾಸು ಸಂಹಿತೆ ಮತ್ತು ಅನಿಶ್ಚಿತ ವೆಚ್ಚದ ಕೈಪಿಡಿಯಲ್ಲಿ ಒದಗಿಸಲಾದ ಹಣಕಾಸಿನ ವಹಿವಾಟುಗಳನ್ನು ನಿಯಂತ್ರಿಸುವ ನಿಯಮಗಳ ಪ್ರಕಾರ ಅಗತ್ಯವಿರುವ ದಾಖಲೆಗಳೊಂದಿಗೆ ಬಿಲ್ಲುಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ವಿಶ್ವವಿದ್ಯಾಲಯವು ಬಿಲ್ಲುಗಳನ್ನು ಪಾವತಿಸಲು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

ಮುಂದುವರೆದು, ಮೆ. ಈಶ್ವರ್ ಎಂಟರ್ ಪ್ರೈಸಸ್, ಬಳ್ಳಾರಿ ರವರು ದಿನಾಂಕ: 06.12.2021 ರಂದು ಕುಲಸಚಿವರು(ಮೌಲ್ಯಮಾಪನ) ಮತ್ತು ಗೌರವಾನ್ವಿತ ಕುಲಪತಿಗಳಿಗೆ ಲೀಗಲ್ ನೋಟಿಸ್ ಕಳುಹಿಸಿರುತ್ತಾರೆ. ವಿಶ್ವವಿದ್ಯಾಲಯವು 25.01.2022 ರಂದು ಸದರಿ ನೋಟಿಸ್‌ಗೆ ಉತ್ತರವನ್ನು ನೀಡಲಾಗಿತ್ತು. ಮತ್ತು ಮೆ. ಈಶ್ವರ್ ಎಂಟರ್ ಪ್ರೈಸಸ್ ರವರಿಗೆ ಅಗತ್ಯ ದಾಖಲೆಗಳೊಂದಿಗೆ ಬಿಲ್ಲುಗಳನ್ನು ಸಲ್ಲಿಸಲು ಸೂಚಿಸಲಾಗಿತ್ತು. ಆದರೂ ಸದರಿಯವರು ಅಗತ್ಯ ದಾಖಲೆಗಳೊಂದಿಗೆ ಬಿಲ್ಲುಗಳನ್ನು ನಿಶ್ಚಿತ ಅವಧಿಯೊಳಗೆ ಸಲ್ಲಿಸಿರುವುದಿಲ್ಲ.

ಮೆ. ಈಶ್ವರ್ ಎಂಟರ್ ಪ್ರೈಸಸ್, ಬಳ್ಳಾರಿ ಇವರು ಸಲ್ಲಿಸಿದ ಬಿಲ್ಲುಗಳನ್ನು ಅಂದಿನ ಕುಲಸಚಿವರು(ಮೌಲ್ಯಮಾಪನ) ರಾದ ಪ್ರೊ. ರಮೇಶ್ ಕೆ ರವರು ಧೃಢಿಕರಿಸಿದ್ದಾರೆಂದು ಸಿಂಡಿಕೇಟ್ ಸಭೆಯ ಗಮನಕ್ಕೆ ತರಲಾಯಿತು.

**<u>ತೀರ್ಮಾನ</u>**

ದಿನಾಂಕ: 30.03.2022 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಸದರಿ ವಿಷಯವನ್ನು ಕೂಲಂಕೂಷವಾಗಿ ಚರ್ಚಿಸಿ, ಪರೀಕ್ಷಾಂಗ ವಿಭಾಗವು ವಾಹನಗಳನ್ನು ಬಳಸಿಕೊಂಡಿರುವುದು ದೃಢವಾಗಿರುವುದರಿಂದ, ಮಾನವಿಯತೆಯ ಹಿತದೃಷ್ಟಿಯಿಂದ ಸರಬರಾಜು ಆದೇಶವಿಲ್ಲದಿದ್ದರೂ ಮೆ. ಈಶ್ವರ್ ಎಂಟರ್ ಪ್ರೈಸಸ್‌ರವರಿಗೆ ಒಟ್ಟು ಮೊತ್ತ ರೂ.3,73,170/–ಗಳನ್ನು ಈ ಕೆಳಗೆ ನಮೂದಿಸಿದ ಷರತ್ತುಗಳೊಂದಿಗೆ ಪಾವತಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

**ಷರತ್ತುಗಳು:**

- ದಿನಾಂಕ: 06.12.2021 ಕುಲಸಚಿವರು(ಮೌಲ್ಯಮಾಪನ) ಮತ್ತು ಗೌರವಾನ್ವಿತ ಕುಲಪತಿಗಳಿಗೆ ಕಳುಹಿಸಿರುವ ಲೀಗಲ್ ನೋಟಿಸ್ ಬೇಷರತ್ತಾಗಿ ಹಿಂಪಡೆಯುವುದು.
- ಮೆ. ಈಶ್ವರ್ ಎಂಟರ್ ಪ್ರೈಸಸ್‌ರವರ ಸ್ವಾಧಿನದಲ್ಲಿರುವ ವಿಷಯದ ವಹಿವಾಟಿಗೆ ಸಂಬಂದಿಸಿದ ಎಲ್ಲಾ ಮೂಲ ವೋಚರ್ ಮತ್ತು ದಾಖಲೆಗಳನ್ನು ವಿಶ್ವವಿದ್ಯಾಲಯಕ್ಕೆ ಒಪ್ಪಿಸುವುದು.
- ಮೆ. ಈಶ್ವರ್ ಎಂಟರ್ ಪ್ರೈಸಸ್ ರವರಿಗೆ ಯಾವುದೇ ಬಡ್ಡಿ ಪಾವತಿಸಲಾಗುವುದಿಲ್ಲ. ಮತ್ತು ಪಾವತಿಸಬೇಕಾದ ಪಾವತಿಯು ಪೂರ್ಣ ಮತ್ತು ಅಂತಿಮ ಪರಿಹಾರದ ಮೂಲಕವಾಗಿರುತ್ತದೆ ಹಾಗೂ ಯಾವುದೇ ಇತರ ಮೊತ್ತವನ್ನು ಪಾವತಿಸಲಾಗುವುದಿಲ್ಲ.
- ಮೆ. ಈಶ್ವರ್ ಎಂಟರ್ ಪ್ರೈಸಸ್ ರವರು ಎಲ್ಲಾ ಷರತ್ತುಗಳನ್ನು ಒಪ್ಪಿಕೊಳ್ಳುತ್ತೇನೆಂದು ನೋಟರಿ ಪಬ್ಲಿಕ್‌ನಿಂದ ಧೃಡೀಕರಿಸಿದ ಅಫಿಡವಿಟ್‌ಅನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು.

ಮುಂದುವರೆದು, ಮುಂದಿನ ದಿನಗಳಲ್ಲಿ ಲೆಕ್ಕ ಪರಿಶೋಧನೆಯ ಆಕ್ಷೇಪಣೆ ಬಂದಲ್ಲಿ ಅಂದಿನ ಕುಲಸಚಿವರು(ಮೌಲ್ಯಮಾಪನ)ರಾದ ಪ್ರೊ. ರಮೇಶ್ ಕೆ. ರವರು ನೇರ ಹೊಣೆಗಾರರಾಗಿರುತ್ತಾರೆಂದು ಸಭೆಯು ನಿರ್ಣಯಿಸಿದೆ.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105

ಕುಲಸಚಿವರು

ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2022–23/ **241** ದಿನಾಂಕ: 30.04.2022

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ 11.04.2022 ರಂದು ಬೆಳಿಗ್ಗೆ 10:30 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 18.04.2022

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ 11.04.2022 ರಂದು ಬೆಳಿಗ್ಗೆ 10:30 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

ದಿನಾಂಕ 11.04.2022 ರಂದು ಬೆಳಿಗ್ಗೆ 10.30 ಗಂಟೆಗೆ
ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿ

**ಐಟಂ ನಂ. 01:**

ವಿಷಯ: 9ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸುವ ಕುರಿತು.

*****

ದಿನಾಂಕ: 12/04/2022 ರಂದು ಜರುಗಲಿರುವ ವಿಶ್ವವಿದ್ಯಾಲಯದ 9ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಮಾನ್ಯ ಘನತೆವೆತ್ತ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ಅನುಮೋದಿಸಿರುವ ಗಣ್ಯ ವ್ಯಕ್ತಿಗಳಿಗೆ ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಿ ಗೌರವಿಸಲು ವಿಶೇಷ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**<u>ತೀರ್ಮಾನ</u>**

ವಿಶ್ವವಿದ್ಯಾಲಯದ 9ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಲು ಮಾನ್ಯ ಘನತೆವೆತ್ತ ರಾಜ್ಯಪಾಲರು ಹಾಗೂ ಕುಲಾಧಿಪತಿಗಳ ಅನುಮೋದನೆ ದೊರೆತಿರುವ ಹಿನ್ನೆಲೆಯಲ್ಲಿ, ಸದರಿ ಸಭೆಯು ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಿ ಗೌರವಿಸಲು ಅನುಮೋದಿಸಿತು.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105

ಕುಲಸಚಿವರು


ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2022–23/**483** ದಿನಾಂಕ: 31.05.2022

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ 05.05.2022 ರಂದು ಬೆಳಿಗ್ಗೆ 11:00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 27.05.2022

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ 05.05.2022 ರಂದು ಬೆಳಿಗ್ಗೆ 11:00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 05.05.2022 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ

### ➲ ಐಟಂ ನಂ. 01:

ದಿನಾಂಕ. 26.03.2022, 30.03.2022 ಮತ್ತು 11.04.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮದ ವರದಿಯನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

**ತೀರ್ಮಾನ**

ದಿನಾಂಕ. 26.03.2022, 30.03.2022 ಮತ್ತು 11.04.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮಗಳ ವರದಿಗಳನ್ನು ಸಭೆಯು ದೃಢೀಕರಿಸಿ ಅನುಮೋದಿಸಿದೆ.

### ➲ ಐಟಂ ನಂ. 02:

ವಿಷಯ: ಮುಖ್ಯಸ್ಥರ ನೇಮಕಾತಿ, ಅಧ್ಯಯನ ಮಂಡಳಿ ರಚನೆ ಮತ್ತು ಎನ್‌ಓಸಿಯ ಪ್ರತಿ ಇವುಗಳನ್ನು ಸಿಂಡಿಕೇಟ್ ಸಭೆಯಲ್ಲಿ ಅನುಸಮರ್ಥಿಸುವ ಕುರಿತು.

****

ವಿಭಾಗದ ಮುಖ್ಯಸ್ಥರ ನೇಮಕಾತಿ ಆದೇಶ, ವಿಶ್ವವಿದ್ಯಾಲಯದ ಭೂಗೋಳಶಾಸ್ತ್ರ ಅಧ್ಯಯನ ಮಂಡಳಿ ರಚನೆಯ ಅಧಿಸೂಚನೆ ಮತ್ತು ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗೆ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಲು ನೀಡಿದ ನಿರಾಕ್ಷೇಪಣಾ ಪ್ರಮಾಣ ಪತ್ರ ಹೀಗೆ ಈ ಕೆಳಕಂಡವುಗಳನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

| ಕ್ರ.ಸಂ | ವಿವರ | ಅವಧಿ | ಅನುಸಮರ್ಥನೆಗೆ ಸಲ್ಲಿಸಿದವು |
|---|---|---|---|
| 01 | ಪ್ರೊ. ಜೀಲಾನ್‌ಬಾಷ ವಿ. ಮುಖ್ಯಸ್ಥರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. | 14.03.2022 ರಿಂದ ಅನ್ವಯಿಸಿ ಮುಂದಿನ ಎರಡು ವರ್ಷಗಳಿಗೆ ಅಥವಾ ಮುಂದಿನ ಆದೇಶದವರೆಗೆ | ಕಚೇರಿ ಆದೇಶ ಸಂಖ್ಯೆ: ವಿಶ್ರೀಕೃವಿಬ/ಡಿಪಿಎಆರ್‌ಬೋಧಕ/ಮುನೇ/2021–22/**2865** ದಿ. 29.03.2022 |
| 02 | ಭೂಗೋಳಶಾಸ್ತ್ರ ಅಧ್ಯಯನ ಮಂಡಳಿ ರಚನೆಯ ಅಧಿಸೂಚನೆ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. | ದಿನಾಂಕ 26.02.2022 ರಿಂದ ಅನ್ವಯಿಸಿ, ಮುಂದಿನ ಮೂರು ವರ್ಷಗಳಿಗೆ ಅಥವಾ ಮುಂದಿನ ಅಧಿಸೂಚನೆವರೆಗೆ | ಕಚೇರಿ ಅಧಿಸೂಚನೆ ಸಂಖ್ಯೆ: ವಿಶ್ರೀಕೃವಿಬ/ವಿ.ಮಂ.ವಿ/ಅಧ್ಯಯನ ಮಂಡಳಿ/2021–22/2807 ದಿನಾಂಕ 24.03.2022 |
| 03 | ಡಾ. ಚಾಂದ್ ಬಾಷಾ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ ಕೊಪ್ಪಳ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ಇವರು ಕೇಂದ್ರಿಯ ವಿಶ್ವವಿದ್ಯಾಲಯ, ಕಲ್ಬುರ್ಗಿ ಇಲ್ಲಿಗೆ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಸಲ್ಲಿಸಿರುತ್ತಾರೆ. | 19.09.2018 ರಿಂದ ವಿಶ್ರೀಕೃ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. | ನಿರಾಕ್ಷೇಪಣಾ ಪತ್ರ ಸಂಖ್ಯೆ: VSKUB/DPAR-Teaching/NOC/2022-23/65 Date: 18.04.2022 |

ತೀರ್ಮಾನ

ಮೇಲಿನ ಕಾರ್ಯಸೂಚಿಯ ಪಟ್ಟಿಯಲ್ಲಿನ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರ ನೇಮಿಸಿದ ಆದೇಶ, ವಿಶ್ವವಿದ್ಯಾಲಯದ ಭೂಗೋಳಶಾಸ್ತ್ರ ಅಧ್ಯಯನ ಮಂಡಳಿ ರಚನೆಯ ಅಧಿಸೂಚನೆ ಮತ್ತು ವಿಶ್ವವಿದ್ಯಾಲಯದ ಡಾ. ಚಾಂದ್ ಬಾಷಾ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ ಕೊಪ್ಪಳ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ಇವರಿಗೆ ಕೇಂದ್ರಿಯ ವಿಶ್ವವಿದ್ಯಾಲಯ, ಕಲ್ಬುರ್ಗಿ ಇಲ್ಲಿಗೆ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಲು ನೀಡಿದ ನಿರಾಕ್ಷೇಪಣಾ ಪ್ರಮಾಣ ಪತ್ರ ಇವುಗಳನ್ನು ಸಭೆಯು ಅನುಸಮರ್ಥಿಸಿದೆ.

**➲ ಐಟಂ ನಂ. 03**

ವಿಷಯ: ವಿಶ್ವವಿದ್ಯಾಲಯದ 2020–21ನೇ ಸಾಲಿನ AQAR ವರದಿ ಅನುಮೋದನೆ ಕುರಿತು.

ಉಲ್ಲೇಖ: ನಿರ್ದೇಶಕರು, ಐಕ್ಯೂಎಸಿ ಘಟಕ, ವಿಶ್ರೀಕೃ ವಿಶ್ವವಿದ್ಯಾಲಯ ಇವರ ಪತ್ರ ಸಂಖ್ಯೆ: ವಿಶ್ರೀಕೃವಿಬ/ಐಕ್ಯೂಎಸಿ–ಘ/2022–23/67 ದಿನಾಂಕ: 28.04.2022.

*****

ನಿರ್ದೇಶಕರು, ಐಕ್ಯೂಎಸಿ ಘಟಕ ಇವರು ವಿಶ್ವವಿದ್ಯಾಲಯದ 2020–21ನೇ ಸಾಲಿನ AQAR ವರದಿಯನ್ನು ಸಿದ್ಧಪಡಿಸಿ ಉಲ್ಲೇಖಿತ ಪತ್ರದೊಂದಿಗೆ ಸಲ್ಲಿಸಿದ್ದು, ಸದರಿ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

ತೀರ್ಮಾನ

ವಿಶ್ವವಿದ್ಯಾಲಯದ 2020–21ನೇ ಸಾಲಿನ AQAR ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ಸಭೆಯು ಸದರಿ ವರದಿಯನ್ನು ಅನುಮೋದಿಸಿದೆ.

**➲ ಐಟಂ ನಂ. 04**

ವಿಷಯ: ಉಪನ್ಯಾಸ ಮಾಲಿಕೆಯ ವಿಷಯ ತಜ್ಞರಿಗೆ ಗೌರವಧನ ಹಾಗೂ ಪ್ರಯಾಣ ಭತ್ಯೆ ನೀಡುವ ಕುರಿತು.

ಉಲ್ಲೇಖ: ದಿ. 28.04.2022 ರಂದು ಜರುಗಿದ ಪ್ರಸಾರಂಗ ಸಲಹಾ ಸಮಿತಿ ಸಭೆ ತೀರ್ಮಾನ ಸಂಖ್ಯೆ 02

*****

ದಿನಾಂಕ 28.04.2022 ರಂದು ಜರುಗಿದ ಪ್ರಸಾರಂಗದ ಸಲಹಾ ಸಮಿತಿ ಸಭೆಯು ಉಪನ್ಯಾಸ ಮಾಲಿಕೆಯಲ್ಲಿ ಭಾಗವಹಿಸುವ ವಿಷಯ ತಜ್ಞರಿಗೆ ಗೌರವ ಸಂಭಾವನೆ ಎರಡು ಸಾವಿರ ರೂಪಾಯಿಗಳನ್ನು ಮತ್ತು ಪ್ರಯಾಣ ಭತ್ಯೆಯ ಬಾಬ್ತು ವೆಚ್ಚದ ನೈಜ ಖರ್ಚಿನ ರಸೀದಿಯನ್ನು ನೀಡಿದಲ್ಲಿ ಅದನ್ನು ಯಥಾವತ್ತಾಗಿ ಭರಿಸುವುದು, ಇಲ್ಲದಿದಲ್ಲಿ ವಿಶ್ವವಿದ್ಯಾಲಯದ ನಿಯಮಾನುಸಾರ ಭರಿಸಲು ನಿರ್ಣಯಿಸಿರುವ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

ತೀರ್ಮಾನ

ಉಪನ್ಯಾಸ ಮಾಲಿಕೆಯಲ್ಲಿ ಭಾಗವಹಿಸುವ ವಿಷಯ ತಜ್ಞರಿಗೆ ಗೌರವ ಸಂಭಾವನೆ ಎರಡು ಸಾವಿರ ರೂಪಾಯಿಗಳನ್ನು ಮತ್ತು ಪ್ರಯಾಣ ಭತ್ಯೆಯ ಬಾಬ್ತು ವೆಚ್ಚದ ನೈಜ ಖರ್ಚಿನ ರಸೀದಿಯನ್ನು ನೀಡಿದಲ್ಲಿ ಅದನ್ನು ಯಥಾವತ್ತಾಗಿ ಭರಿಸುವುದು, ಇಲ್ಲದಿದಲ್ಲಿ ವಿಶ್ವವಿದ್ಯಾಲಯದ ನಿಯಮಾನುಸಾರ ಭರಿಸಲು ನಿರ್ಣಯಿಸಿರುವ ಪ್ರಸಾರಂಗದ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಭೆಯು ಅನುಮೋದಿಸಿದೆ.

➲ **ಐಟಂ ನಂ. 05**

ವಿಷಯ: ವಿವಿಧ ಕಾರ್ಯನೀತಿ(ಪಾಲಿಸಿ)ಗಳನ್ನು ಜಾರಿಗೆ ತರುವ ಕುರಿತು.

****

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಅಭಿವೃದ್ಧಿಗೊಳಿಸುವ ಕುರಿತು ಈ ಕೆಳಕಂಡ ಕಾರ್ಯನೀತಿಗಳನ್ನು (ಪಾಲಿಸಿ) ಜಾರಿಗೊಳಿಸಬೇಕಾಗಿದೆ.

1. Policy for Promotion of Research and Code of Ethics.
2. Policy for Financial Support to Teachers.
3. Grievance Redressal Policy.
4. IT Policy.
5. Policy on Environment and Energy Usage.
6. Policy for award of Scholarships and Freeships.
7. Green Campus Policy.
8. Policy on Scheme of Incentives to Teachers.

ಸದರಿ ಕಾರ್ಯನೀತಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯ ಜಾರಿಗೊಳಿಸಿದ ಕಾರ್ಯನೀತಿ (ಪಾಲಿಸಿ)ಗಳನ್ನು ಪರಿಶೀಲಿಸಿದ ಸಭೆಯು ವಿಶ್ವವಿದ್ಯಾಲಯದ ಅಭಿವೃದ್ಧಿ ದೃಷ್ಟಿಯಿಂದ ಕಾರ್ಯಸೂಚಿಯಲ್ಲಿ ಸೂಚಿತ ಪಾಲಿಸಿಗಳು ಸಹಾಯಕಾರಿಯಾಗುವ ಹಿನ್ನೆಲೆಯಲ್ಲಿ ಸಭೆಯು ಪರಿಶೀಲಿಸಿ ಅನುಮೋದಿಸಿದೆ.

➲ **ಐಟಂ ನಂ. 06**

**ವಿಷಯ:** ಶ್ರೀ ಲಕ್ಷ್ಮಿ ವೆಂಕಟೇಶ್ವರ ಶಿಕ್ಷಣ ಮಹಾವಿದ್ಯಾಲಯ, ಕೂಡ್ಲಿಗಿ 4ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಆಂತರಿಕ ಅಂಕಗಳು ಸಲ್ಲಿಕೆಯಲ್ಲಿ ವಿಳಂಬ ಹಾಗೂ ವ್ಯತ್ಯಾಸವಾಗಿರುವ ಕುರಿತು.

**ಉಲ್ಲೇಖ:** 1. ಸಂಖ್ಯೆ:ವಿಶ್ರೀಕೃವಿಬ/ಬಿ.ಇಡಿ/ಪರೀಕ್ಷಾ/ಆಂ.ಅಂ/2021–22/2129ದಿನಾಂಕ:24.03.2022
2. ಸಂಖ್ಯೆ ಕ್ರ.ಸಂ:ವಿಶ್ರೀಕೃವಿಬ/ಬಿ.ಇಡಿ–ಜ್ಞಾಪನ/ಪತ್ರ/2021–22/2253ದಿನಾಂಕ:31.03.2022
3. ಕ್ರ.ಸಂ.ವಿಶ್ರೀಕೃವಿಬ/ಬಿ.ಎಡ್–ಶೋಕಾಸ್/ನೋಟಿಸ್/2021–22/180 ದಿನಾಂಕ22.04.2022
4. ಸಂಖ್ಯೆ:ಎಸ್.ಎಲ್.ವಿ/ಬಿ.ಎಡ್/ಐ.ಎ/2022–23/786 ದಿನಾಂಕ: 25.04.2022

****

ಮಾರ್ಚ್–2022ರಲ್ಲಿ ಜರುಗಿದ ಬಿ.ಇಡಿ ಪದವಿಯ 4ನೇ ಸೆಮಿಸ್ಟರ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಶ್ರೀ ಲಕ್ಷ್ಮಿ ವೆಂಕಟೇಶ್ವರ ಶಿಕ್ಷಣ ಮಹಾವಿದ್ಯಾಲಯ, ಕೂಡ್ಲಿಗಿ ಇವರಿಗೆ ಆಂತರಿಕ ಅಂಕಗಳನ್ನು ಉಲ್ಲೇಖ(1)ರನ್ವಯ, ಪರೀಕ್ಷಾ ವಿಭಾಗಕ್ಕೆ ದಿನಾಂಕ: 30.03.2022ರೊಳಗಾಗಿ ಸಲ್ಲಿಸಲು ತಿಳಿಸಲಾಗಿತ್ತು. ಆದರೆ ಆಂತರಿಕ ಅಂಕಗಳನ್ನು ಸಲ್ಲಿಸದ ಕಾರಣ ಶ್ರೀ ಲಕ್ಷ್ಮಿ ವೆಂಕಟೇಶ್ವರ ಶಿಕ್ಷಣ ಮಹಾವಿದ್ಯಾಲಯ, ಕೂಡ್ಲಿಗಿರವರಿಗೆ ಉಲ್ಲೇಖ(2)ರ ಪ್ರಕಾರ ಜ್ಞಾಪನ ಪತ್ರವನ್ನು ಕಳುಹಿಸಲಾಗಿತ್ತು. ತದನಂತರ ಆಂತರಿಕ ಅಂಕಗಳನ್ನು ದಿನಾಂಕ: 05.04.2022 ಮತ್ತು 08.04.2022 ರಂದು ಎರಡು ಬಾರಿ ಸಲ್ಲಿಸಲಾಗಿದ್ದು, ಆಂತರಿಕ ಅಂಕಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಕ್ರಮ ಸಂಖ್ಯೆ 01 ಮತ್ತು 72 ರ ವಿದ್ಯಾರ್ಥಿಗಳ ಆಂತರಿಕ ಅಂಕಗಳಲ್ಲಿ ವ್ಯತ್ಯಾಸ ಕಂಡು ಬಂದಿರುತ್ತದೆ. ನೊಂದಣಿ ಸಂಖ್ಯೆ: E2014601 ಮೊದಲ ಬಾರಿ ಹಾಗೂ ಎರಡನೇ ಬಾರಿ ಸಲ್ಲಿಸಿದ ಆಂತರಿಕ ಅಂಕಗಳು ವ್ಯತ್ಯಾಸವಿದ್ದು ಹಾಗೂ ನೋಂದಣಿ ಸಂಖ್ಯೆ:E2014675 ಮೊದಲ ಬಾರಿ ಸಲ್ಲಿಸಿದಾಗ ಗೈರು ಹಾಜರಾಗಿದ್ದು, ಎರಡನೇ ಬಾರಿ ಸಲ್ಲಿಸಿದಾಗ ಹಾಜರಾತಿ ಎಂದು ಆಂತರಿಕ ಅಂಕಗಳು ನೀಡಿದ್ದು, ವಿಶ್ವವಿದ್ಯಾಲಯದ ನಿಯಮಾವಳಿಗಳ ಉಲ್ಲಂಘನೆಯಾಗಿದ್ದು, ವಿಳಂಬ ನೀತಿ, ಬೇಜವಾಬ್ದಾರಿ ಮತ್ತು ಸಂದೇಹಾತ್ಮಕವಾಗಿರುವುದರಿಂದ ಈ ಕುರಿತಂತೆ ಉಲ್ಲೇಖ(3)ರ ರನ್ವಯ, ದಿನಾಂಕ:22.04.2022 ರಂದು ಶೋಕಾಸ್ ನೋಟಿಸ್‌ನ್ನು ಸದರಿ ಮಹಾವಿದ್ಯಾಲಯಕ್ಕೆ ನೀಡಲಾಗಿತ್ತು. ಶ್ರೀ ಲಕ್ಷ್ಮಿ ವೆಂಕಟೇಶ್ವರ ಶಿಕ್ಷಣ

ಮಹಾವಿದ್ಯಾಲಯ, ಕೂಡ್ಲಿಗಿ ರವರು ಶೋಕಾಸ್ ನೋಟಿಸ್‌ಗೆ ಸಂಬಂಧಿಸಿದಂತೆ ಉಲ್ಲೇಖ(4)ರನ್ವಯ ದಿನಾಂಕ: 25.04.2022ರಂದು ಕ್ಷಮೆಯಾಚಿಸಿ ಪತ್ರವನ್ನು ಸಲ್ಲಿಸಿರುತ್ತಾರೆ. ಈ ಕುರಿತಂತೆ ಸೂಕ್ತ ಕ್ರಮ ಕೈಗೊಳ್ಳಲು ಮತ್ತು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಶ್ರೀ ಲಕ್ಷ್ಮಿ ವೆಂಕಟೇಶ್ವರ ಶಿಕ್ಷಣ ಮಹಾವಿದ್ಯಾಲಯ, ಕೂಡ್ಲಿಗಿ ಇಲ್ಲಿನ 4ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಆಂತರಿಕ ಅಂಕಗಳು ಸಲ್ಲಿಕೆಯಲ್ಲಿ ವಿಳಂಬ ಹಾಗೂ ವ್ಯತ್ಯಾಸವಾಗಿರುವ ಕುರಿತಾಗಿ ಗಂಭೀರವಾಗಿ ಚರ್ಚಿಸಿದ ಸಭೆಯು ಈ ವಿಷಯದ ಪರಿಶೀಲನೆಗಾಗಿ ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚನೆ ಮಾಡಲು ತೀರ್ಮಾನಿಸಿತು. ಮುಂದುವರೆದು, ಸದರಿ ಸಮಿತಿಯು ಪ್ರಕರಣದ ಕುರಿತು ಪರಿಶೀಲಿಸಿ 15 ದಿನಗಳ ಒಳಗಾಗಿ ತನ್ನ ವರದಿಯನ್ನು ಸಲ್ಲಿಸಲು ಸೂಚಿಸಿದೆ.

### ➲ ಐಟಂ ನಂ. 07

**ವಿಷಯ:** ಸ್ನಾತಕ ಪರೀಕ್ಷೆಗಳಲ್ಲಿ ಅಕ್ರಮವೆಸಗಿದ ವಿದ್ಯಾರ್ಥಿಗಳ ವಿಚಾರಣಾ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು.

****

ಸೆಪ್ಟೆಂಬರ್–2021 ಹಾಗೂ ಜನವರಿ–2022ರ ತಿಂಗಳುಗಳಲ್ಲಿ ಜರುಗಿದ ಸ್ನಾತಕ ಪರೀಕ್ಷೆಗಳಲ್ಲಿ ಅಕ್ರಮವೆಸಗಿದ ವಿದ್ಯಾರ್ಥಿಗಳಿಗೆ ದಿನಾಂಕ: 15.03.2022 ರಂದು ವಿಚಾರಣಾ ಸಮಿತಿ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಸೆಪ್ಟೆಂಬರ್–2021 ಹಾಗೂ ಜನವರಿ–2022ರ ತಿಂಗಳುಗಳಲ್ಲಿ ಜರುಗಿದ ಸ್ನಾತಕ ಪರೀಕ್ಷೆಗಳಲ್ಲಿ ಅಕ್ರಮವೆಸಗಿದ ವಿದ್ಯಾರ್ಥಿಗಳ ಎಂ.ಪಿ.ಸಿ ಸಭೆಯಲ್ಲಿನ ಪರೀಕ್ಷಾ ಕೈಪಿಡಿ ನಿಯಮಾವಳಿ ಆರ್–2 ಕಂಡಿಕೆ ಕ್ರ.ಸಂ–04 ರನ್ವಯ ಸದರಿ ವಿದ್ಯಾರ್ಥಿಗಳಿಗೆ ಮುಂಬರುವ ಒಂದು ಪರೀಕ್ಷೆಗೆ (ಪುನರಾವರ್ತಿತ ವಿದ್ಯಾರ್ಥಿಗಳ ಸಹಿತ)ನಿರ್ಬಂಧ ಹಾಗೂ ರೂ.500/–ದಂಡ ವಿಧಿಸುವ ಜೊತೆಗೆ ಸೆಪ್ಟೆಂಬರ್–2021 ಹಾಗೂ ಜನವರಿ–2022ರ ತಿಂಗಳುಗಳಲ್ಲಿ ಜರುಗಿದ ಸ್ನಾತಕ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ತಡೆಹಿಡಿಯಲಾಗಿದೆ.

ಮುಂದುವರೆದು, ಪರೀಕ್ಷಾ ಅಕ್ರಮ ನಿಯಮಾವಳಿಗಳಲ್ಲಿ ಸಾಕಷ್ಟು ಬದಲಾವಣೆ ತರುವ ಅಗತ್ಯತೆ ಕುರಿತು ಚರ್ಚಿಸಿದ ಸಭೆಯು ಈ ಕುರಿತು ವಿಶ್ವವಿದ್ಯಾಲಯ ಮಟ್ಟದ ಸಮಿತಿಯೊಂದನ್ನು ರಚಿಸಲು ನಿರ್ಧಾರ ಕೈಗೊಂಡಿತು. ಈ ಸಮಿತಿಯ ಶಿಫಾರಸ್ಸುಗಳನ್ನು ಪರೀಕ್ಷಾ ಕೈಪಿಡಿಯಲ್ಲಿ ಸೇರಿಸಲು ಸಭೆಯು ಸಲಹೆ ನೀಡಿತು.

ಮೇಲ್ಕಂಡ ಎಲ್ಲಾ ಎಂ.ಪಿ.ಸಿ ಸಭೆಯ ಕ್ರಮಗಳನ್ನು ಸಭೆಯು ಅನುಮೋದಿಸಿದೆ.

### ➲ ಐಟಂ ನಂ. 08

ವಿಷಯ: 2 ಸೀಟರ್ ಬೆಂಚ್‌ಗಳನ್ನು ಖರೀದಿಸಲು ಆಡಳಿತಾತ್ಮಕ ಅನುಮೋದನೆ ಪಡೆಯುವ ಕುರಿತು

*****

ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ಜೀವ ವಿಜ್ಞಾನ (Life Science) ಕಟ್ಟಡದಲ್ಲಿ ತರಗತಿಗಳನ್ನು ನಡೆಸಲು ಅವಶ್ಯವಿರುವ 250 ಸಂಖ್ಯೆಗಳ 2 ಸೀಟರ್ ಬೆಂಚ್‌ಗಳು ಮತ್ತು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಯಲಬುರ್ಗಾದಲ್ಲಿ ತರಗತಿಗಳನ್ನು ನಡೆಸಲು ಅವಶ್ಯವಿರುವ 100 ಸಂಖ್ಯೆಗಳ 2 ಸೀಟರ್ ಬೆಂಚ್‌ಗಳು ಸೇರಿದಂತೆ ಒಟ್ಟು 350 ಸಂಖ್ಯೆಗಳ 2 ಸೀಟರ್ ಬೆಂಚ್‌ಗಳನ್ನು ಟೆಂಡರ್ ಮೂಲಕ ಖರೀದಿಸಲು ಆಡಳಿತಾತ್ಮಕ ಅನುಮೋದನೆಗಾಗಿ ಸಿಂಡಿಕೇಟ್ ಸಭೆಗೆ ಮಂಡಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿನ ಜೀನ ವಿಜ್ಞಾನ ಮತ್ತು ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ ಕಟ್ಟಡಗಳಿಗೆ ಒಟ್ಟು 350 ಸಂಖ್ಯೆ 2 ಸೀಟರ್ ಬೆಂಚ್‌ಗಳನ್ನು ಟೆಂಡರ್ ಮೂಲಕ ಖರೀದಿಸಲು ಸಭೆಯು ಆಡಳಿತಾತ್ಮಕ ಅನುಮೋದನೆ ನೀಡಿದೆ.

**➲ ಐಟಂ ನಂ. 09**

ವಿಷಯ: ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

***

ದಿನಾಂಕ 26.04.2022 ರಂದು ಕಟ್ಟಡ ಸಲಹಾ ಸಮಿತಿ ಸಭೆಯು ಜರುಗಿದ್ದು, ಈ ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ದಿನಾಂಕ 26.04.2022ರ ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಈ ಕೆಳಕಂಡಂತೆ ವಿಷಯವಾರು ದೃಢೀಕರಿಸಿ ಅನುಮೋದಿಸಿತು.

ವಿಷಯ:–01. ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿ ವಾಣಿಜ್ಯ & ನಿರ್ವಹಣಾಶಾಸ್ತ್ರ ಕಟ್ಟಡ (ನೆಲಮಹಡಿ & ಮೊದಲ ಮಹಡಿ) ನಿರ್ಮಾಣ ಕಾಮಗಾರಿಯ ಟೆಂಡರನ್ನು ಅನುಮೋದಿಸುವ ಕುರಿತು. ಅಂದಾಜು ವೆಚ್ಚ: ರೂ. 675.00 ಲಕ್ಷಗಳು (ಲೋಕೋಪಯೋಗಿ ಇಲಾಖೆ, ಬಳ್ಳಾರಿ ವಲಯದ 2018–19ನೇ ಸಾಲಿನ ಸಿವಿಲ್ ದರಪಟ್ಟಿ, 2019–20ನೇ ಸಾಲಿನ ವಿದ್ಯುತ್ ದರಪಟ್ಟಿ ಹಾಗೂ ಮಾರುಕಟ್ಟೆ ದರಗಳನ್ವಯ)

**ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನ**

ಮೇಲಿನ ಕಾಮಗಾರಿಯ ಟೆಂಡರಿನಲ್ಲಿ (ಸಿವಿಲ್ ಕೆಲಸಗಳಿಗೆ 12% GST ಹೊರತುಪಡಿಸಿ) ಮೊದಲನೆ ಕಡಿಮೆ ದರ ರೂ. 5,44,95,667.01 (ರೂಪಾಯಿ ಐದು ಕೋಟಿ ನಲವತ್ತನಾಲ್ಕು ಲಕ್ಷದ ತೊಂಬತ್ತೈದು ಸಾವಿರದ ಆರುನೂರ ಅರವತ್ತೇಳು ಮತ್ತು ಪೈಸೆ ಒಂದು ಮಾತ್ರ) ನಮೂದಿಸಿದ Sri. V.B. PRASADA REDDY, Class I PWD Contractor, Bangalore ಇವರ ಟೆಂಡರನ್ನು ಪರಿಗಣಿಸಿ ಒಪ್ಪಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಮುಖ್ಯ ಆವರಣದ ವಾಣಿಜ್ಯ & ನಿರ್ವಹಣಾಶಾಸ್ತ್ರ ಕಟ್ಟಡ (ನೆಲಮಹಡಿ & ಮೊದಲ ಮಹಡಿ) ನಿರ್ಮಾಣ ಕಾಮಗಾರಿಯ ಟೆಂಡರಿನಲ್ಲಿ (ಸಿವಿಲ್ ಕೆಲಸಗಳಿಗೆ 12% GST ಹೊರತುಪಡಿಸಿ) ಮೊದಲನೆ ಕಡಿಮೆ ದರ ರೂ. 5,44,95,667.01 (ರೂಪಾಯಿ ಐದು ಕೋಟಿ ನಲವತ್ತನಾಲ್ಕು ಲಕ್ಷದ ತೊಂಬತ್ತೈದು ಸಾವಿರದ ಆರುನೂರ ಅರವತ್ತೇಳು ಮತ್ತು ಪೈಸೆ ಒಂದು ಮಾತ್ರ) ನಮೂದಿಸಿದ Sri. V.B. PRASADA REDDY, Class I PWD Contractor, Bangalore ಇವರ ಟೆಂಡರನ್ನು ಪರಿಗಣಿಸಿ ಒಪ್ಪಲಾದ ಕಟ್ಟಡ ಸಲಹಾ ಸಮಿತಿ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

ವಿಷಯ:–02. ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿ ಸಾಮಾನ್ಯ ವಿದ್ಯಾರ್ಥಿಗಳ ವಸತಿನಿಲಯ ಕಟ್ಟಡ (ನೆಲಮಹಡಿ, ಮೊದಲಮಹಡಿ & ಎರಡನೆ ಮಹಡಿ) ನಿರ್ಮಾಣ ಕಾಮಗಾರಿಯ ಟೆಂಡರನ್ನು ಅನುಮೋದಿಸುವ ಕುರಿತು. ಅಂದಾಜು ವೆಚ್ಚ: ರೂ. 495.00 ಲಕ್ಷಗಳು (ಲೋಕೋಪಯೋಗಿ ಇಲಾಖೆ, ಬಳ್ಳಾರಿ ವಲಯದ 2018–19ನೇ ಸಾಲಿನ ಸಿವಿಲ್ ದರಪಟ್ಟಿ, 2019–20ನೇ ಸಾಲಿನ ವಿದ್ಯುತ್ ದರಪಟ್ಟಿ ಹಾಗೂ ಮಾರುಕಟ್ಟೆ ದರಗಳನ್ವಯ)

**ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನ**

ಮೇಲಿನ ಕಾಮಗಾರಿಯ ಟೆಂಡರಿನಲ್ಲಿ (ಸಿವಿಲ್ ಕೆಲಸಗಳಿಗೆ 12% GST ಹೊರತುಪಡಿಸಿ) ಮೊದಲನೆ ಕಡಿಮೆ ದರ ರೂ. 4,15,80,088.83 (ರೂಪಾಯಿ ನಾಲ್ಕು ಕೋಟಿ ಹದಿನೈದು ಲಕ್ಷದ ಎಂಬತ್ತು ಸಾವಿರದ ಎಂಬತ್ತೆಂಟು ಮತ್ತು ಎಂಬತ್ತಮೂರು ಪೈಸೆ ಮಾತ್ರ) ನಮೂದಿಸಿದ M/S Sri Srinivasa Constructions India Pvt. Ltd., Ballari. ಇವರ ಟೆಂಡರನ್ನು ಪರಿಗಣಿಸಿ ಒಪ್ಪಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಮುಖ್ಯ ಆವರಣದ ಸಾಮಾನ್ಯ ವಿದ್ಯಾರ್ಥಿಗಳ ವಸತಿನಿಲಯ ಕಟ್ಟಡ (ನೆಲಮಹಡಿ, ಮೊದಲಮಹಡಿ & ಎರಡನೆ ಮಹಡಿ) ನಿರ್ಮಾಣ ಕಾಮಗಾರಿಯ ಟೆಂಡರಿನಲ್ಲಿ (ಸಿವಿಲ್ ಕೆಲಸಗಳಿಗೆ 12% GST ಹೊರತುಪಡಿಸಿ) ಮೊದಲನೆ ಕಡಿಮೆ ದರ ರೂ. 4,15,80,088.83 (ರೂಪಾಯಿ ನಾಲ್ಕು ಕೋಟಿ ಹದಿನೈದು ಲಕ್ಷದ ಎಂಬತ್ತು ಸಾವಿರದ ಎಂಬತ್ತೆಂಟು ಮತ್ತು ಎಂಬತ್ತಮೂರು ಪೈಸೆ ಮಾತ್ರ) ನಮೂದಿಸಿದ M/S Sri Srinivasa Constructions India Pvt. Ltd., Ballari. ಇವರ ಟೆಂಡರನ್ನು ಪರಿಗಣಿಸಿ ಒಪ್ಪಲಾದ ಕಟ್ಟಡ ಸಲಹಾ ಸಮಿತಿ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

ವಿಷಯ:–03. ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿ Centre of Excellence for Multidisciplinary Advanced Research Facility ಕಟ್ಟಡ (ನೆಲಮಹಡಿ & ಮೊದಲಮಹಡಿ) ನಿರ್ಮಾಣ ಕಾಮಗಾರಿಯ ಟೆಂಡರನ್ನು ಅನುಮೋದಿಸುವ ಕುರಿತು. ಅಂದಾಜು ವೆಚ್ಚ: ರೂ. 325.00 ಲಕ್ಷಗಳು (ಲೋಕೋಪಯೋಗಿ ಇಲಾಖೆ, ಬಳ್ಳಾರಿ ವಲಯದ 2018–19ನೇ ಸಾಲಿನ ಸಿವಿಲ್ ದರಪಟ್ಟಿ, 2019–20ನೇ ಸಾಲಿನ ವಿದ್ಯುತ್ ದರಪಟ್ಟಿ ದರಗಳನ್ವಯ)

**ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನ**

ಮೇಲಿನ ಕಾಮಗಾರಿಯ ಟೆಂಡರಿನಲ್ಲಿ (ಸಿವಿಲ್ ಕೆಲಸಗಳಿಗೆ 12% GST ಹೊರತುಪಡಿಸಿ) ಮೊದಲನೆ ಕಡಿಮೆ ದರ ರೂ. 2,72,34,359.03 (ರೂಪಾಯಿ ಎರಡು ಕೋಟಿ ಎಪ್ಪತ್ತೆರಡು ಲಕ್ಷದ ಮೂವತ್ತನಾಲ್ಕು ಸಾವಿರದ ಮೂರುನೂರ ಐವತ್ತೊಂಬತ್ತು ಮತ್ತು ಪೈಸೆ ಮೂರು ಮಾತ್ರ) ನಮೂದಿಸಿದ Sri. V.B. PRASADA REDDY, Class I PWD Contractor, Bangalore ಇವರ ಟೆಂಡರನ್ನು ಪರಿಗಣಿಸಿ ಒಪ್ಪಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಮುಖ್ಯ ಆವರಣದಲ್ಲಿ Centre of Excellence for Multidisciplinary Advanced Research Facility ಕಟ್ಟಡ (ನೆಲಮಹಡಿ & ಮೊದಲಮಹಡಿ) ನಿರ್ಮಾಣ ಕಾಮಗಾರಿಯ ಟೆಂಡರಿನಲ್ಲಿ (ಸಿವಿಲ್ ಕೆಲಸಗಳಿಗೆ 12% GST ಹೊರತುಪಡಿಸಿ) ಮೊದಲನೆ ಕಡಿಮೆ ದರ ರೂ. 2,72,34,359.03 (ರೂಪಾಯಿ ಎರಡು ಕೋಟಿ ಎಪ್ಪತ್ತೆರಡು ಲಕ್ಷದ ಮೂವತ್ತನಾಲ್ಕು ಸಾವಿರದ ಮೂರುನೂರ ಐವತ್ತೊಂಬತ್ತು ಮತ್ತು ಪೈಸೆ ಮೂರು ಮಾತ್ರ) ನಮೂದಿಸಿದ Sri. V.B. PRASADA REDDY, Class I PWD Contractor, Bangalore ಇವರ ಟೆಂಡರನ್ನು ಪರಿಗಣಿಸಿ ಒಪ್ಪಲಾದ ಕಟ್ಟಡ ಸಲಹಾ ಸಮಿತಿ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

➲ **ಐಟಂ ನಂ. 10**

ವಿಷಯ: ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Clerk/Computer Operator/ Data Entry Operator/Lab Technician) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾವನೆಯನ್ನು ಮರುಮಂಡಿಸುವ ಕುರಿತು.

ಉಲ್ಲೇಖ: ದಿನಾಂಕ 30.03.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನ ಸಂಖ್ಯೆ 11

******

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Clerk/Computer Operator/ Data Entry Operator/Lab Technician) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ದಿನಾಂಕ: 27.12.2021 ರಂದು ಟೆಂಡರ್ ಅಧಿಸೂಚನೆ ಹೊರಡಿಸಿದ್ದು, ತಾಂತ್ರಿಕ ಬಿಡ್‌ನಲ್ಲಿ 07 ಬಿಡ್‌ದಾರರು ಭಾಗವಹಿಸಿದರೇ, ಈ ಟೆಂಡರ್ ಸಮಿತಿ ಸಭೆಯಲ್ಲಿ ಟೆಂಡರ್‌ದಾರರ ದಾಖಲೆಗಳನ್ನು ಪರಿಶೀಲಿಸಿದಲ್ಲಿ 06 ಬಿಡ್‌ದಾರರು ಅರ್ಹರಾಗಿರುತ್ತಾರೆ. ನಂತರ ಫೈನಾನ್ಸಿಯಲ್ ಬಿಡ್ ತೆರೆದು ಈ ಟೆಂಡರ್ ಸಮಿತಿ ಸಭೆಯಲ್ಲಿ ಚರ್ಚಿಸಿ ಟೆಂಡರ್ ನಿಯಮಾನುಸಾರ L-01 ಬಿಡ್‌ದಾರರಿಗೆ ಟೆಂಡರ್ ನೀಡಲು ಈ ಟೆಂಡರ್ ಸಮಿತಿ ಸಭೆಯು ತೀರ್ಮಾನಿಸಿರುತ್ತದೆ. ಉಲ್ಲೇಖಿತ ಸಭೆಯಲ್ಲಿ L–01 ಬಿಡ್‌ದಾರರಿಗೆ ಟೆಂಡರ್ ನೀಡಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿತ್ತು. ಆದರೆ ಆ ಸಭೆಯಲ್ಲಿ ಸದರಿ L-01 ಬಿಡ್‌ದಾರರು ಸದ್ಯ ಚಾಲ್ತಿಯಲ್ಲಿರುವ ಬಿಡ್‌ದಾರರು ಒಬ್ಬರೇ ಆಗಿರುವ ಹಿನ್ನೆಲೆಯಲ್ಲಿ ಏಜೇನ್ಸಿಯವರು ಎಲ್ಲಾ ದಾಖಲೆಗಳನ್ನು ಮುಂಬರುವ ಸಿಂಡಿಕೇಟ್ ಸಭೆಗೆ ಪ್ರಸ್ತುತಪಡಿಸಿದ ನಂತರ ದಾಖಲೆಗಳ ಪರಿಶೀಲನೆ ನಡೆಸಿ ನಿರ್ಧಾರ ಕೈಗೊಳ್ಳುವ ತೀರ್ಮಾನವನ್ನು ಕೈಗೊಂಡ ಹಿನ್ನೆಲೆಯಲ್ಲಿ ಎಲ್ಲಾ ದಾಖಲೆಗಳೊಂದಿಗೆ ಸದರಿ ವಿಷಯವನ್ನು ಈ ಸಭೆಯಲ್ಲಿ ಮರು ಮಂಡಿಸಿದೆ.

**ತೀರ್ಮಾನ**

ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Clerk/Computer Operator/ Data Entry Operator/Lab Technician) ಮಾನವ ಶಕ್ತಿಗಳನ್ನು ಒದಗಿಸುವ ಟೆಂಡರ್ ಕುರಿತಾಗಿ ದಿನಾಂಕ 28.01.2022 ರಂದು ತಾಂತ್ರಿಕ ಬಿಡ್ ತೆರೆದು ದಿನಾಂಕ 14.02.2022 ರಂದು 07 ಬಿಡ್‌ದಾರರ ದಾಖಲೆಗಳನ್ನು ಪರಿಶೀಲಿಸಿದ ಟೆಂಡರ್ ಸಮಿತಿ 06 ಬಿಡ್ ದಾರರನ್ನು ಅರ್ಹರಾಗಿರುತ್ತಾರೆ. ನಂತರ ದಿನಾಂಕ 23.02.2022 ರಂದು ಫೈನಾನ್ಸಿಯಲ್ ಬಿಡ್ ತೆರೆದು ದಿನಾಂಕ 28.02.2022 ರಂದು ಟೆಂಡರ್ ಸಮಿತಿ ಟೆಂಡರ್ ನಿಯಮಾನುಸಾರ L-01 ಬಿಡ್ ದಾರರಿಗೆ ಟೆಂಡರ್ ನೀಡಲು ತೀರ್ಮಾನಿಸಿದೆ. ಆದರೆ ಸಿಂಡಿಕೇಟ್ ಸಭೆಯು ಟೆಂಡರ್ ಸಮಿತಿಯ ತೀರ್ಮಾನವನ್ನು ಮತ್ತು ಎಲ್ಲಾ ಬಿಡ್‌ದಾರರ ದಾಖಲೆಗಳನ್ನು ಮತ್ತೊಮ್ಮೆ ಪರಿಶೀಲಿಸಿ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸೂಚಿಸಿದೆ. ಮುಂದುವರೆದು, ಸದ್ಯ ಚಾಲ್ತಿಯಲ್ಲಿರುವ ಆಡಳಿತ ಕೆಲಸಗಳಿಗೆ ಅಗತ್ಯವಾದ (Clerk/Computer Operator/ Data Entry Operator/Lab Technician) ಮಾನವ ಶಕ್ತಿಗಳನ್ನು ಒದಗಿಸುವ ಟೆಂಡರ್‌ದಾರರನ್ನು ಮುಂದಿನ ಆದೇಶವರೆಗೆ ಮುಂದುವರೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿದೆ.

➲ **ಐಟಂ ನಂ. 11**

ವಿಷಯ: ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Attender/Peon/Cleaning of office/ Sweeper/other unskilled & Driver, & Scavenger) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾವನೆಯನ್ನು ಮರು ಮಂಡಿಸುವ ಕುರಿತು.

ಉಲ್ಲೇಖ: ದಿನಾಂಕ 30.03.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನ ಸಂಖ್ಯೆ 12

******

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Attender/Peon/Cleaning of office/ Sweeper/other unskilled & Driver, & Scavenger) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ದಿನಾಂಕ: 27.12.2021 ರಂದು ಟೆಂಡರ್ ಅಧಿಸೂಚನೆ ಹೊರಡಿಸಿದ್ದು, ತಾಂತ್ರಿಕ ಬಿಡ್‌ನಲ್ಲಿ 06 ಬಿಡ್‌ದಾರರು ಭಾಗವಹಿಸಿದರೇ, ತಾಂತ್ರಿಕ ಬಿಡ್‌ಗೆ ಸಂಬಂಧಿಸಿದ ಈ ಟೆಂಡರ್ ಸಮಿತಿ ಸಭೆಯಲ್ಲಿ ಟೆಂಡರ್‌ದಾರರ ದಾಖಲೆಗಳನ್ನು ಪರಿಶೀಲಿಸಲಾಗಿ 05 ಬಿಡ್‌ದಾರರು ಅರ್ಹರಾಗಿರುತ್ತಾರೆ. ಫೈನಾನ್ಸಿಯಲ್ ಬಿಡ್ ತೆರೆದು ಈ ಟೆಂಡರ್ ಸಮಿತಿ ಸಭೆಯಲ್ಲಿ ಚರ್ಚಿಸಿ ಟೆಂಡರ್ ನಿಯಮಾನುಸಾರ L-01 ಬಿಡ್‌ದಾರರಿಗೆ ಟೆಂಡರ್ ನೀಡಲು ಈ ಟೆಂಡರ್ ಸಮಿತಿ ಸಭೆಯು ತೀರ್ಮಾನಿಸಿರುತ್ತದೆ. ಉಲ್ಲೇಖಿತ ಸಭೆಯಲ್ಲಿ L–01 ಬಿಡ್‌ದಾರರಿಗೆ ಟೆಂಡರ್ ನೀಡಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿತ್ತು. ಆದರೆ ಆ ಸಭೆಯಲ್ಲಿ ಸದರಿ L-01 ಬಿಡ್‌ದಾರರು ಸದ್ಯ ಚಾಲ್ತಿಯಲ್ಲಿರುವ ಬಿಡ್‌ದಾರರು ಒಬ್ಬರೇ ಆಗಿರುವ ಹಿನ್ನೆಲೆಯಲ್ಲಿ ಏಜೇನ್ಸಿಯವರು ಎಲ್ಲಾ ದಾಖಲೆಗಳನ್ನು ಮುಂಬರುವ ಸಿಂಡಿಕೇಟ್ ಸಭೆಗೆ ಪ್ರಸ್ತುತಪಡಿಸಿದ ನಂತರ ದಾಖಲೆಗಳ ಪರಿಶೀಲನೆ ನಡೆಸಿ ನಿರ್ಧಾರ ಕೈಗೊಳ್ಳುವ ತೀರ್ಮಾನವನ್ನು ಕೈಗೊಂಡ ಹಿನ್ನೆಲೆಯಲ್ಲಿ ಎಲ್ಲಾ ದಾಖಲೆಗಳೊಂದಿಗೆ ಸದರಿ ವಿಷಯವನ್ನು ಈ ಸಭೆಯಲ್ಲಿ ಮರು ಮಂಡಿಸಿದೆ.

**ತೀರ್ಮಾನ**

ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Attender/Peon/Cleaning of office/ Sweeper/other unskilled & Driver, & Scavenger) ಮಾನವ ಶಕ್ತಿಗಳನ್ನು ಒದಗಿಸುವ ಟೆಂಡರ್ ಕುರಿತಾಗಿ ದಿನಾಂಕ 28.01.2022 ರಂದು ತಾಂತ್ರಿಕ ಬಿಡ್ ತೆರೆದು ದಿನಾಂಕ 14.02.2022 ರಂದು 06 ಬಿಡ್ ದಾರರ ದಾಖಲೆಗಳನ್ನು ಪರಿಶೀಲಿಸಿದ ಟೆಂಡರ್ ಸಮಿತಿ 05 ಬಿಡ್ ದಾರರನ್ನು ಅರ್ಹರಾಗಿರುತ್ತಾರೆ. ನಂತರ ದಿನಾಂಕ 23.02.2022 ರಂದು ಫೈನಾನ್ಸಿಯಲ್ ಬಿಡ್ ತೆರೆದು ದಿನಾಂಕ 28.02.2022 ರಂದು ಟೆಂಡರ್ ಸಮಿತಿ ಟೆಂಡರ್ ನಿಯಮಾನುಸಾರ L-01 ಬಿಡ್ ದಾರರಿಗೆ ಟೆಂಡರ್ ನೀಡಲು ತೀರ್ಮಾನಿಸಿದೆ. ಆದರೆ ಸಿಂಡಿಕೇಟ್ ಸಭೆಯು ಟೆಂಡರ್ ಸಮಿತಿಯ ತೀರ್ಮಾನವನ್ನು ಮತ್ತು ಎಲ್ಲಾ ಬಿಡ್ ದಾರರ ದಾಖಲೆಗಳನ್ನು ಮತ್ತೊಮ್ಮೆ ಪರಿಶೀಲಿಸಿ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಸೂಚಿಸಿದೆ. ಮುಂದುವರೆದು, ಸದ್ಯ ಚಾಲ್ತಿಯಲ್ಲಿರುವ ಆಡಳಿತ ಕೆಲಸಗಳಿಗೆ ಅಗತ್ಯವಾದ (Attender/Peon/Cleaning of office/ Sweeper/other unskilled & Driver, & Scavenger) ಮಾನವ ಶಕ್ತಿಗಳನ್ನು ಒದಗಿಸುವ ಟೆಂಡರ್‌ದಾರರನ್ನು ಮುಂದಿನ ಆದೇಶವರೆಗೆ ಮುಂದುವರೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿದೆ.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು

**➲ ಐಟಂ ನಂ. 01**

ವಿಷಯ: ಪ್ರಸಾರಂಗ ವಿಭಾಗದ ನಿರ್ದೇಶಕರನ್ನು ನೇಮಿಸುವ ಕುರಿತು.

*****

ವಿಶ್ವವಿದ್ಯಾಲಯದ ಪ್ರಸಾರಂಗದ ವಿಭಾಗದ ನೂತನ ನಿರ್ದೇಶಕರನ್ನು ನೇಮಿಸಲಾಗುತ್ತಿದ್ದು, ಹೀಗಾಗಿ ಸೂಕ್ತರನ್ನು ಪ್ರಸಾರಂಗ ವಿಭಾಗದ ನಿರ್ದೇಶಕರನ್ನಾಗಿ ನೇಮಿಸುವ ವಿಷಯವನ್ನು ಸಿಂಡಿಕೇಟ್ ಸಭೆಯ ತೀರ್ಮಾನಕ್ಕಾಗಿ ಸಲ್ಲಿಸಿದೆ.

**ತೀರ್ಮಾನ**

ಸದರಿ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮುಂದೂಡಲಾಯಿತು.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105

ಕುಲಸಚಿವರು

ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2022–23/**802** ದಿನಾಂಕ: 19.07.2022

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ 21.06.2022 ರಂದು ಮಧ್ಯಾಹ್ನ 04:00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 24.06.2022

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ 21.06.2022 ರಂದು ಮಧ್ಯಾಹ್ನ 04:00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

# ದಿನಾಂಕ 21.06.2022 ರಂದು ಮಧ್ಯಾಹ್ನ 04.00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿ

**ಐಟಂ ನಂ. 01:**

**ವಿಷಯ:** 2022–23ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಮತ್ತು ಶಿಕ್ಷಣ ಮಹಾವಿದ್ಯಾಲಯಗಳ ಸಂಯೋಜನ ವರದಿ ಸಲ್ಲಿಸುವ ಕುರಿತು.

*****

2022–23ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಮತ್ತು ಶಿಕ್ಷಣ ಮಹಾವಿದ್ಯಾಲಯಗಳ Consolidated Score and Recommendation report ನ್ನು ವಿಶೇಷ ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ವಿವಿಧ ಮಹಾವಿದ್ಯಾಲಯಗಳ 2022–23ನೇ ಸಾಲಿನ ಸ್ಥಳೀಯ ಪರಿವೀಕ್ಷಣಾ ಸಮಿತಿಯ ವರದಿಗಳನ್ನು ಪರಿಶೀಲಿಸಿ ಈ ಕೆಳಗಿನಂತೆ ಸಭೆಯು ತೀರ್ಮಾನಿಸಿದೆ.

- ಹೊಸ ಕಾಲೇಜು ಪ್ರಾರಂಭಿಸಲು ಸಲ್ಲಿಸಿದ ಸಂಯೋಜನಾ ಅರ್ಜಿಗಳಲ್ಲಿ ನಿಗದಿತ (45) ಅಂಕಗಳಿಸಿದ ಹಾಗೂ 8 Defined Parameterಗಳನ್ನು ಪೂರೈಸಿದ ಅರ್ಜಿಗಳನ್ನು ಮಾತ್ರ ಸರಕಾರದ ಅನುಮೋದನೆಗೆ ಕಳುಹಿಸಲು ಸಭೆಯು ನಿರ್ಧರಿಸಿದೆ. (ಸದರಿ ವಿಷಯದ ಪಟ್ಟಿ ಅನುಬಂಧ–1 ಲಗತ್ತಿಸಲಾಗಿದೆ.)
- ಹೊಸ ಕೋರ್ಸ್ ಪ್ರಾರಂಭಿಸಲು ಮಹಾವಿದ್ಯಾಲಯಗಳು ಸಲ್ಲಿಸಿದ ಅರ್ಜಿಗಳಲ್ಲಿ ನಿಗದಿತ (55) ಅಂಕಗಳಿಸಿದ ಹಾಗೂ 8 Defined Parameterಗಳನ್ನು ಪೂರೈಸಿದ ಅರ್ಜಿಗಳನ್ನು ಮಾತ್ರ ಸರಕಾರದ ಅನುಮೋದನೆಗಾಗಿ ಕಳುಹಿಸಲು ಸಭೆಯು ನಿರ್ಧರಿಸಿದೆ. (ಸದರಿ ವಿಷಯದ ಪಟ್ಟಿ ಅನುಬಂಧ–2 ಲಗತ್ತಿಸಲಾಗಿದೆ.)
- ಪ್ರವೇಶಾತಿ ಮಿತಿ ಹೆಚ್ಚಳಕ್ಕೆ ಅರ್ಜಿ ಸಲ್ಲಿಸಿದ ಮಹಾವಿದ್ಯಾಲಯಗಳು ನಿಗದಿತ ಅಂಕ (50) ಗಳಿಸಿದ ಹಾಗೂ 8 Defined Parameterಗಳನ್ನು ಪೂರೈಸಿದ ಪ್ರವೇಶಾತಿ ಮಿತಿ ಹೆಚ್ಚಳವನ್ನು ಸ್ಥಳೀಯ ಪರಿವೀಕ್ಷಣಾ ಸಮಿತಿ ಶಿಫಾರಸ್ಸುಗಳನ್ನು ಸಭೆಯು ಅನುಮೋದಿಸಿದೆ. (ಸದರಿ ವಿಷಯದ ಪಟ್ಟಿ ಅನುಬಂಧ–3 & 3.1 ಲಗತ್ತಿಸಲಾಗಿದೆ.)
- ಶಾಶ್ವತ ಸಂಯೋಜನೆ ನವೀಕರಣಕ್ಕೆ ಸಲ್ಲಿಸಿದ ಅರ್ಜಿಗಳಲ್ಲಿ ನಿಗದಿತ (70) ಅಂಕಗಳಿಸಿದ ಹಾಗೂ 8 Defined Parameterಗಳನ್ನು ಪೂರೈಸಿದ ಕಾಲೇಜುಗಳಿಗೆ ವಿಶ್ವವಿದ್ಯಾಲಯ ಮಟ್ಟದಲ್ಲೇ ನವೀಕರಣವನ್ನು ಸಭೆಯು ಅನುಮೋದಿಸಿದೆ. (ಸದರಿ ವಿಷಯದ ಪಟ್ಟಿ ಅನುಬಂಧ–4 ಲಗತ್ತಿಸಲಾಗಿದೆ.)
- ಹೊಸ ಶಾಶ್ವತ ಸಂಯೋಜನೆಗೆ ಮಹಾವಿದ್ಯಾಲಯಗಳು ಸಲ್ಲಿಸಿದ ಅರ್ಜಿಗಳಲ್ಲಿ ನಿಗದಿತ (60) ಅಂಕಗಳಿಸಿದ ಹಾಗೂ 8 Defined Parameterಗಳನ್ನು ಪೂರೈಸಿದ ಅರ್ಜಿಯನ್ನು ಮಾತ್ರ ಸರಕಾರದ ಅನುಮೋದನೆಗೆ ಕಳುಹಿಸಲು ಸಭೆಯು ನಿರ್ಧರಿಸಿದೆ. (ಸದರಿ ವಿಷಯದ ಪಟ್ಟಿ ಅನುಬಂಧ–5 ಲಗತ್ತಿಸಲಾಗಿದೆ.)

- ತಾತ್ಕಾಲಿಕ ಸಂಯೋಜನೆ ಮುಂದುವರಿಕೆಗೆ ಅರ್ಜಿ ಸಲ್ಲಿಸಿದ ಮಹಾವಿದ್ಯಾಲಯಗಳು ನಿಗದಿತ ಅಂಕ (45) ಗಳಿಸಿದ ಹಾಗೂ 8 Defined Parameterಗಳನ್ನು ಪೂರೈಸಿದ ಅರ್ಜಿಗಳಿಗೆ ಮುಂದುವರಿಕೆ ಸಂಯೋಜನೆ ನೀಡಲು ಸಭೆಯು ಅನುಮೋದಿಸಿದೆ. (ಸದರಿ ವಿಷಯದ ಪಟ್ಟಿ ಅನುಬಂಧ–6 ಲಗತ್ತಿಸಲಾಗಿದೆ.)
- ತಾತ್ಕಾಲಿಕ ಸಂಯೋಜನೆ ಮುಂದುವರಿಕೆಗೆ ಅರ್ಜಿ ಸಲ್ಲಿಸಿದ ಮಹಾವಿದ್ಯಾಲಯಗಳು ನಿಗದಿತ ಅಂಕ (45) ಕ್ಕಿಂತ ಕಡಿಮೆ ಅಂಕ ಗಳಿಸಿದ ಮಹಾವಿದ್ಯಾಲಯಗಳಿಗೆ 45 ಅಂಕಗಳನ್ನು ಗಳಿಸಲು ಹಾಗೂ 8 Defined Parameterಗಳನ್ನು ಪೂರೈಸಲು ಅವಶ್ಯವಿರುವ ಸೌಲಭ್ಯಗಳನ್ನು ಒದಗಿಸಿದ ಅನುಪಾಲನ ವರದಿಯನ್ನು ಒಂದು ತಿಂಗಳ ಕಾಲಾವಕಾಶದಲ್ಲಿ ಸಲ್ಲಿಸಲು ಸೂಚಿಸಿ ಮುಂದುವರಿಕೆಗೆ ಅನುಮೋದನೆ ನೀಡಲಾಗಿದೆ. (ಸದರಿ ವಿಷಯದ ಪಟ್ಟಿ ಅನುಬಂಧ–7 ಲಗತ್ತಿಸಲಾಗಿದೆ.)
- ಸಂಯೋಜನಾ ಅರ್ಜಿ ಸಲ್ಲಿಸದೆ ಇರುವ 06 ಮಹಾವಿದ್ಯಾಲಯಗಳ ಸಂಯೋಜನೆಯನ್ನು ಸ್ಥಗಿತಗೊಳಿಸಲು ತೀರ್ಮಾನಿಸಿ, ಈ ಕುರಿತು ಮಹಾವಿದ್ಯಾಲಯಗಳಿಗೆ ಪತ್ರ ಬರೆಯಲು ಸಭೆಯು ಸೂಚಿಸಿದೆ. (ಸದರಿ ವಿಷಯದ ಪಟ್ಟಿ ಅನುಬಂಧ–8 ಲಗತ್ತಿಸಲಾಗಿದೆ.)
- ಅರ್ಜಿ ಸಲ್ಲಿಸಿದ 03 ಸಂಖ್ಯೆ ಮಹಾವಿದ್ಯಾಲಯಗಳ ಹೆಸರು ಬದಲಾವಣೆಗೆ ಸಭೆಯು ಅನುಮೋದಿಸಿದೆ. (ಸದರಿ ವಿಷಯದ ಪಟ್ಟಿ ಅನುಬಂಧ–9 ಲಗತ್ತಿಸಲಾಗಿದೆ.)
- ವಿಳಾಸ ಬದಲಾವಣೆಗೆ ಅರ್ಜಿ ಸಲ್ಲಿಸಿದ 01 ಸಂಖ್ಯೆ ಮಹಾವಿದ್ಯಾಲಯದ ವಿಳಾಸ ಬದಲಾವಣೆಯ ಅನುಮೋದನೆಯನ್ನು ಸಭೆಯು ತಿರಸ್ಕರಿಸಿದೆ. (ಸದರಿ ವಿಷಯದ ಪಟ್ಟಿ ಅನುಬಂಧ–10 ಲಗತ್ತಿಸಲಾಗಿದೆ.)

➲ **ಐಟಂ ನಂ. 02:**

ವಿಷಯ: 2022–23ನೇ ಶೈಕ್ಷಣಿಕ ವರ್ಷದಿಂದ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ MCA, PG Diploma in Yoga/ Certification Programme in Yoga ಕೋರ್ಸ್‌ಗಳನ್ನು ಪ್ರಾರಂಭಿಸುವ ಕುರಿತು.

***

ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ 2022–23ನೇ ಶೈಕ್ಷಣಿಕ ಸಾಲಿನಿಂದ ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್, PG Diploma in Yoga/ Certification Programme in Yoga (which Shall be a Concurrent Programme) ಪ್ರಾರಂಭಿಸಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಸದರಿ ವಿಷಯದ ಕುರಿತಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ 2022–23ನೇ ಶೈಕ್ಷಣಿಕ ಸಾಲಿನಿಂದ ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್, PG Diploma in Yoga/ Certification Programme in Yoga (which Shall be a Concurrent Programme) ಪ್ರಾರಂಭಿಸಲು ಸಭೆಯು ಅನುಮೋದಿಸಿದೆ.

➲ **ಐಟಂ ನಂ. 03:**

ವಿಷಯ: 2022–23ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾಲಯದ ಸ್ನಾತಕ, ಸ್ನಾತಕೋತ್ತರ ಪದವಿ, ಬಿ.ಇಡಿ, ಬಿ.ಪಿ.ಇಡಿ ಮತ್ತು ಪಿಹೆಚ್.ಡಿ ಪ್ರವೇಶ, ಪರೀಕ್ಷಾ ವಿಭಾಗದ ಶುಲ್ಕ, ಸಂಯೋಜನಾ ಶುಲ್ಕ ಹಾಗೂ ಇತರೆ ಶುಲ್ಕಗಳ ನಿಗದಿ ಕುರಿತು.

ಉಲ್ಲೇಖ: 1. ಈ ಕಛೇರಿ ಅಧಿಸೂಚನೆ ಸಂಖ್ಯೆ: ವಿಶ್ರೀಕೃವಿಬ/ವಿಮವಿ/ಶೈ.ವೇ.ಪ–ಶು.ಪ–ಪ್ರ.ಅ/2022–23/299 ದಿನಾಂಕ : 06/05/2022
2. ಈ ಕಛೇರಿ ಸಭೆ ಸೂಚಿ ಸಂಖ್ಯೆ: ವಿಶ್ರೀಕೃವಿಬ/ವಿಮವಿ/ಸಭೆಯಸೂಚಿ/2022–22/300 ದಿನಾಂಕ : 06/05/2022

*****

2022–23ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾಲಯದ ಸ್ನಾತಕ, ಸ್ನಾತಕೋತ್ತರ ಪದವಿ, ಬಿ.ಇಡಿ, ಬಿ.ಪಿ.ಇಡಿ ಮತ್ತು ಪಿಹೆಚ್.ಡಿ ಪ್ರವೇಶ, ಪರೀಕ್ಷಾ ವಿಭಾಗದ ಶುಲ್ಕ, ಸಂಯೋಜನಾ ಶುಲ್ಕ ಹಾಗೂ ಇತರೆ ಶುಲ್ಕಗಳ

ನಿಗದಿಪಡಿಸುವ ಸಂಬಂಧ ಉಲ್ಲೇಖ–01 ರನ್ವಯ ಸಮಿತಿಯನ್ನು ರಚಿಸಿದೆ. ನಂತರ ಸದರಿ ಸಮಿತಿಯು ಉಲ್ಲೇಖ–02 ರನ್ವಯ ದಿನಾಂಕ 11.05.2022 ರಂದು ಸದರಿ ವಿಷಯದ ಕುರಿತಾಗಿ ಸಭೆಯನ್ನು ಸೇರಿ ಸ್ನಾತಕ, ಸ್ನಾತಕೋತ್ತರ ಪದವಿ, ಬಿ.ಇಡಿ, ಬಿ.ಪಿ.ಇಡಿ ಮತ್ತು ಪಿಹೆಚ್.ಡಿ ಪ್ರವೇಶ, ಪರೀಕ್ಷಾ ವಿಭಾಗದ ಶುಲ್ಕ, ಸಂಯೋಜನಾ ಶುಲ್ಕ ಹಾಗೂ ಇತರೆ ಶುಲ್ಕಗಳ ನಿಗದಿ ಕುರಿತಾಗಿ ಚರ್ಚಿಸಿ ಸಭೆಯು ನಡಾವಳಿಯನ್ನು ಸಲ್ಲಿಸಿದ್ದು, ಸದರಿ ನಡಾವಳಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

2022–23ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾಲಯದ ಸ್ನಾತಕ, ಸ್ನಾತಕೋತ್ತರ ಪದವಿ, ಬಿ.ಇಡಿ, ಬಿ.ಪಿ.ಇಡಿ ಮತ್ತು ಪಿಹೆಚ್.ಡಿ ಪ್ರವೇಶ, ಪರೀಕ್ಷಾ ವಿಭಾಗದ ಶುಲ್ಕ, ಸಂಯೋಜನಾ ಶುಲ್ಕ ಹಾಗೂ ಇತರೆ ಶುಲ್ಕಗಳ ಕುರಿತ ಶುಲ್ಕ ನಿಗದಿ ಸಮಿತಿ ಸಭೆ ಸಲ್ಲಿಸಿದೆ ನಡಾವಳಿಯನ್ನು ಪರಿಶೀಲಿಸಿದ ಸಭೆಯು ಯಥಾವತ್ತಾಗಿ ಅನುಮೋದನೆ ನೀಡಿದೆ.

- ವಿಶ್ವವಿದ್ಯಾಲಯದ ಸ್ನಾತಕ/ಸ್ನಾತಕೋತ್ತರ ಪದವಿ, ಬಿ.ಇಡಿ/ಬಿ.ಪಿ.ಇಡಿ, ಪಿ.ಹೆಚ್‌ಡಿ, ಮತ್ತು ಕಾಲೇಜು ಅಭಿವೃದ್ಧಿ ಮಂಡಳಿಯ ಸಂಯೋಜನಾ ಶುಲ್ಕಗಳನ್ನು ಶೇ. 20%ರಷ್ಟು ಹೆಚ್ಚಿಸಲು ಸಭೆಯು ತೀರ್ಮಾನಿಸಿದೆ. ಮುಂದುವರೆದು, ಕರ್ನಾಟಕ ಸರ್ಕಾರದಿಂದ ಪರಿಷ್ಕೃತ ಶುಲ್ಕವನ್ನು ಹೊರಡಿಸಿದಲ್ಲಿ ಮುಂದಿನ ದಿನಗಳಲ್ಲಿ ಅಳವಡಿಸಿಕೊಳ್ಳಲು ಸೂಚಿಸಿರುವ ಶುಲ್ಕ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.
- ಪರೀಕ್ಷಾ ವಿಭಾಗದ ಎಲ್ಲಾ ಮಾದರಿಯ ಶುಲ್ಕಗಳ ಕುರಿತಾಗಿಯೂ ಸಹ ಶೇ. 20%ರಷ್ಟು ಹೆಚ್ಚಳವಾಗಿರುವ ಶುಲ್ಕವನ್ನು Round off ಮಾಡಲು ಸೂಚಿಸಿ, ಸ್ನಾತಕ/ಸ್ನಾತಕೋತ್ತರ ಪದವಿ ಹಾಗೂ ಬಿ.ಇಡಿ/ಬಿ.ಪಿ.ಇಡಿ ಪದವಿ ಕೋರ್ಸ್‌ಗಳ ಪರೀಕ್ಷಾ ಶುಲ್ಕ ನಿಗದಿಪಡಿಸಿದ ಕೊನೆಯ ದಿನಾಂಕದ ನಂತರದ ಹೆಚ್ಚುವರಿ ಶುಲ್ಕ ಪ್ರತಿ ದಿನಕ್ಕೆ ರೂ.200/– ಐದು ದಿನದ ವರೆಗೆ, ಆರನೇ ದಿನದಿಂದ ಹತ್ತನೇ ದಿನಗಳವರೆಗೆ ಪ್ರತಿ ದಿನ ರೂ.500/– ಹನ್ನೊಂದನೆ ದಿನದಿಂದ ಮೂವತ್ತು ದಿನಗಳವರೆಗೆ ರೂ.7000/– ಮೂವತ್ತು ದಿನಗಳ ನಂತರ ರೂ.10,000/– ದಂಡ ಶುಲ್ಕವನ್ನು ನಿಗದಿಪಡಿಸಲು ಸಭೆಯು ತೀರ್ಮಾನಿಸಿದೆ.
- ಇತರೆ ಶುಲ್ಕಗಳಲ್ಲಿಯೂ ಸಹ ಶೇ. 20%ರಷ್ಟು ಹೆಚ್ಚಿಸಲು ಸಭೆಯು ತೀರ್ಮಾನಿಸಿದ್ದು, 2022–23ನೇ ಶೈಕ್ಷಣಿಕ ಸಾಲಿನ ವಿದ್ಯಾಮಂಡಲ ವಿಭಾಗದ ವಿವಿಧ ಬಗೆಯ ಶುಲ್ಕವನ್ನು ರಾಜ್ಯ ಸರ್ಕಾ ನಿಗದಿಪಡಿಸಿರುವ ವಿವಿಧ ಶುಲ್ಕ ಮಾದರಿಗಳನ್ನು ಹೊರತುಪಡಿಸಿ ಇನ್ನುಳಿದ ಶುಲ್ಕಗಳನ್ನು ಶೇ. 20%ರಷ್ಟು ಹೆಚ್ಚಳ ಮಾಡುವ ಶುಲ್ಕ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.
- 2021–22ರ 2ನೇ ಸೆಮಿಸ್ಟರ್, 2022–23ನೇ ಶೈಕ್ಷಣಿಕ ಸಾಲಿನ 2,4 ಸೆಮಿಸ್ಟರ್ ಹಾಗೂ ಮುಂದಿನ ಶೈಕ್ಷಣಿಕ ಸಾಳಿನ 2,4 ಹಾಗೂ 5ನೇ ಸೆಮಿಸ್ಟರ್‌ನ ಎಲ್ಲಾ ಸ್ನಾತಕ/ಸ್ನಾತಕೋತ್ತರ ಪದವಿ ಹಾಗೂ ಬಿ.ಇಡಿ/ಬಿ.ಪಿ.ಇಡಿ ಪದವಿ ತರಗತಿಗಳ ಸೆಮಿಸ್ಟರ್‌ಗಳಿಗೆ UUCMS Portal ಮುಖಾಂತರ Registration ಮಾಡಿಕೊಳ್ಳುವ ವಿದ್ಯಾರ್ಥಿಗಳಿಗೆ ರೂ. 250/–(GM/OBC) ಮತ್ತು ರೂ.125/–(SC/ST/Cat-01) ಪ್ರವೇಶ ಶುಲ್ಕವನ್ನು ನಿಗದಿಪಡಿಸುವ ಶುಲ್ಕ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.
- ಕಾಲೇಜು ಅಭಿವೃದ್ಧಿ ಮಂಡಳಿ ಶುಲ್ಕಗಳ ಕುರಿತಾಗಿ, ಶುಲ್ಕ ಸಮಿತಿ ಸಭೆಯ ತೀರ್ಮಾನವನ್ನು ಈಗಾಗಲೇ ಅಳವಡಿಸಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಸದರಿ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿದೆ.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

| | | |
|---|---|---|
| | # ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ<br>"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105 | |
| ಕುಲಸಚಿವರು | | |

ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2022–23/ **1171** ದಿನಾಂಕ: 01.09.2022

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿಯಲ್ಲಿ ದಿನಾಂಕ 20.07.2022 ರಂದು ಬೆಳಿಗ್ಗೆ 11:30 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 26.07.2022

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿಯಲ್ಲಿ ದಿನಾಂಕ 20.07.2022 ರಂದು ಬೆಳಿಗ್ಗೆ 11:30 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 20.07.2022 ರಂದು ಬೆಳಿಗ್ಗೆ 11.30 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ

### ➲ ಐಟಂ ನಂ. 01:

ದಿನಾಂಕ. 05.05.2022, ಮತ್ತು 21.06.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮದ ವರದಿಯನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

ತೀರ್ಮಾನ

ದಿನಾಂಕ. 05.05.2022, ಮತ್ತು 21.06.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮದ ವರದಿಯನ್ನು ಸಭೆಯು ದೃಢೀಕರಿಸಿ ಅನುಮೋದಿಸಿದೆ.

### ➲ ಐಟಂ ನಂ. 02:

ವಿಷಯ: ಮುಖ್ಯಸ್ಥರ, ಗ್ರಂಥಪಾಲಕರ ನೇಮಕಾತಿ, ಮತ್ತು ಎನ್‌ಓಸಿಯ ಪ್ರತಿ ಇವುಗಳನ್ನು ಸಿಂಡಿಕೇಟ್ ಸಭೆಯಲ್ಲಿ ಅನುಸಮರ್ಥಿಸುವ ಕುರಿತು.

****

ವಿಭಾಗದ ಮುಖ್ಯಸ್ಥರ & ಗ್ರಂಥಪಾಲಕರ ನೇಮಕಾತಿ ಆದೇಶ, ಮತ್ತು ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗೆ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಲು ನೀಡಿದ ನಿರಾಕ್ಷೇಪಣಾ ಪ್ರಮಾಣ ಪತ್ರ ಹೀಗೆ ಈ ಕೆಳಕಂಡವುಗಳನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

| ಕ್ರಸಂ 1 | ವಿವರ 2 | ಅವಧಿ 3 | ಅನುಸಮರ್ಥನೆಗೆ ಸಲ್ಲಿಸಿದವು 4 | ಸಿಂಡಿಕೇಟ್ ಸಭೆಯ ತೀರ್ಮಾನ 5 |
|---|---|---|---|---|
| 01 | ಡಾ. ಅಂಶುಮಾಲಿ ಎಂ.ಕೆ. ಮುಖ್ಯಸ್ಥರು, ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. | 01.05.2022 ರಿಂದ ಅನ್ವಯಿಸಿ ಮುಂದಿನ ಎರಡು ವರ್ಷಗಳಿಗೆ ಅಥವಾ ಮುಂದಿನ ಆದೇಶದವರೆಗೆ | ಕಛೇರಿ ಆದೇಶ ಸಂಖ್ಯೆ: ವಿಶ್ರೀಕೃವಿಬ/ ಡಿಪಿಎಆರ್‌ಬೋಧಕ/ಮುನೇ/2022–23/**288** ದಿ. 05.05.2022 | ಅನುಸಮರ್ಥಿಸಿದೆ. |
| 02 | ಪ್ರೊ. ಭೀಮನಗೌಡ, ಗ್ರಂಥಪಾಲಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. | ದಿನಾಂಕ 01.05.2022 ರಿಂದ ಅನ್ವಯಿಸಿ, ಮುಂದಿನ ಆದೇಶದವರೆಗೆ | ಕಛೇರಿ ಆದೇಶ ಸಂಖ್ಯೆ: ವಿಶ್ರೀಕೃವಿಬ/ ಡಿಪಿಎಆರ್/ಬೋಧಕ/2022–23/295ದಿನಾಂಕ 05.05.2022 | ಅನುಸಮರ್ಥಿಸಿದೆ. |
| 03 | ಶ್ರೀ. ರಾಕೇಶ್ ವಿ. ತಾಳಿಕೋಟಿ ಸಹಾಯಕ ಪ್ರಾಧ್ಯಾಪಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ಇವರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿ ಪಿ.ಹೆಚ್‌ಡಿ ಪ್ರವೇಶ ಅರ್ಜಿ ಸಲ್ಲಿಸಿರುತ್ತಾರೆ. | 25.05.2019 ರಿಂದ ವಿಶ್ರೀಕೃ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. | ಕಛೇರಿ ಆದೇಶ ಸಂಖ್ಯೆ:ವಿಶ್ರೀಕೃವಿಬ/ ಡಿಪಿಎಆರ್‌ಬೋಧಕ/ನಿ.ಪ್ರ.ಪ/2022–23/466 ದಿನಾಂಕ 30.05.2022 | ಅನುಸಮರ್ಥಿಸಿದೆ. |
| 04 | ಡಾ. ನಿರಂಜನ್ ಆರ್, ಸಹಾಯಕ ಪ್ರಾಧ್ಯಾಪಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ಇವರು ಇಂಡಿಯನ್ ಇನಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್, ತಿರುಚಿಪಳ್ಳಿ ಇಲ್ಲಿಗೆ ಸಹಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಿರುತ್ತಾರೆ. | 26.11.2012 ರಿಂದ ವಿಶ್ರೀಕೃ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. | ನಿರಾಕ್ಷೇಪಣಾ ಪತ್ರ ಸಂಖ್ಯೆ: VSKUB/ DPAR-Teaching/NOC/2022-23/ 529 Date: 10.06.2022 | ಅನುಮೋದಿಸಿರುವುದಿಲ್ಲ. |

| | | | | |
|---|---|---|---|---|
| 05 | ಡಾ. ಸಾಹೇಬ್ ಅಲಿ ಹೆಚ್. ನಿರಗುಡಿ, ಸಹ ಪ್ರಾಧ್ಯಾಪಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ಇವರು ಕೇಂದ್ರಿಯ ವಿಶ್ವವಿದ್ಯಾಲಯ, ಕಲ್ಬುರ್ಗಿ ಇಲ್ಲಿಗೆ ಸಹಪ್ರಾಧ್ಯಾಪಕ/ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಿರುತ್ತಾರೆ. | 25.05.2019 ರಿಂದ ವಿಶ್ರೀಕೃ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. | ನಿರಾಕ್ಷೇಪಣಾ ಪತ್ರ ಸಂಖ್ಯೆ: VSKUB/ DPAR-Teaching/NOC/2022-23/ 558 Date: 15.06.2022 | ಅನುಮೋದಿಸಿರುವುದಿಲ್ಲ. |
| 06 | ಡಾ. ಗೌರಿ ಮಾಣಿಕ ಮಾನಸ, ಸಹ ಪ್ರಾಧ್ಯಾಪಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ಇವರು ಕೇಂದ್ರಿಯ ವಿಶ್ವವಿದ್ಯಾಲಯ, ಕಲ್ಬುರ್ಗಿ ಇಲ್ಲಿಗೆ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಸಲ್ಲಿಸಿರುತ್ತಾರೆ. | 25.05.2019 ರಿಂದ ವಿಶ್ರೀಕೃ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. | ನಿರಾಕ್ಷೇಪಣಾ ಪತ್ರ ಸಂಖ್ಯೆ: VSKUB/ DPARTeaching/NOC/2022-23/551 Date: 15.06.2022 | ಅನುಮೋದಿಸಿರುವುದಿಲ್ಲ. |
| 07 | ಡಾ. ಪವಿತ್ರಾ ರವಿಂದ್ರಾ ಆಲೂರ್, ಸಹಾಯಕ ಪ್ರಾಧ್ಯಾಪಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ಇವರು ಕೇಂದ್ರಿಯ ವಿಶ್ವವಿದ್ಯಾಲಯ, ಕಲ್ಬುರ್ಗಿ ಇಲ್ಲಿಗೆ ಸಹ/ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಸಲ್ಲಿಸಿರುತ್ತಾರೆ. | 16.10.2012 ರಿಂದ ವಿಶ್ರೀಕೃ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. | ನಿರಾಕ್ಷೇಪಣಾ ಪತ್ರ ಸಂಖ್ಯೆ: VSKUB/DPAR-Teaching/NOC/2022-23/550 Date: 15.06.2022 | ಅನುಮೋದಿಸಿರುವುದಿಲ್ಲ. |
| 08 | ಡಾ. ಅನಂತ ಎಲ್. ಝುಂಡೇಕರ್, ಸಹ ಪ್ರಾಧ್ಯಾಪಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ಇವರು ಕೇಂದ್ರಿಯ ವಿಶ್ವವಿದ್ಯಾಲಯ, ಕಲ್ಬುರ್ಗಿ ಇಲ್ಲಿಗೆ ಸಹ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಸಲ್ಲಿಸಿರುತ್ತಾರೆ. | 25.05.2019 ರಿಂದ ವಿಶ್ರೀಕೃವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. | ನಿರಾಕ್ಷೇಪಣಾ ಪತ್ರ ಸಂಖ್ಯೆ: VSKUB/DPAR-Teaching/NOC/2022-23/553 Date: 15.06.2022 | ಅನುಮೋದಿಸಿರುವುದಿಲ್ಲ. |
| 09 | ಡಾ. ಕವಿತಾ ಸಾಗರ್, ಸಹಾಯಕ ಪ್ರಾಧ್ಯಾಪಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ಇವರು ಕೇಂದ್ರಿಯ ವಿಶ್ವವಿದ್ಯಾಲಯ, ಕಲ್ಬುರ್ಗಿ ಇಲ್ಲಿಗೆ ಸಹ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಸಲ್ಲಿಸಿರುತ್ತಾರೆ. | 10.09.2018 ರಿಂದ ವಿಶ್ರೀಕೃ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. | ನಿರಾಕ್ಷೇಪಣಾ ಪತ್ರ ಸಂಖ್ಯೆ: VSKUB/DPAR-Teaching/NOC/2022-23/669 Date: 24.06.2022 | ಅನುಮೋದಿಸಿರುವುದಿಲ್ಲ. |
| 10 | ಡಾ. ಪಿ.ಎಸ್. ಶಶಿಧರ್, ಮುಖ್ಯಸ್ಥರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. | 22.02.2022 ರಿಂದ ಅನ್ವಯಿಸಿ ಮುಂದಿನ ಎರಡು ವರ್ಷಗಳಿಗೆ ಅಥವಾ ಮುಂದಿನ ಆದೇಶದವರೆಗೆ | ಕಛೇರಿ ಆದೇಶ ಸಂಖ್ಯೆ: ವಿಶ್ರೀಕೃವಿಬ/ ಡಿಪಿಎಆರ್‌ಬೋಧಕ/ಮುನೇ/2022–23/711 ದಿ. 01.07.2022 | ಅನುಸಮರ್ಥಿಸಿದೆ. |

ತೀರ್ಮಾನ

ಸದರಿ ವಿಷಯಗಳಿಗೆ ಸಂಬಂಧಿಸಿದಂತೆ ಸಭೆಯು ಕೋಷ್ಟಕದ 5ನೇ ಕಾಲಂನಂತೆ ತೀರ್ಮಾನಿಸಿದೆ.

### ➲ ಐಟಂ ನಂ. 03

ವಿಷಯ: ಡೀನರ ನೇಮಕಾತಿಯನ್ನು ಸಿಂಡಿಕೇಟ್ ಸಭೆಯಲ್ಲಿ ಅನುಸಮರ್ಥಿಸುವ ಕುರಿತು.

ಉಲ್ಲೇಖ: 1. ಈ ಕಛೇರಿ ಅಧಿಸೂಚನೆ ಸಂಖ್ಯೆ: ವಿಶ್ರೀಕೃವಿಬ/ಡಿಪಿಎಆರ್–ಭೋಧಕ/ಡೀ.ನೇ/ 2022–23/279 ದಿನಾಂಕ: 04.05.2022

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 04.05.2022

***

ಈ ಕೆಳಕಂಡ ಪ್ರಾಧ್ಯಾಪಕರನ್ನು ಶುದ್ಧ ವಿಜ್ಞಾನ ನಿಕಾಯ ಮತ್ತು ಅನ್ವಯಿಕ ವಿಜ್ಞಾನ ನಿಕಾಯದ ಡೀನರಾಗಿ ಜವಾಬ್ದಾರಿಯನ್ನು ನಿರ್ವಹಿಸಲು ಸೂಚಿಸಿ ನೇಮಕ ಮಾಡಿ ಹೊರಡಿಸಿದ ಉಲ್ಲೇಖಿತ ಅಧಿಸೂಚನೆ ಹೊರಡಿಸಿದ್ದು, ಸದರಿ ನೇಮಕಾತಿಯನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

| ಕ್ರ.ಸಂ | ವಿವರ | ಅವಧಿ | ಅನುಸಮರ್ಥನೆಗೆ ಸಲ್ಲಿಸಿದವು |
|---|---|---|---|
| 01 | ಪ್ರೊ. ವಿಜಯಕುಮಾರ್ ಬ. ಮಲಶೆಟ್ಟಿ ಡೀನರು, ಶುದ್ಧ ವಿಜ್ಞಾನ ನಿಕಾಯ ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ | ದಿನಾಂಕ 22.04.2022 ರಿಂದ ದಿನಾಂಕ 21.04.2024ರವರೆಗೆ | ಕಛೇರಿ ಆದೇಶ ಸಂಖ್ಯೆ: ವಿಶ್ರೀಕೃವಿಬ/ ಡಿಪಿಎಆರ್/ಬೋಧಕ/ಡಿ.ನೇ/2022–23/279 ದಿನಾಂಕ 04.05.2022 |
| 02 | ಪ್ರೊ. ಪಿ.ಸಿ ನಾಗನೂರ | ದಿನಾಂಕ 01.05.2022 ರಿಂದ | ಕಛೇರಿ ಆದೇಶ ಸಂಖ್ಯೆ: ವಿಶ್ರೀಕೃವಿಬ/ |

| | | | |
|---|---|---|---|
| | ಡೀನರು, ಅನ್ವಯಿಕ ವಿಜ್ಞಾನ ನಿಕಾಯ ಸ್ನಾತಕೋತ್ತರ ಕೇಂದ್ರ. ನಂದಿಹಳ್ಳಿ ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ | ದಿನಾಂಕ 30.06.2022ರವರೆಗೆ | ಡಿಪಿಎಆರ್/ಬೋಧಕ/ಡಿ.ನೇ/2022–23/279 ದಿನಾಂಕ 04.05.2022 |
| 03 | ಪ್ರೊ. ಸಿ. ವೆಂಕಟಯ್ಯ ಡೀನರು, ಅನ್ವಯಿಕ ವಿಜ್ಞಾನ ನಿಕಾಯ ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ | ದಿನಾಂಕ 01.07.2022 ರಿಂದ ದಿನಾಂಕ 31.12.2022ರವರೆಗೆ | ಕಛೇರಿ ಆದೇಶ ಸಂಖ್ಯೆ: ವಿಶ್ರೀಕೃವಿಬ/ ಡಿಪಿಎಆರ್/ಬೋಧಕ/ಡಿ.ನೇ/2022–23/279 ದಿನಾಂಕ 04.05.2022 |

ತೀರ್ಮಾನ

ಕಾರ್ಯಸೂಚಿಯಲ್ಲಿನ ಡೀನರ ನೇಮಕಾತಿಗಳನ್ನು ಸಭೆಯು ಅನುಸಮರ್ಥಿಸಿದೆ.

**ಐಟಂ ಸಂಖ್ಯೆ 04**

ವಿಷಯ: ವಿವಿಧ ಕಾರ್ಯನೀತಿ(ಪಾಲಿಸಿ)ಗಳನ್ನು ಜಾರಿಗೆ ತರುವ ಕುರಿತು.

****

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಅಭಿವೃದ್ಧಿಗೊಳಿಸುವ ಕುರಿತು ಈ ಕೆಳಕಂಡ ಕಾರ್ಯನೀತಿಗಳನ್ನು (ಪಾಲಿಸಿ) ಜಾರಿಗೊಳಿಸಬೇಕಾಗಿದೆ.

1. e-Governance Policy.
2. Code of conduct for students, Teachers, Administrators and Other staff.
3. Policy Document on Systems and Procedures for Maintaining and Utilizing Physical, Academic and Support Facilities.

ಸದರಿ ಕಾರ್ಯನೀತಿಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

ತೀರ್ಮಾನ

ಕಾರ್ಯಸೂಚಿಯಲ್ಲಿನ e-Governance Policy, Code of conduct for students, Teachers, Administrators and Other staff & Policy Document on Systems and Procedures for Maintaining and Utilizing Physical, Academic and Support Facilities ಪಾಲಿಸಿಗಳನ್ನು ಸಭೆಯು ಪರಿಶೀಲಿಸಿ ಯಥಾವತ್ತಾಗಿ ಅನುಮೋದಿಸಿದೆ.

**➲ ಐಟಂ ನಂ. 05:**

ವಿಷಯ: ಖರೀದಿ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

ಉಲ್ಲೇಖ: ದಿನಾಂಕ 07.06.2022 ರಂದು ಜರುಗಿದ ಖರೀದಿ ಸಲಹಾ ಸಮಿತಿ ಸಭೆ

*****

ವಿಶ್ವವಿದ್ಯಾಲಯದಲ್ಲಿ ದಿನಾಂಕ 07.06.2022 ರಂದು ಜರುಗಿದ ಖರೀದಿ ಸಲಹಾ ಸಮಿತಿ ಸಭೆಯು ಎಲ್ಲಾ ಕಾರ್ಯಸೂಚಿಗಳನ್ನು ಪರಿಶೀಲಿಸಿ ತೀರ್ಮಾನಿಸಿದ ನಡಾವಳಿಯನ್ನು ಸಲ್ಲಿಸಲಾಗಿದ್ದು, ಈ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ದಿನಾಂಕ 07.06.2022 ರಂದು ಜರುಗಿದ ಖರೀದಿ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಈ ಕೆಳಕಂಡಂತೆ ವಿಷಯವಾರು ದೃಢೀಕರಿಸಿ ಅನುಮೋದಿಸಿತು.

**ವಿಷಯ:01** ಔದ್ಯೋಗಿಕ ರಸಯನಶಾಸ್ತ್ರ ವಿಭಾಗಕ್ಕೆ ಬೇಕಾಗಿರುವ Inter atmosphere glove box system ನ್ನು ಖರೀದಿಸುವ ಕುರಿತು.

**ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನ**

Inter atmosphere Glove Box with Anti Chamber ಉಪಕರಣದ ಹೆಚ್ಚಿನ ಮಾಹಿತಿಯನ್ನು ಸಲ್ಲಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳುವುದೆಂದು ಖರೀದಿ ಸಮಿತಿ ಸಭೆಯು ತಿರ್ಮಾನಿಸಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

Inter atmosphere Glove Box with Anti Chamber ಉಪಕರಣದ ಹೆಚ್ಚಿನ ಮಾಹಿತಿಯನ್ನು ಸಲ್ಲಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳುವ ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

**ವಿಷಯ:02** ಅನ್ವಯಿಕ ಭೂ ವಿಜ್ಞಾನ ಅಧ್ಯಯನ ವಿಭಾಗದ ಪ್ರಯೋಗಾಲಯಕ್ಕೆ ಅವಶ್ಯವಿರುವ ಉಪಕರಣಗಳನ್ನು 2022–23 ನೇ ಸಾಲಿನ ಬಜೆಟ್‌ನಲ್ಲಿ ಖರೀದಿಸುವ ಕುರಿತು.

**ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನ**

KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಈ–ಟೆಂಡರ್‌ನಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಈ–ಟೆಂಡರ್‌ನಲ್ಲಿ ಖರೀದಿಸುವ ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

**ವಿಷಯ:03** ಖನಿಜ ಸಂಸ್ಕರಣ ಅಧ್ಯಯನ ವಿಭಾಗದ ಅದಿರು ಸಂಸ್ಕರಣ ಪ್ರಯೋಗಾಲಯಕ್ಕೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸುವ ಕುರಿತು.

**ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನ**

ಕ್ರಮ ಸಂಖ್ಯೆ 01 ಮತ್ತು 03 ರಲ್ಲಿರುವ ಉಪಕರಣಗಳನ್ನು (Work index Ball Mill with Media and Muffle Furnace) KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಈ–ಟೆಂಡರ್‌ನಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಖನಿಜ ಸಂಸ್ಕರಣ ಅಧ್ಯಯನ ವಿಭಾಗದ ಅದಿರು ಸಂಸ್ಕರಣ ಪ್ರಯೋಗಾಲಯಕ್ಕೆ ಅವಶ್ಯವಿರುವ ಕಾರ್ಯಸೂಚಿಯಲ್ಲಿ ಸೂಚಿತ ಎಲ್ಲಾ ಅವಶ್ಯವಿರುವ ಉಪಕರಣಗಳನ್ನು KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಈ–ಟೆಂಡರ್‌ನಲ್ಲಿ ಖರೀದಿಸಲು ಸಭೆಯು ಅನುಮೋದಿಸಿದೆ. ಈ ಕುರಿತಾಗಿ ಸುದೀರ್ಘವಾಗಿ ಚರ್ಚಿಸಿದ ಸನ್ಮಾನ್ಯ ಸಿಂಡಿಕೇಟ್ ಸದಸ್ಯರು ಒಮ್ಮತದಿಂದ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ Centre of Excellence for Multidisciplinary Advanced Research ಅಡಿಯಲ್ಲಿ Testing Labನ್ನು ಪ್ರಾರಂಭಿಸಲು ಸಲಹೆ ನೀಡಿದರು. ಜೊತೆಗೆ ಖನಿಜ ಸಂಸ್ಕರಣ ಅಧ್ಯಯನ ವಿಭಾಗ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿಯಲ್ಲಿನ ಹೆಚ್ಚುವರಿಯಾಗಿರುವ ಉಪಕರಣಗಳನ್ನು ಮುಖ್ಯ ಆವರಣದಲ್ಲಿನ Testing Labಗೆ ಸ್ಥಳಾಂತರಿಸಲು ಸೂಚಿಸಿದರು.

**ವಿಷಯ:04** ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣಕ್ಕೆ ಬೇಕಾಗಿರುವ ಉಪಕರಣಗಳನ್ನು ಖರೀದಿಸುವ ಕುರಿತು.

**ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನ**

ಅವಶ್ಯವಿರುವ ಉಪಕರಣಗಳ ಪಟ್ಟಿಯನ್ನು ತಯಾರಿಸಿ ಸಲ್ಲಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳುವುದೆಂದು ಖರೀದಿ ಸಮಿತಿ ಸಭೆಯು ತೀರ್ಮಾನಿಸಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಖರೀದಿ ಸಲಹಾ ಸಮಿತಿ ಸಭೆಯ ಕಾರ್ಯಸೂಚಿಯಲ್ಲಿ ಐಸಿಟಿ ಘಟಕ ಸಲ್ಲಿಸಿದ ಪಟ್ಟಿಯಲ್ಲಿ ಕ್ರಮ ಸಂಖ್ಯೆ 01ರ Desktop Computers ನ್ನು KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಈ–ಟೆಂಡರ್‌ನಲ್ಲಿ ಖರೀದಿಸಲು ಅನುಮೋದಿಸಿ ಉಳಿದವುಗಳಲ್ಲಿ ಅವಶ್ಯವಿರುವ ಉಪಕರಣಗಳ ಪಟ್ಟಿಯನ್ನು ತಯಾರಿಸಿ ಸಲ್ಲಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳುವ ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

**ವಿಷಯ:05** CEMARF ಗೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸುವ ಕುರಿತು.

**ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನ**

KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಈ–ಟೆಂಡರ್‌ನಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಈ–ಟೆಂಡರ್‌ನಲ್ಲಿ ಖರೀದಿಸುವ ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

**ವಿಷಯ:06** ಭೌತಶಾಸ್ತ್ರ ಅಧ್ಯಯನ ವಿಭಾಗದ ಪ್ರಯೋಗಾಲಯಕ್ಕೆ ಬೇಕಾಗಿರುವ Items / components ನ್ನು ಖರೀದಿ ಸಮಿತಿಯಲ್ಲಿಡುವ ಕುರಿತು.

**ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನ**

ಕ್ರಮ ಸಂಖ್ಯೆ 04, 08 ಮತ್ತು 09 ರಲ್ಲಿರುವ ಉಪಕರಣಗಳನ್ನು ಹೊರತುಪಡಿಸಿ ಇನ್ನುಳಿದ ಉಪಕರಣಗಳನ್ನು KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಈ–ಟೆಂಡರ್‌ನಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಕ್ರಮ ಸಂಖ್ಯೆ 04, 08 ಮತ್ತು 09 ರಲ್ಲಿರುವ ಉಪಕರಣಗಳನ್ನು ಹೊರತುಪಡಿಸಿ ಇನ್ನುಳಿದ ಉಪಕರಣಗಳನ್ನು KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಈ–ಟೆಂಡರ್‌ನಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಿರುವ ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

**ವಿಷಯ:07** ಜೈವಿಕ ತಂತ್ರಜ್ಞಾನ ವಿಭಾಗಕ್ಕೆ ಅಗತ್ಯವಾದ ಹಾರ್ಡವೇರ್ ಹಾಗೂ ಉಪಕರಣಗಳನ್ನು ಖರೀದಿಸಲು ಖರೀದಿ ಸಮಿತಿ ಸಭೆಯಲ್ಲಿ ಮಂಡಿಸುವ ಕುರಿತು.

**ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನ**

KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಈ–ಟೆಂಡರ್‌ನಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಈ–ಟೆಂಡರ್‌ನಲ್ಲಿ ಖರೀದಿಸುವ ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

**ವಿಷಯ:08** ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಪ್ರಯೋಗಾಲಯಕ್ಕೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಖರೀದಿ ಸಮಿತಿ ಸಭೆಯಲ್ಲಿ ಮಂಡಿಸುವ ಕುರಿತು.

**ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನ**

ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಪ್ರಯೋಗಾಲಯಕ್ಕೆ ಅವಶ್ಯವಿರುವ ಉಪಕರಣಗಳ ಹೆಚ್ಚಿನ ಮಾಹಿತಿಯನ್ನು ಸಲ್ಲಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳುವುದೆಂದು ಖರೀದಿ ಸಮಿತಿ ಸಭೆಯು ತಿರ್ಮಾನಿಸಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಪ್ರಯೋಗಾಲಯಕ್ಕೆ ಅವಶ್ಯವಿರುವ ಉಪಕರಣಗಳ ಹೆಚ್ಚಿನ ಮಾಹಿತಿಯನ್ನು ಸಲ್ಲಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳುವ ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

**ವಿಷಯ:09** ಸಸ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಖರೀದಿ ಸಮಿತಿ ಸಭೆಯಲ್ಲಿ ಮಂಡಿಸುವ ಕುರಿತು.

**ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನ**

ಸಸ್ಯಶಾಸ್ತ್ರ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳ ಹೆಚ್ಚಿನ ಮಾಹಿತಿಯನ್ನು ಸಲ್ಲಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳುವುದೆಂದು ಖರೀದಿ ಸಮಿತಿ ಸಭೆಯು ತಿರ್ಮಾನಿಸಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಸಸ್ಯಶಾಸ್ತ್ರ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳ ಹೆಚ್ಚಿನ ಮಾಹಿತಿಯನ್ನು ಸಲ್ಲಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳುವ ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

**ವಿಷಯ:10** ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಮುಖ್ಯ ಆವರಣದಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ಜೀವ ವಿಜ್ಞಾನ ಕಟ್ಟಡ ಮತ್ತು ಸ್ನಾತಕೋತ್ತರ ಕೇಂದ್ರ ಯಲಬುರ್ಗಾಕ್ಕೆ ಅಗತ್ಯವಾದ Two Seater Desk ಗಳನ್ನು ಖರೀದಿಸುವ ಕುರಿತು.

**ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನ**

KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಈ–ಟೆಂಡರ್‌ನಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

**<u>ಸಿಂಡಿಕೇಟ್ ಸಭೆಯ ತೀರ್ಮಾನ</u>**

KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಈ–ಟೆಂಡರ್‌ನಲ್ಲಿ ಖರೀದಿಸುವ ಖರೀದಿ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

**➲ ಐಟಂ ನಂ. 06:**

ವಿಷಯ: ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷಾ ಕಾರ್ಯಗಳ ಭತ್ಯೆ ಹಾಗೂ ಸಂಭಾವನೆಗಳ ಸಿದ್ಧತೆಯ ಕುರಿತ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಕುರಿತು.

ಉಲ್ಲೇಖ: ಸಂಖ್ಯೆ:ವಿಶ್ರೀಕೃವಿಬ/ಕು(ಮೌ)/ಸಮಿತಿ/2021–22/846 ದಿನಾಂಕ:21.10.2021

****

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

<u>ತೀರ್ಮಾನ</u>

ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷಾ ಕಾರ್ಯಗಳ ಭತ್ಯೆ ಹಾಗೂ ಸಂಭಾವನೆಗಳ ಸಿದ್ಧತೆ ಸಮಿತಿಯ ಶಿಫಾರಸ್ಸುಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಮಾನ್ಯ ಕುಲಸಚಿವರು(ಮೌಲ್ಯಮಾಪನ), ವಿಶ್ರೀಕೃ ವಿಶ್ವವಿದ್ಯಾಲಯ, ಇವರಿಗೆ ಮರು ಮಂಡಿಸಲು ಸೂಚಿಸಿದೆ.

**➲ ಐಟಂ ನಂ. 07**

**ವಿಷಯ :** ಸ್ನಾತಕ ಪರೀಕ್ಷೆಗಳಲ್ಲಿ ಅಕ್ರಮವೆಸಗಿದ ವಿದ್ಯಾರ್ಥಿಗಳ ವಿಚಾರಣಾ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು.

**ಉಲ್ಲೇಖ:** ಸಂಖ್ಯೆ:ವಿಶ್ರೀಕೃವಿಬ/ಪರೀಕ್ಷಾ/ಸ್ನಾತಕ/ಎಂ.ಪಿ.ಸಿ/2022–23/725ದಿನಾಂಕ:29.06.2022

*****

ಮಾರ್ಚ್/ಏಪ್ರಿಲ್–2022ರ ತಿಂಗಳಿನಲ್ಲಿ ಮತ್ತು ಮೇ–2022ರ ತಿಂಗಳಿನಲ್ಲಿ ಜರುಗಿದ 1ನೇ(ಪುನರಾವರ್ತಿತ), 3ನೇ ಮತ್ತು 5ನೇ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಹಾಗೂ ಸ್ನಾತಕ (NEP) ಪರೀಕ್ಷೆಗಳಲ್ಲಿ ಅಕ್ರಮಗಳನ್ನು ಎಸಗಿದ ವಿದ್ಯಾರ್ಥಿಗಳಿಗೆ ವಿಚಾರಣಾ ಸಮಿತಿ ಸಭೆಯನ್ನು ದಿನಾಂಕ:04.07.2022 ಮತ್ತು 05.07.2022 ರಂದು ಆಯೋಜಿಸಲಾಗಿತ್ತು. ಸದರಿ ಸಮಿತಿಯ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

<u>ತೀರ್ಮಾನ</u>

ಮಾರ್ಚ್/ಏಪ್ರಿಲ್–2022ರ ತಿಂಗಳಿನಲ್ಲಿ ಮತ್ತು ಮೇ–2022ರ ತಿಂಗಳಿನಲ್ಲಿ ಜರುಗಿದ 1ನೇ(ಪುನರಾವರ್ತಿತ), 3ನೇ ಮತ್ತು 5ನೇ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಹಾಗೂ ಸ್ನಾತಕ (NEP) ಪರೀಕ್ಷೆಗಳಲ್ಲಿ ಅಕ್ರಮಗಳನ್ನು ಎಸಗಿದ ವಿದ್ಯಾರ್ಥಿಗಳ ವಿಚಾರಣಾ ಸಮಿತಿಯ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಅನುಮೋದಿಸಿ, ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಕೋವಿಡ್–19 ಕಳೆದ ಮೂರು ವರ್ಷದ (ಕೋವಿಡ್–19 ನೇ ಸಾಲಿನ ಪರೀಕ್ಷೆಯನ್ನು ಹೊರತುಪಡಿಸಿ) ಪರೀಕ್ಷಾ ಕೇಂದ್ರದ ಅನುಸಾರ ಸ್ನಾತಕ ಪರೀಕ್ಷೆಗಳಲ್ಲಿ ಅಕ್ರಮವೆಸಗಿದ ವಿದ್ಯಾರ್ಥಿಗಳ ವಿಚಾರಣಾ ಸಮಿತಿ (MPC) ವರದಿಯನ್ನು ಸಲ್ಲಿಸಲು ಸೂಚಿಸಿದೆ.

## ➲ ಐಟಂ ನಂ. 08

ವಿಷಯ: 2022–23ನೇ ಶೈಕ್ಷಣಿಕ ಸಾಲಿನ ಶ್ರೀ ಅಕ್ಷಯ ಕಾಲೇಜ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಹೊಸಪೇಟೆ ಸ್ಥಳೀಯ ತನಿಖಾ ಸಮಿತಿಯ ವರದಿಯನ್ನು ಅನುಮೋದಿಸುವ ಕುರಿತು

****

2022–23ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಗಾಗಿ ಅರ್ಜಿ ಸಲ್ಲಿಸಿದ ಶ್ರೀ ಅಕ್ಷಯ ಕಾಲೇಜ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಹೊಸಪೇಟೆ ಸ್ಥಳೀಯ ತನಿಖಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಆನಲೈನ್ ಮೂಲಕ ಸಲ್ಲಿಸಲಾದ ವರದಿಯ ಆಧಾರದ ಮೇಲೆ ತಯಾರಿಸಿದ Consolidated Score and Recommendation Reportನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

<u>ತೀರ್ಮಾನ</u>

ತಾತ್ಕಾಲಿಕ ಸಂಯೋಜನೆ ಮುಂದುವರಿಕೆಗೆ ಅರ್ಜಿ ಸಲ್ಲಿಸಿದ ಶ್ರೀ ಅಕ್ಷಯ ಕಾಲೇಜ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ಹೊಸಪೇಟೆ ನಿಗದಿತ ಅಂಕ (45) ಗಳಿಸಿದ ಹಾಗೂ 8 Defined Parameterಗಳನ್ನು ಪೂರೈಸಿದ ಅರ್ಜಿಗೆ ಮುಂದುವರಿಕೆ ಸಂಯೋಜನೆ ನೀಡಲು ಸಭೆಯು ಅನುಮೋದಿಸಿದೆ. (ಸದರಿ ವಿಷಯದ ಪಟ್ಟಿ ಅನುಬಂಧ–1 ಲಗತ್ತಿಸಲಾಗಿದೆ.)

## ➲ ಐಟಂ ನಂ. 09

ವಿಷಯ : ಪರೀಕ್ಷೆ ನಿರ್ವಹಣೆ ವ್ಯವಸ್ಥೆಯ ಒಡಂಬಡಿಕೆಯನ್ನು ಮುಂದುವರೆಸುವ ಕುರಿತು.

ಉಲ್ಲೇಖ: 1.ಮೆ.ಲಾಜಿಸಿಸ್, ಬೆಂಗಳೂರು ಇವರೊಂದಿಗೆ ಮಾಡಿಕೊಂಡ ಕರಾರು ಪತ್ರದ ದಿನಾಂಕ: 31.08.2017

2. ಮೆ.ಲಾಜಿಸಿಸ್, ಬೆಂಗಳೂರು ಇವರಿಗೆ ನೀಡಿದ ಈ ಕಛೇರಿ ಆದೇಶ ಸಂಖ್ಯೆ: 1554 ದಿನಾಂಕ:31.08.2017.
3. ಸಿಂಡಿಕೇಟ್ ಸಭೆಯ ನಡಾವಳಿ ಸಂಖ್ಯೆ: 07 ದಿನಾಂಕ:09.07.2020.
4. ಗುತ್ತಿಗೆ ಅವಧಿಯನ್ನು ವಿಸ್ತರಿಸಿದ ಈ ಕಛೇರಿ ಆದೇಶ ಸಂಖ್ಯೆ:1055ಎ ದಿ. 08.12.2020
5. ಸಿಂಡಿಕೇಟ್ ಸಭೆಯ ನಡಾವಳಿ ಸಂಖ್ಯೆ 07 ದಿನಾಂಕ: 08.07.2021
6. ಸಂಖ್ಯೆ:ವಿಶ್ರೀಕೃವಿಬ/ಪರೀಕ್ಷಾ/ಲಾಜಿಸಿಸ್/2021–22/503(ಎ) ದಿನಾಂಕ:24.08.2021
7. ಸಂಖ್ಯೆ:ವಿಶ್ರೀಕೃವಿಬ/ಪರೀಕ್ಷಾ/ಲಾಜಿಸಿಸ್/2021–22/1993 ದಿನಾಂಕ:15.03.2022

*****

ವಿಶ್ವವಿದ್ಯಾಲಯದ ಪರೀಕ್ಷೆಗಳ ನಿರ್ವಹಣೆ ಹಾಗೂ ಇತ್ಯಾದಿ ಕೆಲಸಗಳನ್ನು (EPMS) ನಿರ್ವಹಿಸಲು ಮೆ: ಲಾಜಿಸಿಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರಿಗೆ ಈ ಕೆಳಗಿನಂತೆ ದಿನಾಂಕ: 31.08.2017 ರಿಂದ ಆಗಸ್ಟ್ 2020ರವರೆಗೆ ಗುತ್ತಿಗೆಯನ್ನು ನೀಡಲಾಗಿತ್ತು. ಈ ಗುತ್ತಿಗೆ ಅವಧಿಯು ಮುಕ್ತಾಯವಾಗಿದ್ದರಿಂದ ಸೆಪ್ಟೆಂಬರ್/ಅಕ್ಟೋಬರ್ 2020ರ ಪರೀಕ್ಷೆಗಳ ನಿರ್ವಹಣೆ ಹಾಗೂ ಇತ್ಯಾದಿ ಕೆಲಸಗಳನ್ನು ನಿರ್ವಹಿಸಲು ಉಲ್ಲೇಖ (3&4)ರನ್ವಯ ಮೆ. ಲಾಜಿಸಿಸ್, ಬೆಂಗಳೂರು ಇವರಿಗೆ ತಮ್ಮ ಸೇವೆಯನ್ನು ಮುಂದುವರೆಸಲು ಗುತ್ತಿಗೆಯನ್ನು ಹಾಲಿ ದರದನ್ವಯ ಮುಂದಿನ ಒಂದು ಪರೀಕ್ಷೆ ಅಥವಾ ಹೊಸ ಇ–ಟೆಂಡರ್ ಪ್ರಕ್ರಿಯೆ ಮುಕ್ತಾಯದವರೆಗೆ (ಇವುಗಳಲ್ಲಿ ಯಾವುದು ನಂತರ ಘಟಿಸುವುದೋ ಅಲ್ಲಿಯವರಗೆ) ನೀಡಲಾಗಿತ್ತು. ಆದರೆ ಕೋವಿಡ್–19 2ನೇ ಅಲೆಯ ಹಿನ್ನಲೆಯಲ್ಲಿ ಪರೀಕ್ಷೆಗಳನ್ನು ಮುಂದೂಡಿದ್ದರಿಂದ ಉಲ್ಲೇಖ(5&6)ರನ್ವಯ, 2020–21ನೇ ಸಾಲಿನ ಸಮ ಸೆಮಿಸ್ಟರ್ ಪರೀಕ್ಷೆಗಳು ಮುಗಿದು ಎಲ್ಲಾ ಸೆಮಿಸ್ಟರ್ ಪರೀಕ್ಷೆಗಳ ಪರಿಣಾಮ ಘೋಷಣೆಯವರೆಗೆ ಹಾಲಿ ದರಗಳನ್ನೇ ಅನ್ವಯಿಸಿ ಒಡಂಬಡಿಕೆಯನ್ನು ಪುನಃ ಮುಂದುವರಿಸಲಾಗಿತ್ತು. ತದನಂತರ 2021–22ನೇ ಶೈಕ್ಷಣಿಕ ಸಾಲಿನ 1,3,5ನೇ ಸೆಮಿಸ್ಟರ್ ಪರೀಕ್ಷೆಗಳು ಫೆಬ್ರವರಿ–2022ರಲ್ಲಿ ಪ್ರಾರಂಭವಾಗಬೇಕಾಗಿದ್ದರಿಂದ, 2021–22ನೇ ಸಾಲಿನ ಸ್ನಾತಕ 1(ಪುರಾವರ್ತಿತ), 3,5 ಮತ್ತು ಸ್ನಾತಕೋತ್ತರ 1,3,5ನೇ ಸೆಮಿಸ್ಟರ್ ಪರೀಕ್ಷೆಗಳನ್ನು ಸಮಯಕ್ಕೆ ಸರಿಯಾಗಿ ಹಾಗೂ ಕ್ರಮಬದ್ಧವಾಗಿ ನಡೆಸಿ, ಮೌಲ್ಯಮಾಪನ ಮಾಡಿ ಪರಿಣಾಮ ಘೋಷಣೆ ಮಾಡುವವರೆಗೆ ಮೆ.ಲಾಜಿಸಿಸ್, ಬೆಂಗಳೂರು ಇವರ ಸೇವೆಯನ್ನು ಹಾಲಿದರಗಳನ್ನು ಅನ್ವಯಿಸಿ ಪುನಃ ಮುಂದುವರೆಸಲಾಗಿತ್ತು. ಪ್ರಸ್ತುತ ಸ್ನಾತಕ 2ನೇ ಸೆಮಿಸ್ಟರ್

(ರಿಪಿಟರ್ಸ್) 4,6 ಮತ್ತು ಸ್ನಾತಕೋತ್ತರ 2,4 ಮತ್ತು 6ನೇ ಮತ್ತು ಎಲ್ಲಾ ಸೆಮಿಸ್ಟರ್‌ಗಳ (ರಿಪಿಟರ್ಸ್) ಪರೀಕ್ಷೆಗಳನ್ನು ಸಮಯಕ್ಕೆ ಸರಿಯಾಗಿ ಹಾಗೂ ಕ್ರಮಬದ್ಧವಾಗಿ ನಡೆಸಿ, ಮೌಲ್ಯಮಾಪನ ಮಾಡಿ ಪರಿಣಾಮ ಘೋಷಣೆ ಮಾಡುವವರೆಗೆ ಮೆ.ಲಾಜಿಸಿಸ್, ಬೆಂಗಳೂರು ಇವರ ಸೇವೆಯನ್ನು ಹಾಲಿದರಗಳನ್ನು ಅನ್ವಯಿಸಿ ವಿಸ್ತರಿಸಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ತೀರ್ಮಾನ

ವಿಶ್ವವಿದ್ಯಾಲಯದ ಪರೀಕ್ಷೆಗಳ ನಿರ್ವಹಣೆ ಹಾಗೂ ಇತ್ಯಾದಿ ಕೆಲಸಗಳನ್ನು (EPMS) ನಿರ್ವಹಿಸುವ ಕುರಿತು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು, ಪ್ರಸ್ತುತ ಯು.ಯು.ಸಿ.ಎಂ.ಎಸ್ (U.U.C.M.S)ಚಾಲ್ತಿಯಲ್ಲಿರುವುದರಿಂದ ಯು.ಯು.ಸಿ.ಎಂ.ಎಸ್ ರಹಿತ (Non-UUCMS) ಸ್ನಾತಕ ಪದವಿಯ 4, 5 & 6ನೇ ಹಾಗೂ ಸ್ನಾತಕೋತ್ತರ ಪದವಿಯ 4, 5 & 6ನೇ ಸೆಮಿಸ್ಟರ್‌ಗಳ ಪರೀಕ್ಷೆಗಳನ್ನು ಸಮಯಕ್ಕೆ ಸರಿಯಾಗಿ ಹಾಗೂ ಕ್ರಮಬದ್ಧವಾಗಿ ನಡೆಸಿ, ಮೌಲ್ಯಮಾಪನ ಮಾಡಿ ಫಲಿತಾಂಶ ಘೋಷಣೆ ಮಾಡುವವರೆಗೆ ಮೆ.ಲಾಜಿಸಿಸ್, ಬೆಂಗಳೂರು ಇವರ ಸೇವೆಯನ್ನು ಹಾಲಿದರಗಳನ್ವಯ ಹಾಗೂ ಈ ಹಿಂದಿನ ಎಲ್ಲಾ ನಿಯಮಗಳು, ಷರತ್ತುಗಳು ಮತ್ತು ಸರ್ಕಾರದಿಂದ ಬಂದ ಪತ್ರಗಳ ನಿರ್ದೇಶನಗಳನ್ವಯ ವಿಸ್ತರಿಸಲು ಸಭೆಯು ಅನುಮೋದಿಸಿದೆ. ಮುಂದುವರೆದು, ರಾಜ್ಯ ಸರ್ಕಾರದಿಂದ ಇಪಿಎಂಎಸ್ ಸೇವೆಗೆ ಸಂಬಂಧಿಸಿದಂತೆ ಯೋಜನೆಗಳು ಜಾರಿಯಾದಲ್ಲಿ ಅವುಗಳನ್ನು ಅಳವಡಿಸಿಕೊಂಡು ನೂತನ ಒಡಂಬಡಿಕೆಯನ್ನು ರದ್ದುಗೊಳಿಸುವ ಅಧಿಕಾರವನ್ನು ವಿಶ್ವವಿದ್ಯಾಲಯ ಹೊಂದಿರಲು ನಿರ್ಧರಿಸಲಾಯಿತು.

**➲ ಐಟಂ ನಂ. 10**

ವಿಷಯ: ಸಾಂಸ್ಕೃತಿಕ ವೈಭವ ಯುವಜನೋತ್ಸವ ಕಾರ್ಯಕ್ರಮ ಆಯೋಜಿಸಿದ 03 ಮಹಾವಿದ್ಯಾಲಯಗಳಿಗೆ ತಲಾ ರೂ. 1,00,000/- ನ್ನು ಮಂಜೂರಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 07.07.2022.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದನ್ವಯ ದಿನಾಂಕ 08.07.2022 ರಿಂದ 10.07.2022 ರವರೆಗೆ ಸಾಂಸ್ಕೃತಿಕ ಸ್ಪರ್ಧೆಗಳನ್ನು 1. ಕೊಟ್ಟೂರುಸ್ವಾಮಿ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ., 2. ಶ್ರೀ. ಗವಿಸಿದ್ದೇಶ್ವರ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯ, ಕೊಪ್ಪಳ ಮತ್ತು 3. ಕೊಟ್ಟೂರೇಶ್ವರ ಪದವಿ ಕಾಲೇಜು, ಕೊಟ್ಟೂರು ಇಲ್ಲಿ ಆಯೋಜಿಸಲಾಗಿರುತ್ತದೆ. ಕಾರಣ, ಸದರಿ 03 ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳ ಹೆಸರಿಗೆ ತಲಾ ರೂ. 1,00,000/- (ರೂಪಾಯಿ 1 ಲಕ್ಷ ಮಾತ್ರ)ಗಳನ್ನು ಬಿಡುಗಡೆ ಮಾಡಲು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯ ತೀರ್ಮಾನ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

ತೀರ್ಮಾನ

ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಿದ 1. ಕೊಟ್ಟೂರುಸ್ವಾಮಿ ಶಿಕ್ಷಣ ಮಹಾವಿದ್ಯಾಲಯ, ಬಳ್ಳಾರಿ., 2. ಶ್ರೀ. ಗವಿಸಿದ್ದೇಶ್ವರ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯ, ಕೊಪ್ಪಳ ಮತ್ತು 3. ಕೊಟ್ಟೂರೇಶ್ವರ ಪದವಿ ಕಾಲೇಜು, ಕೊಟ್ಟೂರು ಈ ಮೂರು ಮಹಾವಿದ್ಯಾಲಯಗಳಿಗೆ ತಲಾ 1.00 ಲಕ್ಷ ಮೊತ್ತವನ್ನು ನೀಡಲು ಸಭೆಯು ಅನುಮೋದಿಸಿದೆ.

**➲ ಐಟಂ ನಂ. 11**

ವಿಷಯ: ಸುಜಲಂ ವಿಷಯಾಧಾರಿತ ವಿಚಾರ ಸಂಕಿರಣವನ್ನು ಆಯೋಜಿಸುವ ಕುರಿತು.

******

2022-23ನೇ ಸಾಲಿನ ಅಕ್ಟೋಬರ್/ನವೆಂಬರ್-2022ರಲ್ಲಿ ರಾಷ್ಟ್ರಮಟ್ಟದ ವಿಚಾರ ಸಂಕಿರಣವನ್ನು ದೀನದಯಾಳ್ ಸಂಶೋಧನಾ ಸಂಸ್ಥೆ (Deendayal Research Institute), ನವದೆಹಲಿಯವರು 'ಸುಮಂಗಲಂ' ಉಪಕ್ರಮ - ಭಾರತೀಯ ವೈಚಾರಿಕತೆಯ ಮೂಲಕ ಪಂಚಮಹಾಭೂತಗಳನ್ನು ಶುದ್ಧಿಸುವ ಹಾಗೂ ಸಮತೋಲನ ತರುವ ನಿಟ್ಟಿನಲ್ಲಿ ಸುಜಲಂ ಎನ್ನುವ ವಿಚಾರವಾಗಿ ವಿಚಾರ ಸಂಕಿರಣವನ್ನು ಆಯೋಜಿಸಿದ್ದಾರೆ. ಈ ಹಿನ್ನೆಲೆಯಲ್ಲಿ ವಿಜಯನಗರ ಶ್ರಿ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಜೊತೆ ವಿಶ್ವವಿದ್ಯಾಲಯದಲ್ಲಿ ಪಂಚಮಹಾ

ಭೂತಗಳಲ್ಲಿ ಸುಜಲಂ (ನೀರು) ವಿಷಯವಾಗಿ ರಾಷ್ಟ್ರಮಟ್ಟದ ವಿಚಾರ ಸಂಕಿರಣ ಆಯೋಜನೆಯನ್ನು ಪ್ರಸ್ತಾಪಿಸಿದ್ದು, ಸದರಿ ಕಾರ್ಯಕ್ರಮದ ಆಯೋಜನೆಗೆ ಆಡಳಿತಾತ್ಮಕ ಅನುಮೋದನೆ ಹಾಗೂ ತಗಲುವ ವೆಚ್ಚದ ಅನುಮೋದನೆಗಾಗಿ ಸಿಂಡಿಕೇಟ್ ಸಭೆಗೆ ಈ ವಿಷಯವನ್ನು ಸಲ್ಲಿಸಿದೆ.

ತೀರ್ಮಾನ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ಹಾಗೂ ದೀನದಯಾಳ್ ಸಂಶೋಧನಾ ಸಂಸ್ಥೆ (Deendayal Research Institute), ನವದೆಹಲಿಯವರು (In collaboration with the NMCG, Ministry of Jal Shakti, and IGNCA, Ministry of Culture, Government of India) ಇವರು ವಿಶ್ವವಿದ್ಯಾಲಯದಲ್ಲಿ ಪಂಚಮಹಾ ಭೂತಗಳಲ್ಲಿ ಸುಜಲಂ (ನೀರು) ವಿಷಯವಾಗಿ ಅಂತರರಾಷ್ಟ್ರೀಯ ವಿಚಾರ ಸಂಕಿರಣ ಆಯೋಜನೆಗೆ ಸಭೆಯು ಅನುಮೋದನೆಯನ್ನು ನೀಡಿತು. ಮುಂದುವರೆದು, ವಿಶ್ವವಿದ್ಯಾಲಯ ಮತ್ತು ಬೇರೆ ವಿಶ್ವವಿದ್ಯಾಲಯಗಳ ಸಹಯೋಗ ಹಾಗೂ ಬೇರೆ ಬೇರೆ ಸಂಸ್ಥೆಗಳ (Organizations) ಪ್ರಾಯೋಜಕತ್ವವನ್ನು ಪಡೆದು ಸುಜಲಂ ವಿಷಯಾಧಾರಿತ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಆಯೋಜಿಸಲು ಹಾಗೂ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ವಿಶ್ವವಿದ್ಯಾಲಯ ಭರಿಸಲು ಸಭೆಯು ಅನುಮತಿ ನೀಡಿತು.

**➲ ಐಟಂ ನಂ. 12**

ವಿಶ್ವವಿದ್ಯಾಲಯದಲ್ಲಿನ ಕಟ್ಟಡಗಳ ವಿದ್ಯುತ್, ನೀರು ಸರಬರಾಜು ಮತ್ತು ನೈರ್ಮಲೀಕರಣದ ದಿನನಿತ್ಯ ಕಾರ್ಯ ನಿರ್ವಹಣೆ ಕೆಲಸಗಳಿಗೆ ಹಲವಾರು ವಸ್ತುಗಳನ್ನು, ವಾಹನದ ಸಣ್ಣಪುಟ್ಟದುರಸ್ಥಿಗಳು ಹಾಗೂ ಅತ್ಯವ್ಯಶ್ಯಕವಾದ ಲೇಖನ ಸಾಮಾಗ್ರಗಳು ಅಂದರೆ Catridge Refilling ಮತ್ತು ಇತರೆ ಸಾಮಾಗ್ರಿಗಳನ್ನು ಮಾರುಕಟ್ಟೆಯಿಂದ ಖರಿಸಿದಿಸಲು ರೂ.10,000/- (ರೂಪಾಯಿ ಹತ್ತು ಸಾವಿರ ಮಾತ್ರ.)ಗಳನ್ನು 2012ರಲ್ಲಿ ಮಂಜೂರಿಸಲಾಗಿತ್ತು.

ವಿಶ್ವವಿದ್ಯಾಲಯದಲ್ಲಿ 2012ರ ನಂತರ ಹೊಸ ಆಡಳಿತ ಕಟ್ಟಡ, ಸೈನ್ಸ್ ಫಾಕಲ್ಟಿ ಕಟ್ಟಡಗಳು, ವಸತಿ ಗೃಹಗಳು (ವಿವಿಐಪಿ), ಶಾಸನ ಬದ್ಧ ಅಧಿಕಾರಿಗಳ ವಸತಿಗೃಹಗಳು ಮತ್ತು ಪರಿಶಿಷ್ಠ ಜಾತಿ & ಪರಿಶಿಷ್ಠ ಪಂಗಡ ವಿದ್ಯಾರ್ಥಿ & ವಿದ್ಯಾರ್ಥಿನಿಯರ ವಸತಿನಿಲಯಗಳು ನಿರ್ಮಾಣವಾಗಿದ್ದು, ಸದರಿ ಕಟ್ಟಡಗಳಲ್ಲಿನ ತುರ್ತು ದುರಸ್ಥಿಗಳನ್ನು ಕೈಗೊಳ್ಳಲು ರೂ.10,000/- ಖಾಯಂ ಮುಂಗಡ ಹಣದಲ್ಲಿ ನಿರ್ವಹಿಸಲು ಕಷ್ಟಕರವಾಗಿದೆ. ಈ ಹಿನ್ನೆಲೆಯಲ್ಲಿ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದ, ಇಂಜಿನಿಯರಿಂಗ್ ವಿಭಾಗದ ಖಾಯಂ ಮುಂಗಡ ಹಣವನ್ನು ರೂ.10,000.00 ದಿಂದ ರೂ.40,000/- ಹೆಚ್ಚಿಸಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

ತೀರ್ಮಾನ

ಹೊಸ ಆಡಳಿತ ಕಟ್ಟಡ, ಸೈನ್ಸ್ ಫಾಕಲ್ಟಿ ಕಟ್ಟಡಗಳು, ವಸತಿ ಗೃಹಗಳು (ವಿವಿಐಪಿ), ಶಾಸನ ಬದ್ಧ ಅಧಿಕಾರಿಗಳ ವಸತಿಗೃಹಗಳು ಮತ್ತು ಪರಿಶಿಷ್ಠ ಜಾತಿ & ಪರಿಶಿಷ್ಠ ಪಂಗಡ ವಿದ್ಯಾರ್ಥಿ & ವಿದ್ಯಾರ್ಥಿನಿಯರ ವಸತಿನಿಲಯಗಳು ನಿರ್ಮಾಣವಾಗಿದ್ದು, ಸದರಿ ಕಟ್ಟಡಗಳಲ್ಲಿನ ತುರ್ತು ದುರಸ್ಥಿಗಳನ್ನು ಕೈಗೊಳ್ಳಲು ರೂ.10,000/- ಖಾಯಂ ಮುಂಗಡ ಹಣದಲ್ಲಿ ನಿರ್ವಹಿಸಲು ಕಷ್ಟಕರವಾಗಿರುವುದನ್ನು ಮನಗಂಡ ಸಭೆಯು ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದ, ಇಂಜಿನಿಯರಿಂಗ್ ವಿಭಾಗದ ಖಾಯಂ ಮುಂಗಡ ಹಣವನ್ನು ರೂ.10,000.00 ದಿಂದ ರೂ.20,000/- ಹೆಚ್ಚಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

**➲ ಐಟಂ ನಂ. 13**

ವಿಷಯ:- ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಮುಖ್ಯ ಆವರಣದಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಕ್ರಿಯಾ ಯೋಜನೆಯಡಿಯಲ್ಲಿ ನಿರ್ಮಿಸುತ್ತಿರುವ Life Science Block ಕಟ್ಟಡಕ್ಕೆ ಮಾರ್ಗ ರಸ್ತೆ(approach road)ಯನ್ನು ನಿರ್ಮಿಸುವ ಕುರಿತು.

ಉಲ್ಲೇಖ:- 1) ಮಾನ್ಯ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ:ಕಂ.ಗಣಿ/ಡಿ.ಎಂ.ಎಫ್/ 3ನೇ ಕ್ರಿಯೋ/2019-20/ ದಿನಾಂಕ:13.09.2019,

***

ಮಾನ್ಯ ಜಿಲ್ಲಾಧಿಕಾರಿಗಳ ಜಿಲ್ಲಾ ಖನಿಜ ಪ್ರತಿಷ್ಠಾನ ಯೋಜನೆಯಡಿಯಲ್ಲಿ ಬರುವ ಕ್ರಿಯಾ ಯೋಜನೆಯಲ್ಲಿ Upgradation of Vijayanagara Sri Krishnadevaraya University (Construction of Life Science Block) ಕಾಮಗಾರಿಗೆ ರೂ.500.00 ಲಕ್ಷಗಳ ಅನುದಾನವು ಮಂಜೂರಾಗಿದ್ದು, ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರನ್ನು ಅನುಷ್ಠಾನ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಸದರಿ ಕಾಮಗಾರಿಯು ಮುಖ್ಯ ಆವರಣದಲ್ಲಿ ಪ್ರಗತಿಯಲ್ಲಿದ್ದು ಮುಕ್ತಾಯಹಂತದಲ್ಲಿದೆ. Life Science Block ಕಟ್ಟಡಕ್ಕೆ ಮುಖ್ಯ ರಸ್ತೆಯಿಂದ ಮಾರ್ಗ ರಸ್ತೆ(approach road)ಯನ್ನು ನಿರ್ಮಿಸುವ ಕಾಮಗಾರಿಗೆ ಅಂದಾಜು ವೆಚ್ಚ ರೂ.17.00 ಲಕ್ಷಗಳು ಆಗಲಿದ್ದು, ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಸಂಬಂಧ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಗೆ ಸಲ್ಲಿಸಿದೆ.

ತೀರ್ಮಾನ

Life Science Block ಕಟ್ಟಡಕ್ಕೆ ಮುಖ್ಯ ರಸ್ತೆಯಿಂದ ಮಾರ್ಗ ರಸ್ತೆ(approach road)ಯನ್ನು ನಿರ್ಮಿಸುವ ಅಂದಾಜು ವೆಚ್ಚ ರೂ.17.00 ಲಕ್ಷಗಳ ಕಾಮಗಾರಿಗೆ ಸಭೆಯು ಆಡಳಿತಾತ್ಮಕ ಅನುಮೋದನೆ ನೀಡಿದೆ.

**➲ ಐಟಂ ನಂ. 14**

ವಿಷಯ: ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

****

ಹಣಕಾಸು ವಿಷಯಕ್ಕೆ ಸಂಬಂಧಿಸಿದಂತೆ 2022-23ನೇ ಆರ್ಥಿಕ ಸಾಲಿನ ವಿಶ್ವವಿದ್ಯಾಲಯದ ಪ್ರಥಮ ಹಣಕಾಸು ಸಮಿತಿ ಸಭೆಯನ್ನು ದಿನಾಂಕ 08.06.2022 ರಂದು ಆಯೋಜಿಸಿ, ಸದರಿ ಸಮಿತಿ ಸಭೆಯು ಈ ಕುರಿತು ನಡಾವಳಿಗಳನ್ನು ಸಲ್ಲಿಸಿದೆ. ಈ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

ತೀರ್ಮಾನ

2022-23ನೇ ಆರ್ಥಿಕ ಸಾಲಿನ ವಿಶ್ವವಿದ್ಯಾಲಯದ ಪ್ರಥಮ ಹಣಕಾಸು ಸಮಿತಿ ಸಭೆಯು ನಡಾವಳಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಸಭೆಯು ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಯಥಾವತ್ತಾಗಿ ಅನುಮೋದಿಸಿದೆ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಇಡಿ 483 ಯುಎನ್ಇ 2017, ಬೆಂಗಳೂರು. ದಿನಾಂಕ: 16.03.2019ರ ಯು.ಜಿ.ಸಿ 7ನೇ ವೇತನ ಶ್ರೇಣಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಪಿಹೆಚ್.ಡಿ/ಎಂ.ಫಿಲ್ ಹಾಗೂ ಇನ್ನಿತರ ಹೆಚ್ಚಿನ ವಿದ್ಯಾರ್ಹತೆಗೆ ಮುಂಗಡ ವೇತನ ಬಡ್ತಿ ನೀಡುವ ಕುರಿತು ಯಾವುದೇ ನಿರ್ದೇಶನ ಇರದ ಕಾರಣ ಸದರಿ ವೇತನ ಬಡ್ತಿಗಳನ್ನು ಬೋಧಕ ಸಿಬ್ಬಂದಿಗಳಿಗೆ ನೀಡಬಾರದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**➲ ಐಟಂ ನಂ. 15**

ವಿಷಯ: ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Clerk/Computer Operator/ Data Entry Operator/Lab Technician) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾವನೆಯನ್ನು ಮರುಮಂಡಿಸುವ ಕುರಿತು.

ಉಲ್ಲೇಖ: ದಿನಾಂಕ 05.05.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನ ಸಂಖ್ಯೆ 10

******

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Clerk/Computer Operator/ Data Entry Operator/Lab Technician) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ದಿನಾಂಕ: 27.12.2021 ರಂದು ಟೆಂಡರ್ ಅಧಿಸೂಚನೆ ಹೊರಡಿಸಿದ್ದು, ತಾಂತ್ರಿಕ ಬಿಡ್‌ನಲ್ಲಿ 07 ಬಿಡ್‌ದಾರರು ಭಾಗವಹಿಸಿದರೇ, ಈ ಟೆಂಡರ್ ಸಮಿತಿ ಸಭೆಯಲ್ಲಿ ಟೆಂಡರ್‌ದಾರರ ದಾಖಲೆಗಳನ್ನು ಪರಿಶೀಲಿಸಿದಲ್ಲಿ 06 ಬಿಡ್‌ದಾರರು ಅರ್ಹರಾಗಿರುತ್ತಾರೆ. ನಂತರ ಫೈನಾನ್ಸಿಯಲ್ ಬಿಡ್ ತೆರೆದು ಈ ಟೆಂಡರ್ ಸಮಿತಿ ಸಭೆಯಲ್ಲಿ ಚರ್ಚಿಸಿ ಟೆಂಡರ್ ನಿಯಮಾನುಸಾರ L-01 ಬಿಡ್‌ದಾರರಿಗೆ ಟೆಂಡರ್ ನೀಡಲು ಈ ಟೆಂಡರ್ ಸಮಿತಿ ಸಭೆಯು ತೀರ್ಮಾನಿಸಿರುತ್ತದೆ. ಉಲ್ಲೇಖಿತ ಸಭೆಯಲ್ಲಿ L–01 ಬಿಡ್‌ದಾರರಿಗೆ ಟೆಂಡರ್ ನೀಡಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿತ್ತು. ಉಲ್ಲೇಖಿತ ಸಿಂಡಿಕೇಟ್ ಸಭೆಯಲ್ಲಿ ಸದ್ಯ ಚಾಲ್ತಿಯಲ್ಲಿರುವ ಟೆಂಡರ್‌ದಾರರಿಗೆ ಮುಂದಿನ ಆದೇಶವರೆಗೆ ಮುಂದುವರೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿದೆ. ಈ ಹಿನ್ನೆಲೆಯಲ್ಲಿ ಸದರಿ ತೀರ್ಮಾನದಂತೆ ಅವರ ಸೇವೆಯನ್ನು ಮುಂದುವರೆಸಿದ್ದು, ಸದರಿ ವಿಷಯವನ್ನು ಈ ಸಭೆಯಲ್ಲಿ ಮರು ಮಂಡಿಸಿದೆ.

<u>ತೀರ್ಮಾನ</u>

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Clerk/Computer Operator/ Data Entry Operator/Lab Technician) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ಟೆಂಡರ್ ನಿಯಮಾನುಸಾರ L-01 ಬಿಡ್‌ದಾರರಿಗೆ ಟೆಂಡರ್ ನೀಡಲು ಇ–ಟೆಂಡರ್ ಸಮಿತಿ ಸಭೆಯು ತೀರ್ಮಾನಿಸಿರುತ್ತದೆ. ಈ ಕುರಿತಾಗಿ ದಿನಾಂಕ 05.05.2022ರ ಸಿಂಡಿಕೇಟ್ ಸಭೆಯ ಐಟಂ ಸಂಖ್ಯೆ 10ರನ್ವಯ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ತಿಳಿಸಿ, ಸದರಿ ಟೆಂಡರದಾರರನ್ನು ಮುಂದಿನ ಆದೇಶದವರೆಗೆ ಮುಂದುವರೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತ್ತು. ಸಿಂಡಿಕೇಟ್ ಸಭೆಯ ನಿರ್ಣಯದಂತೆ ದಾಖಲೆಗಳನ್ನು ಪರಿಶೀಲಿಸಿ ಮರುಮಂಡಿಸಿದಾಗ ಡಾ. ಮಲ್ಲಿಕಾರ್ಜುನ ಮರ್ಚೆಡ್, ಸನ್ಮಾನ್ಯ ಸಿಂಡಿಕೇಟ್ ಸದಸ್ಯರು, ಸದ್ಯ ಚಾಲ್ತಿಯಲ್ಲಿರುವ ಟೆಂಡರದಾರರು ಮತ್ತು ಸದ್ಯದ L–01 ಬಿಡ್‌ದಾರರು ಒಬ್ಬರೆಯಾಗಿರುವ ಹಿನ್ನೆಲೆಯಲ್ಲಿ ಸದರಿ ಟೆಂಡರದಾರರು ಹೊರಗುತ್ತಿಗೆ ನೌಕರರ ವೇತನ ಮತ್ತು ಇತರೆ ಉಪಲಬ್ಧಗಳನ್ನು ಸರಿಯಾಗಿ ಪಾವತಿಸುತ್ತಿಲ್ಲ ಎಂದು ತಿಳಿಸಿದರು. ಸದರಿ ವಿಷಯವನ್ನು ಸುದೀರ್ಘವಾಗಿ ಚರ್ಚಿಸಿದ ನಂತರ ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳು ಈ ಕುರಿತಾಗಿ ಉನ್ನತ ಮಟ್ಟದ ಸತ್ಯಶೋಧನಾ ಸಮಿತಿಯನ್ನು ರಚಿಸುವುದಾಗಿ ತಿಳಿಸಿದರು. ಮತ್ತು ಮುಂದುವರೆದು, ಸಮಿತಿಯ ವರದಿಯನ್ನು ಸನ್ಮಾನ್ಯ ಸಿಂಡಿಕೇಟ್ ಸದಸ್ಯರ ಗಮನಕ್ಕೆ ತರಲಾಗುವುದು ಹಾಗೂ ಟೆಂಡರದಾರರು ತಪ್ಪಿತಸ್ಥರೆಂದು ಕಂಡು ಬಂದಲ್ಲಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು. ನಂತರ ಸಭೆಯ ಸರ್ವ ಸದಸ್ಯರು ಇದಕ್ಕೆ ಸಮ್ಮತಿ ಸೂಚಿಸಿದರು.

ವಿಶ್ವವಿದ್ಯಾಲಯದ ಆಡಳಿತದ ಹಿತದೃಷ್ಟಿಯಿಂದ, ಸದ್ಯ ಚಾಲ್ತಿಯಲ್ಲಿರುವ ಟೆಂಡರದಾರರ ಸೇವೆಯನ್ನು ಮುಂದಿನ ಆದೇಶದವರೆಗೆ ಮುಂದುವರೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**➲ ಐಟಂ ನಂ. 16**

ವಿಷಯ: ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Attender/Peon/Cleaning of office/ Sweeper/other unskilled & Driver, & Scavenger) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾವನೆಯನ್ನು ಮರು ಮಂಡಿಸುವ ಕುರಿತು.

ಉಲ್ಲೇಖ: ದಿನಾಂಕ 05.05.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನ ಸಂಖ್ಯೆ 11

******

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Attender/Peon/Cleaning of office/ Sweeper/other unskilled & Driver, & Scavenger) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ದಿನಾಂಕ: 27.12.2021 ರಂದು ಟೆಂಡರ್ ಅಧಿಸೂಚನೆ ಹೊರಡಿಸಿದ್ದು, ತಾಂತ್ರಿಕ ಬಿಡ್‌ನಲ್ಲಿ 06 ಬಿಡ್‌ದಾರರು ಭಾಗವಹಿಸಿದರೇ, ತಾಂತ್ರಿಕ ಬಿಡ್‌ಗೆ ಸಂಬಂಧಿಸಿದ ಈ ಟೆಂಡರ್ ಸಮಿತಿ ಸಭೆಯಲ್ಲಿ ಟೆಂಡರ್‌ದಾರರ ದಾಖಲೆಗಳನ್ನು ಪರಿಶೀಲಿಸಲಾಗಿ 05 ಬಿಡ್‌ದಾರರು ಅರ್ಹರಾಗಿರುತ್ತಾರೆ. ಫೈನಾನ್ಸಿಯಲ್ ಬಿಡ್ ತೆರೆದು ಈ ಟೆಂಡರ್ ಸಮಿತಿ ಸಭೆಯಲ್ಲಿ ಚರ್ಚಿಸಿ ಟೆಂಡರ್ ನಿಯಮಾನುಸಾರ L-01 ಬಿಡ್‌ದಾರರಿಗೆ ಟೆಂಡರ್ ನೀಡಲು ಈ ಟೆಂಡರ್ ಸಮಿತಿ ಸಭೆಯು ತೀರ್ಮಾನಿಸಿರುತ್ತದೆ. ಉಲ್ಲೇಖಿತ ಸಭೆಯಲ್ಲಿ L–01 ಬಿಡ್‌ದಾರರಿಗೆ ಟೆಂಡರ್ ನೀಡಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿತ್ತು. ಉಲ್ಲೇಖಿತ ಸಿಂಡಿಕೇಟ್ ಸಭೆಯಲ್ಲಿ ಸದ್ಯ ಚಾಲ್ತಿಯಲ್ಲಿರುವ ಟೆಂಡರ್‌ದಾರರಿಗೆ ಮುಂದಿನ ಆದೇಶವರೆಗೆ ಮುಂದುವರೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿದೆ. ಈ ಹಿನ್ನೆಲೆಯಲ್ಲಿ ಸದರಿ ತೀರ್ಮಾನದಂತೆ ಅವರ ಸೇವೆಯನ್ನು ಮುಂದುವರೆಸಿದ್ದು, ಸದರಿ ವಿಷಯವನ್ನು ಈ ಸಭೆಯಲ್ಲಿ ಮರು ಮಂಡಿಸಿದೆ.

<u>ತೀರ್ಮಾನ</u>

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Attender/Peon/Cleaning of office/ Sweeper/other unskilled & Driver, & Scavenger) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ಟೆಂಡರ್ ನಿಯಮಾನುಸಾರ L-01 ಬಿಡ್‌ದಾರರಿಗೆ ಟೆಂಡರ್ ನೀಡಲು ಇ-ಟೆಂಡರ್ ಸಮಿತಿ ಸಭೆಯು ತೀರ್ಮಾನಿಸಿರುತ್ತದೆ. ಈ ಕುರಿತಾಗಿ ದಿನಾಂಕ 05.05.2022ರ ಸಿಂಡಿಕೇಟ್ ಸಭೆಯ ಐಟಂ ಸಂಖ್ಯೆ 11ರನ್ವಯ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ತಿಳಿಸಿ, ಸದರಿ ಟೆಂಡರದಾರರನ್ನು ಮುಂದಿನ ಆದೇಶದವರೆಗೆ ಮುಂದುವರೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತ್ತು. ಸಿಂಡಿಕೇಟ್ ಸಭೆಯ ನಿರ್ಣಯದಂತೆ ದಾಖಲೆಗಳನ್ನು ಪರಿಶೀಲಿಸಿ ಮರುಮಂಡಿಸಿದಾಗ ಡಾ. ಮಲ್ಲಿಕಾರ್ಜುನ ಮರ್ಚೆಡ್, ಸನ್ಮಾನ್ಯ ಸಿಂಡಿಕೇಟ್ ಸದಸ್ಯರು, ಸದ್ಯ ಚಾಲ್ತಿಯಲ್ಲಿರುವ ಟೆಂಡರದಾರರು ಮತ್ತು ಸದ್ಯದ L–01 ಬಿಡ್‌ದಾರರು ಒಬ್ಬರೆಯಾಗಿರುವ ಹಿನ್ನೆಲೆಯಲ್ಲಿ ಸದರಿ ಟೆಂಡರದಾರರು ಹೊರಗುತ್ತಿಗೆ ನೌಕರರ ವೇತನ ಮತ್ತು ಇತರೆ ಉಪಲಬ್ಧಗಳನ್ನು ಸರಿಯಾಗಿ ಪಾವತಿಸುತ್ತಿಲ್ಲ ಎಂದು ತಿಳಿಸಿದರು. ಸದರಿ ವಿಷಯವನ್ನು ಸುದೀರ್ಘವಾಗಿ ಚರ್ಚಿಸಿದ ನಂತರ ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳು ಈ ಕುರಿತಾಗಿ ಉನ್ನತ ಮಟ್ಟದ ಸತ್ಯಶೋಧನಾ ಸಮಿತಿಯನ್ನು ರಚಿಸುವುದಾಗಿ ತಿಳಿಸಿದರು. ಮತ್ತು ಮುಂದುವರೆದು, ಸಮಿತಿಯ ವರದಿಯನ್ನು ಸನ್ಮಾನ್ಯ ಸಿಂಡಿಕೇಟ್ ಸದಸ್ಯರ ಗಮನಕ್ಕೆ ತರಲಾಗುವುದು ಹಾಗೂ ಟೆಂಡರದಾರರು ತಪ್ಪಿತಸ್ಥರೆಂದು ಕಂಡು ಬಂದಲ್ಲಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು. ನಂತರ ಸಭೆಯ ಸರ್ವ ಸದಸ್ಯರು ಇದಕ್ಕೆ ಸಮ್ಮತಿ ಸೂಚಿಸಿದರು.

ವಿಶ್ವವಿದ್ಯಾಲಯದ ಆಡಳಿತದ ಹಿತದೃಷ್ಟಿಯಿಂದ, ಸದ್ಯ ಚಾಲ್ತಿಯಲ್ಲಿರುವ ಟೆಂಡರದಾರರ ಸೇವೆಯನ್ನು ಮುಂದಿನ ಆದೇಶದವರೆಗೆ ಮುಂದುವರೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ಟೇಬಲ್ ಅಜೆಂಡಾ**

**➲ ಐಟಂ ನಂ. 01**

**ವಿಷಯ:** Interdisciplinary ಯೋಜನಾ ಪ್ರಸ್ತಾವನೆಯನ್ನು ಬಾಹ್ಯ ವಿಷಯ ತಜ್ಞರುಗಳು ನೀಡಿರುವ ಶಿಫಾರಸ್ಸುಗಳನ್ನು ಅನುಮೋದಿಸುವ ಕುರಿತು.

*****

ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳಿಗೆ ಬಹುಶಿಸ್ತೀಯ (Interdisciplinary) ಸಂಶೋಧನಾ ಪ್ರಸ್ತಾವನೆಗಳನ್ನು ಸಲ್ಲಿಸಲು ಸೂಚಿಸಲಾಗಿತ್ತು. ಅದರಂತೆಯೇ 5 ಸಂಶೋಧನಾ ಪ್ರಸ್ತಾವನೆಗಳು ಸಲ್ಲಿಕೆಯಾಗಿದ್ದವು. ಇವುಗಳನ್ನು ಪರಿಶೀಲಿಸಿ ಹಾಗೂ ಮೌಲ್ಯಮಾಪನಗೊಳಿಸಲು ಇಬ್ಬರು ಬಾಹ್ಯ ವಿಷಯ ತಜ್ಞರುಗಳನ್ನು ನೇಮಿಸಿದ್ದು, ಸದರಿಯವರು ಈ ಕೆಳಕಂಡ 5 ಸಂಶೋಧನಾ ಪ್ರಸ್ತಾವನೆಗಳನ್ನು ಮೌಲ್ಯಮಾಪನಗೊಳಿಸಿ ಶಿಫಾರಸ್ಸುಗಳನ್ನು ಹೊರಡಿಸಿದ್ದು, ಸದರಿ ಪ್ರಸ್ತಾವಾನೆಗಳ (ಆರ್ಥಿಕ ಅನುಮೋದನೆಗಾಗಿ) Budget Allocation ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

| SL.N | Name | Department | Title of the Project | Budget Allocated | Remarks |
|---|---|---|---|---|---|
| 01 | Dr. Vijayakumar B Malashetty<br><br>Dr. Hanumesh Vidya | Zoology<br><br>Mathamatics | "F1-Extended one-Generation Reproductive Toxicity study (EOGRTS) of a-Terpineol –A Fragrance Ingredient in Sprague-Dawley: A Tiered Approach to Systemic Toxicity Study" | Proposed by the PI: 5,08,500.00<br><br>Recommended by the Expert: 4,50,000.00 | Proposal is modified as per the suggestions and it is recommended |
| 02 | Dr. Kavitha Sagar<br><br>Dr. Krishnaveni R<br><br>Dr. Lokesh K S | Botany<br><br>Microbiology<br><br>Chemistry | "Isolation of plant and microbial derived defensins as well as their chemical Synthesis for Biological applications" | Proposed by the PI: 8,23,340.00<br><br>Recommended by the Expert: 8,00,000.00 | Project Proposal application is modified as per the refree comments/suggestions Queries were well justified, the proposal is strongly recommended |
| 03 | Dr. B. Uma Reddy<br><br>Dr. Ashajyothi C<br><br>Dr. Kotresh M G | Botany<br><br>Biotechnology<br><br>Physics | "De novo phyto-fabrication of nano materials for physic-biological applications" | Proposed by the PI: 11,22,033.00<br><br>Recommended by the Expert: 7,50,000.00 | Proposal is modified as per the suggestions and it is recommended |
| 04 | Dr. Khadke Udaykumar<br><br>Dr. Shashikanth H Majagi | Physics<br><br>Zoology | "A GIS-based approach for radiation risk assessments on the ecological system at thermal and steel plants towards adopting remedial" | Proposed by the PI: 8,42,000.00<br><br>Recommended by the Expert: 7,00,000.00 | Proposal is modified as per the suggestions and it is recommended |
| 05 | Dr. Arunkumar Lagashetty<br><br>Dr. Thipperudrappa J | Chemistry<br><br>Physics | "Synthesis, Characterization and properties of nanosized bimetallic oxides and its polyaniline nanocomposites" | Proposed by the PI: 5,00,000.00<br><br>Recommended by the Expert: 4,50,000.00 | Proposal is modified as per the suggestions and it is recommended |

<u>ತೀರ್ಮಾನ</u>

ಕಾರ್ಯಸೂಚಿಯಲ್ಲಿ ಸೂಚಿತ Interdisciplinary ಯೋಜನಾ 05 ಸಂಶೋಧನಾ ಪ್ರಸ್ತಾವನೆಗಳನ್ನು ಮೌಲ್ಯಮಾಪನಗೊಳಿಸಿದ ಬಾಹ್ಯ ವಿಷಯ ತಜ್ಞರುಗಳು (Budget Allocated by the Expert)ಗೆ

ಸಂಬಂಧಿಸಿದಂತೆಯೂ ಸಹ ಕೆಲ ಶಿಫಾರಸ್ಸುಗಳನ್ನು ನೀಡಿರುತ್ತಾರೆ. ಇವುಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಸಭೆಯು ಬಾಹ್ಯ ವಿಷಯ ತಜ್ಞರುಗಳ ಆರ್ಥಿಕ ಅನುಮೋದನೆ ಮತ್ತು ಶಿಫಾರಸುಗಳನ್ನು ಯಥಾವತ್ತಾಗಿ ಅನುಮೋದಿಸಿದೆ. ಮುಂದುವರೆದು, KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಈ–ಟೆಂಡರ್ ಕರೆಯಲು ಸಭೆಯು ಸೂಚಿಸಿತು.

**➲ ಐಟಂ ನಂ. 02**

ವಿಷಯ: ಡಾ. ಎನ್.ಎಚ್. ಕಲ್ಲೂರ, ಪ್ರಾಧ್ಯಾಪಕರು ಇವರ ದಿನಾಂಕ 01.02.2013 ರಿಂದ 19.12.2013ರ ವರೆಗಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ ಸೇವಾವಧಿಯನ್ನು ಹಳೆಯ ಪಿಂಚಣಿ ಯೋಜನೆಯಲ್ಲಿ ಪರಿಗಣಿಸುವ ಕುರಿತು.

ಉಲ್ಲೇಖ: ಶ್ರೀ. ನರಸಿಂಹ ರಾಯಚೂರ, ಸಿಂಡಿಕೇಟ್ ಸದಸ್ಯರ ಪ್ರಸ್ತಾವನೆ ಪ್ರತಿ.

*****

ಡಾ. ಎನ್.ಎಚ್. ಕಲ್ಲೂರ, ಪ್ರಾಧ್ಯಾಪಕರು, ಸ್ನಾತಕೋತ್ತರ ಇಂಗ್ಲೀಷ ಅಧ್ಯಯವ ವಿಭಾಗ ಕವಿವಿ ಧಾರವಾಡ ಇವರ ಸೇವೆಯನ್ನು ಹಳೆಯ ಪಿಂಚಣಿ ಯೋಜನೆಯಲ್ಲಿ ಪರಿಗಣಿಸುವ ಪ್ರಕ್ರಿಯೆಯು ಜಾರಿಯಲ್ಲಿದ್ದು, ಸದರಿಯವರು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯಲ್ಲಿ ದಿನಾಂಕ 01.02.2013 ರಿಂದ 19.12.2013ರ ವರೆಗಿನ ಅವಧಿಯಲ್ಲಿ ಇಂಗ್ಲೀಷ ಅಧ್ಯಯನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರೆಂದು ಸೇವೆ ಸಲ್ಲಿಸಿರುತ್ತಾರೆ. ಆದರೆ ಉಲ್ಲೇಖಿತ ಪ್ರಸ್ತಾವನೆಯಲ್ಲಿ ಸದರಿಯವರು ವಿಶ್ವವಿದ್ಯಾಲಯದಲ್ಲಿ ನೇಮಕಾತಿ ಹೊಂದುವ ಪೂರ್ವದಲ್ಲಿ ವಿವಿಧ ಸರಕಾರಿ ಕಾಲೇಜುಗಳಲ್ಲಿ ಬೋಧಕರಾಗಿ ಕಾರ್ಯನಿರ್ವಹಿಸಿದ್ದು, ಸರಕಾರಿ ನಿಯಮದಂತೆ ಹಳೆಯ ಪಿಂಚಣಿಯಲ್ಲೇ ಕಾರ್ಯನಿರ್ವಹಿಸಿರುತ್ತಾರೆ. ವಿಶ್ರೀಕೃ ವಿಶ್ವವಿದ್ಯಾಲಯದ ಅಧಿಸೂಚನೆರನ್ವಯ ಡಾ. ಎನ್.ಎಚ್. ಕಲ್ಲೂರ ಇವರೊಂದಿಗೆ ನೇಮಕಾತಿ ಹೊಂದಿದ 10 ಜನ ಸಹಾಯಕ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು/ಪ್ರಾಧ್ಯಾಪಕರನ್ನು ಸೇವಾ ನಿರತ ಕೋಡಾದಡಿಯಲ್ಲಿ ವಿಶ್ವವಿದ್ಯಾಲಯದ ಸೇವೆಗೆ ಸೇರಿದ್ದರಿಂದ ದಿನಾಂಕ 01.04.2006ಕ್ಕಿಂತ ಮುಂಚಿನ ಹಳೆಯ ಪಿಂಚಣಿ ಯೋಜನೆಯ ವ್ಯಾಪ್ತಿಗೆ ಒಳಪಡಿಸಲಾಗಿದೆ. ಜೊತೆಗೆ ಲೆಕ್ಕ ಪರಿಶೋಧಕರ ವಸೂಲಾತಿಯನ್ನು ಸಹ ಪ್ರಾಸ್ತಾಪಿಸಿರುತ್ತಾರೆ.

ಆದ್ದರಿಂದ ಡಾ. ಎನ್.ಎಚ್. ಕಲ್ಲೂರ, ಪ್ರಾಧ್ಯಾಪಕರು ಇವರ ದಿನಾಂಕ 01.02.2013 ರಿಂದ 19.12.2013ರ ವರೆಗಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ ಸೇವಾವಧಿಯನ್ನು ಹಳೆಯ ಪಿಂಚಣಿ ಯೋಜನೆಯಲ್ಲಿ ಪರಿಗಣಿಸುವಂತೆ ಕೋರಿರುವ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

<u>ತೀರ್ಮಾನ</u>

ಡಾ. ಎನ್.ಎಚ್. ಕಲ್ಲೂರ, ಪ್ರಾಧ್ಯಾಪಕರು ಇವರ ದಿನಾಂಕ 01.02.2013 ರಿಂದ 19.12.2013ರ ವರೆಗಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ ಸೇವಾವಧಿಯನ್ನು ಹಳೆಯ ಪಿಂಚಣಿ ಯೋಜನೆಯಲ್ಲಿ ಪರಿಗಣಿಸುವ ವಿಷಯವಾಗಿ ಪ್ರಸ್ತಾಪಿಸಿದ ಕುಲಸಚಿವರು, ವಿಶ್ರೀಕೃ ವಿಶ್ವವಿದ್ಯಾಲಯ ಇವರು ಸಿಂಡಿಕೇಟ್ ಸಭೆಗೆ ತಮ್ಮಲ್ಲಿ ಲಭ್ಯವಿರುವ ಮಾಹಿತಿ ಒದಗಿಸಿ ಈ ಕುರಿತು ಸಂಪೂರ್ಣ ಮಾಹಿತಿಯೊಂದಿಗೆ ಸದರಿ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮರು ಮಂಡಿಸುವುದಾಗಿ ತಿಳಿಸಿದರು. ಇದಕ್ಕೆ ಸಿಂಡಿಕೇಟ್ ಸಭೆಯ ಎಲ್ಲಾ ಸದಸ್ಯರು ಒಪ್ಪಿಗೆ ಸೂಚಿಸಿದರು.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105

ಕುಲಸಚಿವರು

ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2022–23/**1166** ದಿನಾಂಕ: 30.08.2022

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ. 05.08.2022 ರಂದು ಮಧ್ಯಾಹ್ನ 12:00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.
ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 06.08.2022

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ. 05.08.2022 ರಂದು ಮಧ್ಯಾಹ್ನ 12:00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:
1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

| ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ<br>"ಜ್ಞಾನ ಸಾಗರ" ಆವರಣ, ಬಳ್ಳಾರಿ – 583 105 |
|---|
| ಕುಲಸಚಿವರು |

## ದಿನಾಂಕ 05.08.2022 ರಂದು ಮಧ್ಯಾಹ್ನ 12.00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿ

### ➲ ಐಟಂ ನಂ. 01:

ವಿಷಯ: ವಿಶ್ವವಿದ್ಯಾಲಯದ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಂಬಂಧ ಪರಿನಿಯಮಾವಳಿಯನ್ನು ಅನುಮೋದಿಸುವ ಕುರಿತು.

ಉಲ್ಲೇಖ 01. ಸರ್ಕಾರದ ಪತ್ರ ಸಂಖ್ಯೆ: ಇಡಿ 309ಯುಎನ್ಇ 2021 ದಿ. 26.07.2022

*****

ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾಲಯಗಳಲ್ಲಿನ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಂಬಂಧ ಸರ್ಕಾರವು ಉಲ್ಲೇಖಿತ ಪತ್ರದೊಂದಿಗೆ ಮಾದರಿ ಪರಿನಿಯಮಾವಳಿಯನ್ನು ಕಳುಹಿಸಿದೆ. ಸದರಿ ಪರಿನಿಯಮಾವಳಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಈ ವಿಷಯನ್ನು ಸಲ್ಲಿಸಿದೆ.

**ತೀರ್ಮಾನ**

ಸದರಿ ವಿಶ್ವವಿದ್ಯಾಲಯದ ಬೋಧಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಂಬಂಧದ ಪರಿನಿಯಮಾವಳಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸಭೆಯು ಸರ್ವಾನುಮತದಿಂದ ಅನುಮೋದಿಸಿದೆ.

### ➲ ಐಟಂ ನಂ. 02:

ವಿಷಯ PG Diploma in Yogic Science/ Certificate Course in Yogic Science ಕೋರ್ಸ್‌ಗಳಿಗೆ ಸಂಬಂಧಿಸಿದ ನಿಯಮಾವಳಿ ಮತ್ತು ಪಠ್ಯಕ್ರಮದ ಅನುಮೋದನೆ ಕುರಿತು.

****

ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ 2022–23ನೇ ಶೈಕ್ಷಣಿಕ ಸಾಲಿನಿಂದ PG Diploma in Yogic Science/ Certificate Course in Yogic Science (which Shall be a Concurrent Programme) ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ. ಹೀಗಾಗಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಿಯಮಾವಳಿ (Regulation) ಮತ್ತು ಪಠ್ಯಕ್ರಮ (Syllabus) ಸಿದ್ದಪಡಿಸಿದ್ದು, ಸದರಿ ನಿಯಮಾವಳಿ ಮತ್ತು ಪಠ್ಯಕ್ರಮವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

2022–23ನೇ ಶೈಕ್ಷಣಿಕ ಸಾಲಿನಿಂದ PG Diploma in Yogic Science/ Certificate Course in Yogic Science (which Shall be a Concurrent Programme) ಕೋರ್ಸ್‌ಗಳ ನಿಯಮಾವಳಿ (Regulation) ಮತ್ತು ಪಠ್ಯಕ್ರಮವನ್ನು (Syllabus) ಕೂಲಂಕುಷವಾಗಿ ಪರಿಶೀಲಿಸಿ ಸಭೆಯು ಅನುಮೋದಿಸಿದೆ.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

| | | |
|---|---|---|
| | ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ<br>"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105 | |
| ಕುಲಸಚಿವರು | | |


ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2022–23/**1533** ದಿನಾಂಕ: 28.10.2022

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ. 12.09.2022 ರಂದು ಬೆಳಿಗ್ಗೆ 11:00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 26.09.2022

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ. 12.09.2022 ರಂದು ಬೆಳಿಗ್ಗೆ 11:00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 12.09.2022 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ

### ➲ ಐಟಂ ನಂ. 01:

ದಿನಾಂಕ. 20.07.2022, ಮತ್ತು 05.08.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮದ ವರದಿಯನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

**ತೀರ್ಮಾನ**

ದಿನಾಂಕ. 20.07.2022, ಮತ್ತು 05.08.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮದ ವರದಿಯನ್ನು ಸಭೆಯು ದೃಢೀಕರಿಸಿ ಅನುಮೋದಿಸಿದೆ.

### ➲ ಐಟಂ ನಂ. 02:

ವಿಷಯ: ಶ್ರೀ ವಿನಾಯಕ.ಎಸ್ ಇವರಿಗೆ ಅನುಕಂಪ ಆಧಾರದ ಮೇಲೆ ಉದ್ಯೋಗ ನೀಡುವ ಕುರಿತು.

ಉಲ್ಲೇಖ: 1. ಶ್ರೀ ವಿನಾಯಕ.ಎಸ್ ಇವರ ಮನವಿ ಪತ್ರ ದಿನಾಂಕ: 05.01.2022

2. ದಿನಾಂಕ: 03.02.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ಐಟಂ ಸಂಖ್ಯೆ: 01
3. ಈ ಕಛೇರಿ ಪತ್ರ ಸಂಖ್ಯೆ: ವಿಶ್ರೀಕೃವಿಬ/ಆಡಳಿತ/ಡಿಪಿಎಆರ್/2022–23/150 ದಿನಾಂಕ: 25.04.2022
4. ಸರ್ಕಾರದ ಪತ್ರ ಸಂಖ್ಯೆ: ಇಡಿ 14 ಯುಆರ್ಇ 2022 ದಿನಾಂಕ: 23.06.2022
5. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 100 ಎಸ್‌ಸಿಎ 95, ದಿನಾಂಕ 12.09.1996.
6. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 21.07.2022

***

ದಿ: ಸತೀಶ್.ಹೆಚ್, ಅನುಚರ ಇವರು ದಿನಾಂಕ: 11.12.2021 ರಂದು ಮರಣ ಹೊಂದಿರುವ ಹಿನ್ನೆಲೆಯಲ್ಲಿ ಅವರ ಮೊದಲನೇ ಮಗನಾದ ಶ್ರೀ ವಿನಾಯಕ.ಎಸ್ ಇವರು ಅನುಕಂಪ ಆಧಾರದ ಮೇಲೆ ಉದ್ಯೋಗ ನೀಡುವಂತೆ ಉಲ್ಲೇಖ–01ರಂತೆ ಮನವಿ ಪತ್ರ ನೀಡಿದ್ದು, ಸದರಿಯವರ ಮನವಿ ಪತ್ರವನ್ನು ದಿನಾಂಕ: 03.02.2022 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿ, ಸದರಿಯವರಿಗೆ ಅನುಕಂಪ ಆಧಾರಿತ ಉದ್ಯೋಗ ನೀಡುವ ಸಂಬಂಧ ಸರ್ಕಾರದ ನಿರ್ದೇಶನ ಪಡೆಯಲು ಉಲ್ಲೇಖ–02ರಂತೆ ಸಭೆಯು ನಿರ್ಧರಿಸಿರುತ್ತದೆ. ಅದರಂತೆ ಸರ್ಕಾರಕ್ಕೆ ಶ್ರೀ ವಿನಾಯಕ.ಎಸ್ ಇವರಿಗೆ ಅನುಕಂಪ ಆಧಾರಿತ ಉದ್ಯೋಗ ನೀಡಲು ನಿರ್ದೇಶನ ಕೋರಿ ಉಲ್ಲೇಖ–03ರಂತೆ ಪತ್ರ ಕಳುಹಿಸಲಾಗಿದೆ.

ಉಲ್ಲೇಖ 03ಕ್ಕೆ ಸಂಬಂಧಿಸಿದಂತೆ ಶ್ರೀ ವಿನಾಯಕ.ಎಸ್ ಇವರಿಗೆ ಅನುಕಂಪ ಆಧಾರಿತ ಉದ್ಯೋಗ ನೀಡುವ ಸಂಬಂಧ ವಿಶ್ವವಿದ್ಯಾಯದ ಕುಲಪತಿ ಹಾಗೂ ಸಿಂಡಿಕೇಟ್ ನೇಮಕಾತಿ ಪ್ರಾಧಿಕಾರವಾಗಿರುವುದರಿಂದ ಚಾಲ್ತಿಯಲ್ಲಿರುವ ಅನುಕಂಪ ನೇಮಕಾತಿ ನಿಯಮದನ್ವಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಅಧಿಸೂಚನೆ/ಆದೇಶ/ಸುತ್ತೋಲೆ/ಮಾರ್ಗಸೂಚಿಗಳನ್ವಯ ಪರಿಶೀಲಿಸಿ, ಶ್ರೀ ವಿನಾಯಕ ಎಸ್. ಇವರಿಗೆ ಅನುಕಂಪದ ಆಧಾರದ ಮೇಲೆ ವಿದ್ಯಾರ್ಹತೆಗನುಗುಣವಾಗಿ ಉದ್ಯೋಗ ಕಲ್ಪಿಸುವ ಕುರಿತು ವಿಶ್ವವಿದ್ಯಾಲಯ ಹಂತದಲ್ಲಿಯೇ ಕ್ರಮವಹಿಸುವಂತೆ ಉಲ್ಲೇಖ–04ರಂತೆ ಪತ್ರ ಕಳುಹಿಸಿರುತ್ತಾರೆ.

ಹೀಗಾಗಿ ಶ್ರೀ ವಿನಾಯಕ. ಎಸ್ ಇವರಿಗೆ ಅನುಕಂಪ ಆಧಾರಿತವಾಗಿ ಅನುಚರ ಹುದ್ದೆಯನ್ನು ನೀಡಲು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಸದರಿ ವಿಷಯವಾಗಿ ಚರ್ಚಿಸಿ ಶ್ರೀ ವಿನಾಯಕ ಎಸ್. ಇವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ಕಲ್ಪಿಸುವ ಕುರಿತು ವಿಶ್ವವಿದ್ಯಾಲಯ ಹಂತದಲ್ಲಿಯೇ ಕ್ರಮವಹಿಸುವಂತೆ ಸೂಚಿಸಿದ ಸರ್ಕಾರದ ಉಲ್ಲೇಖ–04ರ ಪತ್ರದಂತೆ ಶ್ರೀ ವಿನಾಯಕ. ಎಸ್ ಇವರಿಗೆ ಅನುಕಂಪ ಆಧಾರಿತವಾಗಿ ಅನುಚರ ಹುದ್ದೆಯನ್ನು ನೀಡಲು ಸಭೆಯು ಅನುಮೋದಿಸಿದೆ. ಮುಂದುವರೆದು, ಇವರ ವಿದ್ಯಾರ್ಹತೆ ಅನುಗುಣವಾಗಿ ಹೆಚ್ಚಿನ ಹುದ್ದೆ ನೀಡುವ ಅವಕಾಶ ಇರುವ ಕುರಿತು ಸರ್ಕಾರಕ್ಕೆ ಪತ್ರ ಬರೆಯಲು ಸಿಂಡಿಕೇಟ್ ಸಭೆಯು ಸಲಹೆ ನೀಡಿದೆ.

**➲ ಐಟಂ ನಂ. 03**

ವಿಷಯ: ಡಾ. ಅರುಣಕುಮಾರ ಲಗಶೆಟ್ಟಿ, ಸಹ ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಇವರ ಪರೀಕ್ಷಾರ್ಥ ಅವಧಿ ಮುಕ್ತಾಯದ ಘೋಷಣೆ ಕುರಿತು.

ಉಲ್ಲೇಖ: 1. ಕರ್ನಾಟಕ ನಾಗರಿಕ ಸೇವೆ (ಪ್ರೊಬೇಷನ್) ನಿಯಮಗಳು –1977 ರ ನಿಯಮ 11
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 21.07.2022.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳನ್ವಯ, ಡಾ. ಅರುಣಕುಮಾರ ಲಗಶೆಟ್ಟಿ ಇವರು ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸಹ ಪ್ರಾಧ್ಯಾಪಕರಾಗಿ ನೇಮಕಾತಿ ಹೊಂದಿ, ದಿನಾಂಕ: 27.05.2019 ರಂದು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ದಿನಾಂಕ: 27.05.2019 ರಿಂದ 26.05.2021ಕ್ಕೆ ಎರಡು ವರ್ಷಗಳ ಖಾಯಂ ಪೂರ್ವ ಸೇವಾ ಅವಧಿಯನ್ನು ತೃಪ್ತಿಕರವಾಗಿ ಸೇವೆ ಸಲ್ಲಿಸಿದ ಪ್ರಯುಕ್ತ ಸದರಿಯವರಿಗೆ ಪರೀಕ್ಷಾರ್ಥ ಅವಧಿಯನ್ನು ಘೋಷಿಸಬೇಕಾಗಿರುತ್ತದೆ. ದಿನಾಂಕ: 22.09.2021 ರಂದು ಜರುಗಿದ ಸಿಂಡಿಕೇಟ್ ಸಭೆ ನಿರ್ಣಯ ಸಂಖ್ಯೆ: 02 ರಂತೆ ಕರ್ನಾಟಕ ನಾಗರಿಕ ಸೇವೆ (ಪ್ರೊಬೇಷನ್) ನಿಯಮಗಳು– 1977 ರ ನಿಯಮ 11 ರ ನ್ಯಾಯಾಲಯದ ತೀರ್ಪಿನ ಷರತ್ತಿಗೆ ಒಳಪಡಿಸಿ, ಸದರಿಯವರ ಪ್ರಮಾಣ ಪತ್ರಗಳು ಸಂಬಂಧಪಟ್ಟ ಪ್ರಾಧಿಕಾರಿಗಳಿಂದ ಪರಿಶೀಲನೆಯಾಗಿ ಬಂದಿರುತ್ತವೆ ಎಂಬುದನ್ನು ಈ ಮೂಲಕ ತಮ್ಮ ಗಮನಕ್ಕೆ ತರಲಾಗಿದೆ.

ಮುಂದುವರೆದು ಸದರಿಯವರ ನೇಮಕಾತಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣವಿರುವುದು ಕಂಡುಬಂದಿದ್ದು, ಕರ್ನಾಟಕ ಸಿವಿಲ್ ಸೇವೆಗಳ (ಪ್ರೊಬೇಷನ್) ನಿಯಮಗಳು, 1977 ರನ್ವಯ ಸದರಿ ಪ್ರಕರಣವು ಚಾಲ್ತಿಯಲ್ಲಿರುವ ಹಿನ್ನೆಲೆಯಲ್ಲಿ ಸದರಿಯವರಿಗೆ ನ್ಯಾಯಾಲಯದ ಅಂತಿಮ ತೀರ್ಪನ್ನು ಕಾಯ್ದಿರಿಸಿ, ಖಾಯಂ ಪೂರ್ವ ಸೇವಾ (ಪ್ರೊಬೇಷನ್) ಅವಧಿಯು ತೃಪ್ತಿಕರವಾಗಿದೆ ಎಂದು ಘೋಷಣೆ ಮಾಡುವ ಸಂಬಂಧ ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ತೀರ್ಮಾನಕ್ಕಾಗಿ ಸಲ್ಲಿಸಿದೆ.

**ತೀರ್ಮಾನ**

ಡಾ. ಅರುಣಕುಮಾರ ಲಗಶೆಟ್ಟಿ, ಸಹ ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಇವರ ಖಾಯಂ ಪೂರ್ವ ಸೇವಾ (ಪ್ರೊಬೇಷನ್) ಅವಧಿಯು ತೃಪ್ತಿಕರವಾಗಿದೆ ಎಂದು ಘೋಷಣೆ ಮಾಡುವ ಸಂಬಂಧ ಕರ್ನಾಟಕ ಸಿವಿಲ್ ಸೇವೆಗಳ (ಪ್ರೊಬೇಷನ್) ನಿಯಮಗಳು, 1977 ಪರಿಶೀಲಿಸಿದ ಸಭೆಯು ಸದರಿಯವರ ನೇಮಕಾತಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣವಿರುವುದು ಕಂಡುಬಂದಿದ್ದು, ಸದರಿ ಪ್ರಕರಣವು ಚಾಲ್ತಿಯಲ್ಲಿರುವ ಹಿನ್ನೆಲೆಯಲ್ಲಿ ನ್ಯಾಯಾಲಯದ ಅಂತಿಮ ತೀರ್ಪನ್ನು ಕಾಯ್ದಿರಿಸಿ, ಖಾಯಂ ಪೂರ್ವ ಸೇವಾ (ಪ್ರೊಬೇಷನ್) ಅವಧಿಯು ತೃಪ್ತಿಕರವಾಗಿದೆ ಎಂದು ಘೋಷಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿದೆ.

ಮುಂದುವರೆದು, ಡಾ. ಅರುಣಕುಮಾರ ಲಗಶೆಟ್ಟಿ, ಸಹ ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ ಇವರಿಂದ ಸದರಿ ವಿಷಯದ ಕುರಿತಾಗಿ ರೂ. 200.00ರ ಬಾಂಡ್ ಪೇಪರ್‌ನಲ್ಲಿ Undertaking ಪಡೆಯಲು ಸಭೆಯು ಸೂಚಿಸಿದೆ.

**ಐಟಂ ಸಂಖ್ಯೆ 04**

ವಿಷಯ: ಶ್ರೀಮತಿ ಮಾಯವ್ವ, ಇವರನ್ನು ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಸ್ಟಾಫ್ ನರ್ಸ್‌ರಾಗಿ ತೆಗೆದುಕೊಳ್ಳುವ ಕುರಿತು.

ಉಲ್ಲೇಖ: 1. ಶ್ರೀಮತಿ ಮಾಯವ್ವ, ಇವರ ಮನವಿ ಪತ್ರ ದಿನಾಂಕ: 09.05.2022
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 17.08.2022

***

ಶ್ರೀಮತಿ ಮಾಯವ್ವ, Diploma in nursing ಪದವಿ ಮಾಡಿದ್ದು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಮುಖ್ಯ ಆವರಣದಲ್ಲಿರುವ ಆರೋಗ್ಯ ಕೇಂದ್ರದಲ್ಲಿ ಸ್ಟಾಫ್ ನರ್ಸ್‌ರಾಗಿ ಕೆಲಸ ನಿರ್ವಹಿಸಲು ಅವಕಾಶ ಮಾಡಿಕೊಡಬೇಕೆಂದು ಮನವಿ ಪತ್ರ ನೀಡಿರುತ್ತಾರೆ.

ವಿಶ್ವವಿದ್ಯಾಲಯ ಮುಖ್ಯ ಆವರಣದ ಆರೋಗ್ಯ ಕೇಂದ್ರದಲ್ಲಿ ಸ್ಟಾಫ್ ನರ್ಸ್‌ನ್ನು ತೆಗೆದುಕೊಳ್ಳುವ ಸಂಬಂಧ ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**<u>ತೀರ್ಮಾನ</u>**

ಶ್ರೀಮತಿ ಮಾಯವ್ವ, Diploma in nursing ಇವರ ಮನವಿಯನ್ನು ಗಮನಿಸಿದ ಸಭೆಯು ಆವರಣದಲ್ಲಿನ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿ/ವಿದ್ಯಾರ್ಥಿನಿಯರ ಆರೋಗ್ಯದ ದೃಷ್ಟಿಯಿಂದ ಸದರಿಯವರನ್ನು ವಿಶ್ವವಿದ್ಯಾಲಯ ಮುಖ್ಯ ಆವರಣದ ಆರೋಗ್ಯ ಕೇಂದ್ರದಲ್ಲಿ ಸ್ಟಾಫ್ ನರ್ಸ್ ಆಗಿ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡು ಡಿಇಓ ವೇತನವನ್ನೇ ನಿಗಧಿಪಡಿಸಲು ಸಭೆ ಸರ್ವಾನುಮತದಿಂದ ಒಪ್ಪಿದೆ.

**➲ ಐಟಂ ನಂ. 05:**

ವಿಷಯ: ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷಾ ಕಾರ್ಯಗಳ ಭತ್ಯೆ ಹಾಗೂ ಸಂಭಾವನೆಗಳ ಪರಿಷ್ಕರಣಾ ಸಮಿತಿಯ ಶಿಫಾರಸುಗಳನ್ನು ಮಂಡಿಸುವ ಕುರಿತು.

ಉಲ್ಲೇಖ: ಸಂಖ್ಯೆ:ವಿಶ್ರೀಕೃವಿಬ/ಕು(ಮೌ)/ಸಮಿತಿ/2021-22/846 ದಿನಾಂಕ:21.10.2021

****

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷಾ ಕಾರ್ಯಗಳ ಭತ್ಯೆ ಹಾಗೂ ಸಂಭಾವನೆಗಳಿಗೆ ಸಂಬಂಧಿಸಿದಂತೆ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯ ಶಿಫಾರಸುಗಳನ್ನು ದಿನಾಂಕ:20.07.2022 ರ ಸಿಂಡಿಕೇಟ್ ಸಭೆಯ ನಡಾವಳಿ ಅನ್ವಯ, ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮರು ಮಂಡಿಸಿದೆ.

**<u>ತೀರ್ಮಾನ</u>**

ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷಾ ಕಾರ್ಯಗಳ ಭತ್ಯೆ ಹಾಗೂ ಸಂಭಾವನೆಗಳಿಗೆ ಸಂಬಂಧಿಸಿದ ಸಮಿತಿಯ ಶಿಫಾರಸುಗಳನ್ನು ಪರಿಶೀಲಿಸಿದ ಸಭೆಯು, ಸದರಿ ಸಮಿತಿಯ ಶಿಫಾರಸುಗಳು ಮತ್ತು ಕುಲಸಚಿವರು(ಮೌಲ್ಯಮಾಪನ) ಇವರು ಪ್ರಸ್ತುತಪಡಿಸಿದ ಪ್ರತಿಗಳಲ್ಲಿ ವ್ಯತ್ಯಾಸವಿರುತ್ತದೆ. ಆದ ಕಾರಣ ಸಮಿತಿ ಶಿಫಾರಸಿನ ಪ್ರಮಾಣೀಕೃತ ಪ್ರತಿಯೊಂದಿಗೆ ಪರಿಶೀಲಿಸಿ ಪುನಃ ಈ ವಿಷಯವನ್ನು ಸಮಿತಿ ಶಿಫಾರಸಿನ ಪ್ರಮಾಣೀಕೃತ ಪ್ರತಿಯೊಂದಿಗೆ ಮರುಸಲ್ಲಿಸಲು ಸಭೆ ನಿರ್ದೇಶಿಸಿದೆ.

**➲ ಐಟಂ ನಂ. 06:**

ವಿಷಯ: ಡಾ. ಭೀಮನಗೌಡ, ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಇವರ ಸೇವಾ ಪುಸ್ತಕದ ಕುರಿತು.

ಉಲ್ಲೇಖ:
1. ಕುವೆಂಪು ವಿಶ್ವವಿದ್ಯಾಲಯ ಪತ್ರ ಸಂಖ್ಯೆ: ಕುವಿ:ಮಾಸನಿ-1/994/2015-16 ದಿ. 28.05.2015
2. ಈ ಕಛೇರಿ ಪತ್ರ ಸಂಖ್ಯೆ: ವಿಶ್ರೀಕೃವಿಬ/ಆಡಳಿತ/2015-16/306 ದಿನಾಂಕ: 16.06.2015
3. ಈ ಕಛೇರಿ ಪತ್ರ ಸಂಖ್ಯೆ: ವಿಶ್ರೀಕೃವಿಬ/ಆಡಳಿತ/2016-17/595 ದಿನಾಂಕ: 27.07.2016
4. ಈ ಕಛೇರಿ ಪತ್ರ ಸಂಖ್ಯೆ: ವಿಶ್ರೀಕೃವಿಬ/ಆಡಳಿತ/ಬೋಧಕ-ಸಿಬ್ಬಂದಿ/2019-20/1453(ಅ) ದಿ: 25.10.2019.
5. ಈ ಕಛೇರಿ ಪತ್ರ ಸಂಖ್ಯೆ: ವಿಶ್ರೀಕೃವಿಬ/ಡಿಪಿಎಆರ್/ಬೋಧಕ-ಸಿಬ್ಬಂದಿ/2019-20/1699 ದಿ: 05.12.2019.
6. ಈ ಕಛೇರಿ ಪತ್ರ ಸಂಖ್ಯೆ: ವಿಶ್ರೀಕೃವಿಬ/ಡಿಪಿಎಆರ್/ಬೋಧಕ-ಸಿಬ್ಬಂದಿ/2019-20/2019 ದಿ: 11.01.2020.

7. ಕುವೆಂಪು ವಿಶ್ವವಿದ್ಯಾಲಯದ ಪತ್ರ ಸಂಖ್ಯೆ: ಕುವಿ/ಮಾಸನಿ–1/6653/2019–20 ದಿನಾಂಕ: 05.02.2020.
8. ಡಾ. ಭೀಮನಗೌಡ., ಪ್ರಾಧ್ಯಾಪಕರು, ಇವರ ಮನವಿ ಪತ್ರ ದಿನಾಂಕ: 27.07.2022.

*****

ಡಾ. ಭೀಮನಗೌಡ, ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ. ಇವರು ಹಿಂದೆ ಸೇವೆ ಸಲ್ಲಿಸಿದ ಕುವೆಂಪು ವಿಶ್ವವಿದ್ಯಾಲಯದ ದೃಢೀಕೃತ ಛಾಯಪ್ರತಿ ಸೇವಾ ಪುಸ್ತಕವನ್ನು ಅಂಗೀಕರಿಸಿ, ವಿಶ್ವವಿದ್ಯಾಲಯದಲ್ಲಿ ಸಲ್ಲಿಸಿರುವ ಸೇವಾ ವಿವರಗಳನ್ನು ನಮೂದಿಸುವಂತೆ ಕೋರಿ ಉಲ್ಲೇಖ–08ರಂತೆ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

ಮುಂದುವರೆದು ಡಾ. ಭೀಮನಗೌಡ ಇವರು ವಿಶ್ವವಿದ್ಯಾಲಯದ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸಹ ಪ್ರಾಧ್ಯಾಪಕರಾಗಿ ನೇಮಕಾತಿ ಹೊಂದಿ, ದಿನಾಂಕ: 30.11.2012 ರಂದು ಸೇವೆಗೆ ಸೇರಿರುತ್ತಾರೆ. ಸದರಿಯವರ 2006ರ ಪರಿಷ್ಕೃತ ಯುಜಿಸಿ ವೇತನದ ಬಾಕಿ ಮೊತ್ತವನ್ನು ಸರ್ಕಾರದಿಂದ ಕ್ಲೈಮ್ ಮಾಡಲು ಸೇವಾ ಪುಸ್ತಕವನ್ನು ಕುವೆಂಪು ವಿಶ್ವವಿದ್ಯಾಲಯವು ಉಲ್ಲೇಖ–01ರಂತೆ ಕೋರಿರುವುದಕ್ಕೆ ವಿಶ್ವವಿದ್ಯಾಲಯದಿಂದ ಸದರಿಯವರ ಸೇವಾ ಪುಸ್ತಕವನ್ನು ಉಲ್ಲೇಖ–02ರಂತೆ ಕುವೆಂಪು ವಿಶ್ವವಿದ್ಯಾಲಯಕ್ಕೆ ಮರಳಿಸಲಾಗಿದೆ. ನಂತರ ಉಲ್ಲೇಖ–03,04,05,06 ರಂತೆ ಮೂಲ ಸೇವಾ ಪುಸ್ತಕವನ್ನು ಕಳುಹಿಸುವಂತೆ ನೆನೆಪೋಲೆಯ ಪತ್ರವನ್ನು ಬರೆಯಲಾಗಿದೆ. ಕುವೆಂಪು ವಿಶ್ವವಿದ್ಯಾಲಯವು ಸದರಿಯವರ ಸೇವಾ ಪುಸ್ತಕವು ಲಭ್ಯವಿಲ್ಲದಿರುವುದರಿಂದ ಕರ್ನಾಟಕ ನಾಗರಿಕ ಸೇವಾ ನಿಯಮ 415 ರಂತೆ ವಿಶ್ವವಿದ್ಯಾಲಯಕ್ಕೆ ಸೇವಾ ಪುಸ್ತಕದ ದೃಡೀಕೃತ ಪ್ರತಿಯನ್ನು ಉಲ್ಲೇಖ–07ರಂತೆ ಸಲ್ಲಿಸಿರುತ್ತಾರೆ.

ಕಾರಣ ದೃಢೀಕೃತ ಛಾಯಪ್ರತಿ ಸೇವಾ ಪುಸ್ತಕವನ್ನು ಮುಂದುವರೆಸಿ, ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿದಕ್ಕೆ ಹೊಸದಾಗಿ ಸೇವಾ ಪುಸ್ತಕವನ್ನು ತೆರೆದು ಸೇವೆಯ ವಿವರಗಳನ್ನು ದಾಖಲಿಸುವ ಸಂಬಂಧ ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ತೀರ್ಮಾನಕ್ಕಾಗಿ ಸಲ್ಲಿಸಿದೆ.

**ತೀರ್ಮಾನ**

ಡಾ. ಭೀಮನಗೌಡ, ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಇವರ ಸೇವಾ ಪುಸ್ತಕದ ಸೇವಾ ಕುರಿತಾಗಿ ಎಲ್ಲಾ ಪತ್ರ ವ್ಯವಹಾರಗಳನ್ನು ಅವಲೋಕಿಸಿದ ಸಭೆಯು ದಿನಾಂಕ 05.02.2020 ರಂದು ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ ಇವರು ವಿಶ್ವವಿದ್ಯಾಲಯಕ್ಕೆ ಮೂಲ ಸೇವಾ ಪುಸ್ತಕ ಲಭ್ಯವಿಲ್ಲದ ಕಾರಣ ಕೆ.ಸಿ.ಎಸ್.ಆರ್ 415ರಂತೆ ಸೇವಾ ಪುಸ್ತಕದ ದೃಢೀಕೃತ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಿರುತ್ತಾರೆ. ಆದರೆ ಡಾ. ಭೀಮನಗೌಡ, ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ ಇವರು ದಿನಾಂಕ 27.07.2022 ರಂದು ದೃಢೀಕೃತ ಛಾಯಾಚಿತ್ರದ ಸೇವಾ ಪುಸ್ತಕವನ್ನು ಅಂಗೀಕರಿಸಿ, ಸೇವಾ ವಿವರಗಳನ್ನು ನಮೂದಿಸಲು ಕೋರಿರುತ್ತಾರೆ. ಆದರೆ ಸಭೆಯು ಸದರಿಯವರಿಂದ ದಿನಾಂಕ 05.02.2020 ರಿಂದ 27.07.2022 ಇಲ್ಲಿಯವರೆಗಿನ ವಿಳಂಬತೆ ಕುರಿತಾಗಿ ಸ್ಪಷ್ಟೀಕರಣ ಪತ್ರ ಪಡೆದು ಮುಂಬರುವ ಸಿಂಡಿಕೇಟ್ ಸಭೆಗೆ ಮರುಮಂಡಿಸಲು ಸೂಚಿಸಿದೆ.

## ➲ ಐಟಂ ನಂ. 07

ವಿಷಯ: ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಆಂತರಿಕ ಅಂಕಗಳ ಪರಿಶೀಲನಾ ಸಮಿತಿಯ ವರದಿಯನ್ನು ಮಂಡಿಸುವ ಕುರಿತು.

ಉಲ್ಲೇಖ: ಸಂಖ್ಯೆವಿಶ್ರೀಕೃವಿಬ/ಕು(ಮೌ)/ಸಮಿತಿ/2022–23/420 ದಿನಾಂಕ: 24.05.2022

****

ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಸಲ್ಲಿಕೆಯಲ್ಲಿ ವಿಳಂಬ ಹಾಗೂ ಎರಡು ಬಾರಿ ಸಲ್ಲಿಸಲಾದ ಆಂತರಿಕ ಅಂಕಗಳಲ್ಲಿ ವ್ಯತ್ಯಾಸವಾಗಿರುವ ಹಿನ್ನಲೆಯಲ್ಲಿ ವಿಶ್ವವಿದ್ಯಾಲಯ ಮಟ್ಟದ ಉನ್ನತ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ ಸ್ನಾತಕ ಮತ್ತು ಬಿ.ಇಡಿ ಪದವಿ ವಿದ್ಯಾರ್ಥಿಗಳ ಆಂತರಿಕ ಅಂಕಗಳ ವ್ಯತ್ಯಾಸದ ಕುರಿತು ಪರಿಶೀಲನೆಯ ವಿಚಾರಣಾ ಸಮಿತಿಯ ವರದಿಯನ್ನು ಪರಿಶೀಲಿಸಿ ಚರ್ಚಿಸಿದ ಸಭೆಯು ಈ ಕೆಳಕಂಡಂತೆ ನಿರ್ಣಯಿಸಿದೆ.

- ಶ್ರೀ ಲಕ್ಷ್ಮೀವೆಂಕಟೇಶ್ವರ ಶಿಕ್ಷಣ ಮಹಾವಿದ್ಯಾಲಯ, ಕೂಡ್ಲಿಗಿ ಮಹಾವಿದ್ಯಾಲಯವನ್ನು 2022–23ನೇ ಶೈಕ್ಷಣಿಕ ಸಾಲಿಗೆ No admission Categoryಯಲ್ಲಿಡಲು ಸಭೆ ತೀರ್ಮಾನಿಸಿದೆ. ನಂತರ ಕುಲಸಚಿವರು ಮೌಲ್ಯಮಾಪನ ಇವರಿಂದ ಸದರಿ ಬಿ.ಇಡಿ ಮಹಾವಿದ್ಯಾಲಯ ತೀರ್ಮಾನದ ಕುರಿತು ಸಂಪೂರ್ಣ ವರದಿಯನ್ನು ಕುಲಸಚಿವರು, ಆಡಳಿತ ವಿಭಾಗ ಇವರಿಗೆ ಸಲ್ಲಿಸಿದಲ್ಲಿ ಮುಂದಿನ ಕ್ರಮವಹಿಸಲು ಸಭೆ ಸೂಚಿಸಿದೆ.
- ಇಂಡೋ– ಆಮೆರಿಕನ್ ಡಿಗ್ರಿ ಕಾಲೇಜ್, ಬಳ್ಳಾರಿ ಮಹಾವಿದ್ಯಾಲಯದ ಪರೀಕ್ಷಾ ಕೇಂದ್ರವನ್ನು ರದ್ದುಗೊಳಿಸಲು ಸಭೆ ನಿರ್ಧರಿಸಿ, ಸದರಿ ಪರೀಕ್ಷಾ ಕೇಂದ್ರವನ್ನು ಬೇರೆ ಮಹಾವಿದ್ಯಾಲಯಕ್ಕೆ ನೀಡಲು ತಿಳಿಸಿದೆ.
- ಇನ್ನುಳಿದಂತೆ ಷಾ ಭಾವರಲಾಲ್ ಬಾಬುಲಾಲ್ ನಾಹರ್ ಶಿಕ್ಷಣ ಮಹಾವಿದ್ಯಾಲಯ, ಹೊಸಪೇಟೆ ಮತ್ತು ಟಿ.ಎಂ.ಎ.ಇ ಶಿಕ್ಷಣ ಮಹಾವಿದ್ಯಾಲಯ, ಗಂಗಾವತಿ ಮಹಾವಿದ್ಯಾಲಯಗಳ ಕುರಿತಾಗಿ ಮುಂಬರುವ ಸಿಂಡಿಕೇಟ್ ಸಭೆಯಲ್ಲಿ ಮರುಮಂಡಿಸಲು ತಿಳಿಸಿದೆ.

**ಐಟಂ ನಂ. 08**

ವಿಷಯ: ವಿಶ್ವವಿದ್ಯಾಲಯದ 10ನೇ ವಾರ್ಷಿಕ ಘಟಿಕೋತ್ಸವ ಪ್ರಕ್ರಿಯೆ ಪ್ರಾರಂಭಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

****

ವಿಶ್ವವಿದ್ಯಾಲಯದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳ ಗೌರವ ಡಾಕ್ಟರೇಟ್ ಪದವಿಗಾಗಿ ಸೂಕ್ತ ಸಾಧಕರ ಸ್ವವಿವರ ಪಡೆಯಲು ದಿನಾಂಕವನ್ನು ನಿಗದಿಪಡಿಸುವ ಕುರಿತು ಹಾಗೂ ಹತ್ತನೇ ವಾರ್ಷಿಕ ಘಟಿಕೋತ್ಸವನ್ನು ಆಯೋಜಿಸಲು ತಗಲಬಹುದಾದ ವೆಚ್ಚದ ಪಟ್ಟಿಯನ್ನು ಅನುಮೋದಿಸುವ ಕುರಿತು ಮತ್ತು ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನ ಮಾಡಲಿರುವ ವಿವಿಧ ಪದವಿಗಳ ರ್‍ಯಾಂಕ್‌ಗಳ ಮತ್ತು ಚಿನ್ನದ ಪದಕ ಪಡೆದವರ ಪಟ್ಟಿ, ವಿವಿಧ ಸಮಿತಿಗಳನ್ನು ರಚಿಸುವುದು, ಗಣ್ಯರ ಸ್ವವಿವರಗಳನ್ನು ಪರಿಶೀಲಿಸಲು ತಜ್ಞರ ಪರಿಶೀಲನಾ ಸಮಿತಿಯನ್ನು ರಚಿಸಲು, ಮುಖ್ಯ ಅತಿಥಿಗಳ ನಾಮನಿರ್ದೇಶನ ಮಾಡಲು ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಿದೆ.

<u>**ತೀರ್ಮಾನ**</u>

ಈ ವಿಷಯವಾಗಿ ಸಭೆಯು ಸುದೀರ್ಘವಾಗಿ ಚರ್ಚಿಸಿ ವಿಶ್ವವಿದ್ಯಾಲಯದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದ ಆಯೋಜನೆಗೆ ನವೆಂಬರ್ 03 ರಿಂದ 05 ಅಥವಾ 07 ರಿಂದ 10ರ ದಿನಾಂಕವನ್ನು ಪೂರ್ವಾಭಾವಿಯಾಗಿ ನಿಗಧಿಪಡಿಸಿದೆ. ವಿವಿಧ ಕ್ಷೇತ್ರಗಳ ಗೌರವ ಡಾಕ್ಟರೇಟ್ ಪದವಿಗಾಗಿ ಸೂಕ್ತ ಸಾಧಕರ ಸ್ವವಿವರಗಳನ್ನು ದಿನಾಂಕ 22/09/2022ರೊಳಗಾಗಿ ಸಲ್ಲಿಸಲು ತಿಳಿಸಿದೆ. ವಿವಿಧ ಸಮಿತಿ ರಚನಾ ಕಾರ್ಯ ಮತ್ತು ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನ ಮಾಡಲಿರುವ ವಿವಿಧ ಪದವಿಗಳ ರ್‍ಯಾಂಕ್‌ಗಳು ಮತ್ತು ಚಿನ್ನದ ಪದಕ ಪಡೆದವರ ಪಟ್ಟಿಯನ್ನು ಸಿದ್ಧಪಡಿಸಲು ಅನುಮೋದಿಸಿ, ಒಟ್ಟಾರೆ ಸದರಿ ಘಟಿಕೋತ್ಸವ ಆಯೋಜನೆಗೆ ಆಡಳಿತಾತ್ಮಕವಾಗಿ ಮತ್ತು ಆರ್ಥಿಕವಾಗಿ ಸಭೆ ಅನುಮೋದಿಸಿದೆ.

ಮುಂದುವರೆದು, ಸಭೆಯಲ್ಲಿ ಮುಖ್ಯ ಅತಿಥಿಗಳ ನಾಮನಿರ್ದೇಶನ ಸಂಬಂಧ ಎಲ್ಲಾ ಸದಸ್ಯರು ಶ್ರೀಮತಿ. ಸುಧಾ ಮೂರ್ತಿ, ಇನ್ಫೋಸಿಸ್ ಪ್ರತಿಷ್ಠಾನ ಅಧ್ಯಕ್ಷರು., ಶ್ರೀ. ನಂದನ್ ನಿಲೇಕಣಿ, ಉದ್ಯಮಿ., ಶ್ರೀ. ಅಜಿಮ್ ಪ್ರೇಮ್‌ಜಿ, ವಿಪ್ರೊದ ಅಧ್ಯಕ್ಷರು., ಮತ್ತು ಶ್ರೀ. ರಾಜೀವ್ ಚಂದ್ರಶೇಖರ್, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು, ಡಾ. ಎಂ. ಜಗದೀಶ್ ಕುಮಾರ, ಯುಜಿಸಿ ಅಧ್ಯಕ್ಷರು, ಇವರುಗಳ ಹೆಸರುಗಳನ್ನು ಸಭೆಯಲ್ಲಿ ಸೂಚಿಸಲಾಯಿತು. ಜೊತೆಗೆ ಇವರಗಳನ್ನು ಹೊರತುಪಡಿಸಿ ಯಾವುದೇ ಇತರ ಗಣ್ಯ ವ್ಯಕ್ತಿಗಳನ್ನು ಸಹ ಪರಿಗಣಿಸಲು ಸಭೆಯು ಅನುಮೋದಿಸಿತು.

➲ **ಐಟಂ ನಂ. 09**

ವಿಷಯ: UUCMS ಪರೀಕ್ಷಾ ಮೌಲ್ಯಮಾಪನ ಕಾರ್ಯಕ್ಕೆ ದರವನ್ನು ನಿಗದಿಪಡಿಸುವ ಕುರಿತು.

****

ವಿಶ್ವವಿದ್ಯಾಲಯದ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯ 1ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಪರೀಕ್ಷೆಗಳಿಗೆ ಸಂಬಂಧಿಸಿದ ಕಾರ್ಯಗಳನ್ನು UUCMS ಪರೀಕ್ಷಾ ತಂತ್ರಾಂಶವನ್ನು ಬಳಸಿಕೊಂಡು ಏಪ್ರೀಲ್/ಮೇ–2022 ಹಾಗೂ ಜೂನ್–2022ರಲ್ಲಿ ಪರೀಕ್ಷೆಗಳನ್ನು ಜರುಗಿಸಲಾಗಿದೆ. ಹಾಗೂ ಮುಂಬರುವ 2ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಪರೀಕ್ಷೆಗಳನ್ನು UUCMS ಪರೀಕ್ಷಾ ತಂತ್ರಾಂಶವನ್ನು ಬಳಸಿಕೊಂಡು ಜರುಗಿಸಲಾಗುವುದು. ಆದ್ದರಿಂದ ಸದರಿ ಪರೀಕ್ಷೆಗಳ ಅಂದಾಜು (ವಾರ್ಷಿಕ) 3,00,000 ಉತ್ತರ ಪತ್ರಿಕೆಗಳ ಪರೀಕ್ಷಾ ನಂತರ ಈ ಕೆಳಕಂಡ ಚಟುವಟಿಕೆಗಳನ್ನು ಕೈಗೊಳ್ಳಬೇಕಾಗಿರುತ್ತದೆ.

i. Packets Creation, ii. Printing of coding stickers for Answer booklets, iii. Coding of Answer booklets, iv. Examination mapping, v. Decoding of coded answer booklets vi. Marks entry, vii. Scan & Upload the individual marks list.

ಒಂದು ವರ್ಷಕ್ಕೆ ಅಂದಾಜು ಉತ್ತರ ಪತ್ರಿಕೆಗಳು ಈ ಕೆಳಗಿನಂತಿವೆ.

| **ಕ್ರ.ಸಂ** | **ಪದವಿ** | **ಅಂದಾಜು ಉತ್ತರ ಪತ್ರಿಕೆಗಳು** |
|---|---|---|
| 01 | ಸ್ನಾತಕ | 2,50,000 |
| 02 | ಬಿ.ಇಡಿ | 20,000 |
| 03 | ಸ್ನಾತಕೋತ್ತರ | 30,000 |
| | ಒಟ್ಟು | **3,00,000** |

ಅಂದಾಜು 3,00,000 ಲಕ್ಷ ಉತ್ತರ ಪತ್ರಿಕೆಗಳ ಈ ಮೇಲಿನ ಕಾರ್ಯಗಳನ್ನು ನಿರ್ವಹಿಸಲು Daily wages labours ಇವರಿಗೆ ಪ್ರತಿ ದಿನಕ್ಕೆ ಸರ್ಕಾರದ ನಿಯಮದಂತೆ ವೇತನವನ್ನು ಸಂದಾಯ ಮಾಡಲು ಆಡಳಿತಾತ್ಮಕ & ಆರ್ಥಿಕ ಅನುಮೋದನೆಗಾಗಿ ಸಿಂಡಿಕೇಟ್ ಸಭೆಗೆ ಸಲ್ಲಿಸಿದೆ.

**<u>ತೀರ್ಮಾನ</u>**

ಸದರಿ ವಿಷಯವಾಗಿ Packing ಸಂಬಂಧಿಸಿದಂತೆ ಚರ್ಚಿಸಿದ ಸಭೆಯು ಈ ಕೆಳಗಿನಂತೆ ವೇತನವನ್ನು ನೀಡಲು ತೀರ್ಮಾನಿಸಿದೆ.

- Coding of Answer booklets (20 Scripts) ಕಾರ್ಯಕ್ಕೆ Per Packet/Per person ರೂ.5/– ಸಂದಾಯ ಮಾಡಲು ಸಭೆ ತೀರ್ಮಾನಿಸಿದೆ.
- Decoding ಮತ್ತು UUCMS ಸಂಬಂಧಿಸಿದ ಇನ್ನಿತರ ಕಾರ್ಯಗಳಿಗಾಗಿ ಬಿ.ಸಿ.ಎ/ಬಿ.ಎಸ್ಸಿ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಹತೆ ಹೊಂದಿರುವ 06 ರಿಂದ 10 ಸಂಖ್ಯೆ ಡಿಇಓಗಳನ್ನು ತಾತ್ಕಾಲಿಕವಾಗಿ ರೂ. 15,500/– ಮಾಸಿಕ ವೇತನದನ್ವಯ ಸಂಚಿತ ವೇತನ ಆಧಾರದ ಮೇಲೆ ನೇಮಿಸಲು ಸಭೆ ತೀರ್ಮಾನಿಸಿದೆ.
- ಸದರಿ ನೇಮಕಾತಿಯು ಕುಲಸಚಿವರ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ವಿಭಾಗದಿಂದ ನಡೆಸಲು ನಿರ್ದೇಶಿಸಿ, ಸದರಿಯವರನ್ನು UUCMS ಕಾರ್ಯದ ಜೊತೆಗೆ ಇನ್ನಿತರ ವಿಭಾಗದ ಕಾರ್ಯಗಳಿಗೆ ಕೆಲಸದ ಅವಶ್ಯಕತೆ ಆಧಾರದ ಮೇಲೆ ಬಳಸಿಕೊಳ್ಳಲು ಸಲಹೆ ನೀಡಿದೆ.

➲ **ಐಟಂ ನಂ. 10**

ವಿಷಯ: ಬೋಧಕೇತರ ಹುದ್ದೆಗಳ ರೋಸ್ಟರ್‌ನ್ನು ಅನುಮೋದಿಸುವ ಕುರಿತು.

******

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಕಲ್ಯಾಣ ಕರ್ನಾಟಕ ವೃಂದದ 371(ಜೆ) ರ ಅಡಿಯಲ್ಲಿ ಖಾಲಿ ಇರುವ ವಿವಿಧ ಬೋಧಕೇತರ ಗ್ರೂಪ್–ಎ, ಬಿ ಮತ್ತು ಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ರೋಸ್ಟರ್ ತಯಾರಿಸಲಾಗಿದೆ. ಸದರಿ ನೇಮಕಾತಿ ರೋಸ್ಟರ್‌ನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

### ತೀರ್ಮಾನ

ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಕಲ್ಯಾಣ ಕರ್ನಾಟಕ ವೃಂದದ 371(ಜೆ) ರ ಅಡಿಯಲ್ಲಿ ಖಾಲಿ ಇರುವ ವಿವಿಧ ಬೋಧಕೇತರ ಗ್ರೂಪ್–ಎ, ಬಿ ಮತ್ತು ಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬಳ್ಳಾರಿ ಇವರ ಕಛೇರಿ ಅನುಮೋದನೆ ಸಂಖ್ಯೆ: ಉನಿಸಕಇ/ಬ/ಸಿಬ್ಬಂದಿ/ಬೋಧಕೇತರ 89/ನೇಮಕಾತಿ/2018–19 ದಿನಾಂಕ 23.01.2019ರನ್ವಯ ಅನುಮೋದನೆಗೊಂಡಿರುವ ರೋಸ್ಟರ್ ಹಾಗೂ ಮಾರ್ಪಡಿಸಿ ಸೃಜಿಸಿದ 02 ಕಛೇರಿ ಅಧಿಕ್ಷಕರು, 05 ಪ್ರಥಮ ದರ್ಜೆ ಸಹಾಯಕರು, 05 ದ್ವಿತೀಯ ದರ್ಜೆ ಸಹಾಯಕರ ಹೆಚ್ಚುವರಿ ಹುದ್ದೆಗೆ ರೋಸ್ಟರ್ ಬಿಂದು 100ರಂತೆ ರೋಸ್ಟರ್‌ನ್ನು ಮುಂದುವರೆಸಿ ತಯಾರಿಸಿದ ರೋಸ್ಟರ್‌ನ್ನು ಸಭೆ ಅನುಮೋದಿಸಿದೆ. ಜೊತೆಗೆ ಮುಂದಿನ ಕ್ರಮವಹಿಸಲು ಸಭೆ ಸೂಚಿಸಿದೆ.

### ➲ ಐಟಂ ನಂ. 11

ವಿಷಯ: ವಿಶ್ವವಿದ್ಯಾಲಯದ ಬೋಧಕೇತರ ಹುದ್ದೆಗಳ ಸೃಜನೆಯನ್ನು ಅನುಮೋದಿಸುವ ಕುರಿತು.

ಉಲ್ಲೇಖ: 1. ಸರ್ಕಾರ ಆದೇಶ ಸಂಖ್ಯೆ: ಯುಎನ್‌ಇ 2010 ಬೆಂಗಳೂರು ದಿನಾಂಕ: 16.07.2011

2. ಕಛೇರಿ ಆದೇಶ ಸಂಖ್ಯೆ: ಆಡಳಿತ/ ಹೈ.ಕ/2015–16 ದಿನಾಂಕ: .12.2015

3. ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 02 ಬಿಇಎಂ 2021 ದಿನಾಂಕ: 24.11.2021

*****

ಉಲ್ಲೇಖ–01&02ರನ್ವಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯಕ್ಕೆ ಒಟ್ಟು 137 ಹುದ್ದೆಗಳು ಮಂಜೂರಾಗಿದೆ. ಕಲ್ಯಾಣ– ಕರ್ನಾಟಕದಡಿಯಲ್ಲಿ ಎ–05 ಬಿ–05 ಸಿ–66 ವೃಂದದ ಹುದ್ದೆಗಳು ಮೀಸಲಿರಿಸಲಾಗಿದೆ. ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ, ವಾಹನ ಚಾಲಕರು ಮತ್ತು ಗ್ರೂಪ್ –ಡಿ ವೃಂದದ ಹುದ್ದೆಗಳನ್ನು ಅನುದಾನದ ಲಭ್ಯತೆಗೆ ಒಳಪಟ್ಟು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳತಕ್ಕದ್ದು ಎಂದು ಉಲ್ಲೇಖ–03ರನ್ವಯ ಸುತ್ತೋಲೆ ಹೊರಡಿಸಲಾಗಿದೆ. ಆದ್ದರಿಂದ ಶೀಘ್ರಲಿಪಿಗಾರರ ಮೂಲ ವೇತನ, ಮತ್ತು ಪ್ರಥಮ ದರ್ಜೆ ಸಹಾಯಕರ ಮೂಲ ವೇತನ ಸಮಾನಂತರವಾಗಿರುವುದರಿಂದ 02 ಶೀಘ್ರಲಿಪಿಗಾರರ ಹುದ್ದೆಗಳನ್ನು ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಮಾರ್ಪಡಿಸಿ ಸೃಜಿಸಲು ಹಾಗೂ ಬೆರಳಚ್ಚುಗಾರರ ಮೂಲ ವೇತನ, ವಾಹನ ಚಾಲಕ ಮೂಲ ವೇತನ ಮತ್ತು ದ್ವಿತಿಯ ದರ್ಜೆ ಸಹಾಯಕರ ಮೂಲ ವೇತನ ಸಮಾನಂತರವಾಗಿರುವುದರಿಂದ 04 ಬೆರಳಚ್ಚುಗಾರರ ಹುದ್ದೆಗಳನ್ನು ಮತ್ತು ಒಂದು ವಾಹನ ಚಾಲಕ ಹುದ್ದೆಯನ್ನು ದ್ವಿತಿಯ ದರ್ಜೆ ಸಹಾಯಕ ಹುದ್ದೆಗೆ ಮಾರ್ಪಡಿಸಿ ಸೃಜಿಸಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

### ತೀರ್ಮಾನ

ಸದರಿ ವಿಷಯವಾಗಿ ಪರಿಶೀಲಿಸಿದ ಸಭೆಯು ಈ ಕೆಳಕಂಡಂತೆ ಹುದ್ದೆಗಳನ್ನು ಸೃಜಿಸಲು ಸರ್ವಾನುಮತದಿಂದ ಒಪ್ಪಿ, ಮುಂದಿನ ಕ್ರಮವಹಿಸಲು ಸೂಚಿಸಿದೆ.

- ಶೀಘ್ರಲಿಪಿಗಾರರ ಮೂಲ ವೇತನ ಮತ್ತು ಪ್ರಥಮ ದರ್ಜೆ ಸಹಾಯಕರ ಮೂಲ ವೇತನ ಸಮಾನಂತರವಾಗಿರುವುದರಿಂದ 02 ಶೀಘ್ರಲಿಪಿಗಾರರ ಹುದ್ದೆಗಳನ್ನು ಪ್ರಥಮ ದರ್ಜೆ ಸಹಾಯಕ ಹುದ್ದೆಗೆ ಮಾರ್ಪಡಿಸಿ ಸೃಜಿಸಿದಕ್ಕೆ ಸಭೆ ಒಪ್ಪಿಗೆ ಸೂಚಿಸಿದೆ.
- ಬೆರಳಚ್ಚುಗಾರರ ಮೂಲ ವೇತನ ಮತ್ತು ವಾಹನ ಚಾಲಕರ ಮೂಲ ವೇತನ ಹಾಗೂ ದ್ವಿತಿಯ ದರ್ಜೆ ಸಹಾಯಕರ ಮೂಲ ವೇತನ ಸಮಾನಂತರವಾಗಿರುವುದರಿಂದ 04 ಬೆರಳಚ್ಚುಗಾರರ ಹುದ್ದೆಗಳನ್ನು ಮತ್ತು 01 ವಾಹನ ಚಾಲಕ ಹುದ್ದೆಯನ್ನು ದ್ವಿತಿಯ ದರ್ಜೆ ಸಹಾಯಕ ಹುದ್ದೆಗೆ ಮಾರ್ಪಡಿಸಿ ಸೃಜಿಸಿದಕ್ಕೆ ಸಭೆ ಒಪ್ಪಿಗೆ ಸೂಚಿಸಿದೆ.
- ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಯ ನೇಮಕಾತಿ ಪರಿನಿಯಮಾವಳಿಯಂತೆ ಬಿ ವೃಂದದ ಸಹಾಯಕ ಗ್ರಂಥಪಾಲಕರು ಗ್ರೇಡ್–02, ಕಂಪ್ಯೂಟರ್ ಇಂಜಿನಿಯರ್ ಮತ್ತು ಗ್ರೂಪ್–ಸಿ ವೃಂದದ ಸ್ಟೋರ್

ಕೀಪರ್ ಮತ್ತು ಲ್ಯಾಬ್ ಅಸಿಸ್ಟೆಂಟ್ ಹುದ್ದೆಗಳನ್ನು ಭರ್ತಿಮಾಡಿಕೊಳ್ಳುವ ಉಲ್ಲೇಖವಿರದ ಕಾರಣ ಈ ಕೆಳಕಂಡಂತೆ ಕ್ರಮವಹಿಸಲು ಸಭೆ ಸೂಚಿಸಿದೆ.

1. ಬಿ ವೃಂದದ ಸಹಾಯಕ ಗ್ರಂಥಪಾಲಕರು ಗ್ರೇಡ್–02, ಕಂಪ್ಯೂಟರ್ ಇಂಜಿನಿಯರ್ ಹುದ್ದೆಗಳ ಮೂಲ ವೇತನ ಕಛೇರಿ ಅಧೀಕ್ಷಕರ ಹುದ್ದೆಯ ಮೂಲ ವೇತನ ಸಮಾನಂತರವಾಗಿರುವುದರಿಂದ 01–ಸಹಾಯಕ ಗ್ರಂಥಪಾಲಕರು ಗ್ರೇಡ್–02, 01–ಕಂಪ್ಯೂಟರ್ ಇಂಜಿನಿಯರ್ ಒಟ್ಟು 02 ಸಂಖ್ಯೆ ಹುದ್ದೆಗಳನ್ನು ಕಛೇರಿ ಅಧೀಕ್ಷಕರ ಹುದ್ದೆಗೆ ಮಾರ್ಪಡಿಸಿ ಸೃಜಿಸಿದಕ್ಕೆ ಸಭೆ ಒಪ್ಪಿಗೆ ಸೂಚಿಸಿದೆ.
2. ಗ್ರೂಪ್–ಸಿ ವೃಂದದ ಸ್ಟೋರ್ ಕೀಪರ್ ಮತ್ತು ಲ್ಯಾಬ್ ಅಸಿಸ್ಟೆಂಟ್ ಹುದ್ದೆಗಳ ಮೂಲ ವೇತನ ಪ್ರಥಮ ದರ್ಜೆ ಸಹಾಯಕರ ಮೂಲ ವೇತನ ಸಮಾನಂತರವಾಗಿರುವುದರಿಂದ 01–ಸ್ಟೋರ್ ಕೀಪರ್ ಮತ್ತು 02–ಲ್ಯಾಬ್ ಅಸಿಸ್ಟೆಂಟ್ ಒಟ್ಟು 03 ಸಂಖ್ಯೆ ಹುದ್ದೆಗಳನ್ನು ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಮಾರ್ಪಡಿಸಿ ಸೃಜಿಸಿದಕ್ಕೆ ಸಭೆ ಒಪ್ಪಿಗೆ ಸೂಚಿಸಿದೆ.

### ➲ ಐಟಂ ನಂ. 12

ವಿಷಯ: ಬೋಧಕೇತರ ಹುದ್ದೆಗಳ ನೇರ ನೇಮಕಾತಿ ಕರಡು ಅಧಿಸೂಚನೆಯನ್ನು ಅನುಮೋದಿಸುವ ಕುರಿತು.

******

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಕಲ್ಯಾಣ ಕರ್ನಾಟಕ ವೃಂದದ 371(ಜೆ) ರ ಅಡಿಯಲ್ಲಿ ಖಾಲಿ ಇರುವ ವಿವಿಧ ಬೋಧಕೇತರ ಗ್ರೂಪ್–ಎ, ಬಿ ಮತ್ತು ಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ನೇಮಕಾತಿ ಅಧಿಸೂಚನೆಯನ್ನು ತಯಾರಿಸಲಾಗಿದೆ. ಸದರಿ ನೇಮಕಾತಿ ಅಧಿಸೂಚನೆ ಹೊರಡಿಸಲು ಸಿಂಡಿಕೇಟ್ ಸಭೆ ಅನುಮೋದನೆಗಾಗಿ ಸಲ್ಲಿಸಿದೆ.

**<u>ತೀರ್ಮಾನ</u>**

ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಕಲ್ಯಾಣ ಕರ್ನಾಟಕ ವೃಂದದ 371(ಜೆ)ರ ಅಡಿಯಲ್ಲಿ ಖಾಲಿ ಇರುವ ವಿವಿಧ ಬೋಧಕೇತರ ಗ್ರೂಪ್–ಎ, ಬಿ ಮತ್ತು ಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ತಯಾರಿಸಿದ ಕರಡು ನೇಮಕಾತಿ ಅಧಿಸೂಚನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಚರ್ಚಿಸಿದ ಸಭೆಯು ಅನುಮೋದಿಸಿ ಮುಂದಿನ ಕ್ರಮವಹಿಸಲು ತಿಳಿಸಿದೆ.

### ➲ ಐಟಂ ನಂ. 13

ವಿಷಯ: 28ನೇ ಅಂತರ ರಾಷ್ಟ್ರೀಯ ಸಮ್ಮೇಳನ ಆಯೋಜನೆಗೆ ಆಡಳಿತಾತ್ಮಕ ಮತ್ತು
ಖರ್ಚು ವೆಚ್ಚದ ಅನುಮೋದನೆ ಪಡೆಯುವ ಕುರಿತು.

****

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ಮತ್ತು ಇಂಟರ್ ನ್ಯಾಷನಲ್ ಅಕಾಡೆಮಿ ಆಫ್ ಫಿಜಿಕಲ್ ಸೈನ್ಸ್, ಪ್ರಯಾಗರಾಜ ಇವರ ಸಹಯೋಗದಲ್ಲಿ 28ನೇ ಅಂತರ ರಾಷ್ಟ್ರೀಯ ಸಮ್ಮೇಳನವನ್ನು ಡಿಸೆಂಬರ್–2022ರಲ್ಲಿ ಆಯೋಜನೆಗೆ ಸಿದ್ಧಗೊಳಿಸಲಾಗುತ್ತಿದೆ. ಹೀಗಾಗಿ ಸದರಿ ಸಮ್ಮೇಳನ ಆಯೋಜನೆಗೆ ಆಡಳಿತಾತ್ಮಕ ಮತ್ತು ಆರ್ಥಿಕ ಅನುಮೋದನೆಗಾಗಿ ಸಲ್ಲಿಸಿದೆ.

ಸದರಿ ಸಮ್ಮೇಳನ ಆಯೋಜನೆಗೆ ಒಟ್ಟು ಸುಮಾರು 17,45,000/–ಗಳ ವೆಚ್ಚವಾಗಲಿದ್ದು, ಇದರಲ್ಲಿ ಸುಮಾರು ರೂ. 9,50,000/–ಗಳಷ್ಟು ನೋಂದಣಿಯಿಂದ ಸ್ವೀಕೃತಿಯ ಲಭ್ಯತೆಯನ್ನು ಅಂದಾಜಿಸಲಾಗಿದ್ದು, ಉಳಿದ ಸುಮಾರು ರೂ 7,95,000/–ನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸಬೇಕಾಗಿರುತ್ತದೆ ಹೀಗಾಗಿ ಒಟ್ಟಾರೆ 17,45,000/– ಮೊತ್ತಕ್ಕೆ ಸಿಂಡಿಕೇಟ್ ಸಭೆಯ ಆರ್ಥಿಕ ಅನುಮೋದನೆಗಾಗಿ ಸಲ್ಲಿಸಿದೆ.

ಮುಂದುವರೆದು, ಸದರಿ ಸಮ್ಮೇಳನ ಆಯೋಜನೆಯ CONIAPS ಸಂಘಟನಾ ಕಾರ್ಯದರ್ಶಿಯವರ ಹೆಸರಿನಲ್ಲಿ ಖಾತೆಯನ್ನು ತೆರೆಯಲು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಸದರಿ ವಿಷಯವಾಗಿ ಚರ್ಚಿಸಿದ ಸಭೆಯು ವಿಶ್ವವಿದ್ಯಾಲಯ ಮತ್ತು ಇಂಟರ್ ನ್ಯಾಷನಲ್ ಅಕಾಡೆಮಿ ಆಫ್ ಫಿಜಿಕಲ್ ಸೈನ್ಸ್, ಪ್ರಯಾಗರಾಜ ಇವರ ಸಹಯೋಗದಲ್ಲಿ 28ನೇ ಅಂತರ ರಾಷ್ಟ್ರೀಯ ಸಮ್ಮೇಳನವನ್ನು ಡಿಸೆಂಬರ್–2022ರಲ್ಲಿ ಆಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಸಮ್ಮೇಳನ ಆಯೋಜನೆಗೆ ಒಟ್ಟಾರೆ ಖರ್ಚು ಮತ್ತು ಸ್ವೀಕೃತಿಯನ್ನು ಗಮನಿಸಿ, ಉಳಿದ ಮೊತ್ತ ಆಂತರಿಕ ಸಂಪನ್ಮೂಲದಿಂದ ಭರಿಸಲು ಆರ್ಥಿಕ ಅನುಮೋದನೆ ನೀಡಿದೆ. ಜೊತೆಗೆ ಸದರಿ CONIAPS ಆಯೋಜನೆಯ ಲೆಕ್ಕವಿಡಲು CONVENERರವರ ಹೆಸರಿನಲ್ಲಿ ಪ್ರತ್ಯೇಕ ಖಾತೆಯನ್ನು ತೆರೆಯಲು ಸಭೆಯು ಸೂಚಿಸಿತು.

**➲ ಐಟಂ ನಂ. 14**

ವಿಷಯ : ಡಾ. ಎನ್.ಎಚ್.ಕಲ್ಲೂರ್, ಪ್ರಾಧ್ಯಾಪಕರು, ಇಂಗ್ಲೀಷ್ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಪಿಂಚಣಿ ಯೋಜನೆ ಕುರಿತು.

ಉಲ್ಲೇಖ :
1. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಕಛೇರಿ ಪತ್ರ ಸಂಖ್ಯೆ: ಕವಿವಿ/ಸಿಆಸುವಿ/ಶಿಕ್ಷಕ/4/2016/4318 ದಿನಾಂಕ: 20.10.2016
2. ಈ ಕಛೇರಿ ಪತ್ರ ಸಂಖ್ಯೆ: ವಿಶ್ರೀಕೃವಿಬ/ಆಡಳಿತ/2016–17/1183 ದಿನಾಂಕ: 07.11.2016.
3. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಕಛೇರಿ ಪತ್ರ ಸಂಖ್ಯೆ: ಕವಿವಿ/ಸಿಆಸುವಿ/ಶಿಕ್ಷಕ/4/2020/3000 ದಿನಾಂಕ: 18.09.2020
4. ಈ ಕಛೇರಿ ಪತ್ರ ಸಂಖ್ಯೆ: ವಿಶ್ರೀಕೃವಿಬ/ಆಡಳಿತ/2020–21/1452 ದಿನಾಂಕ: 05.11.2020.
5. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಕಛೇರಿ ಪತ್ರ ಸಂಖ್ಯೆ: ಕವಿವಿ/ಸಿಆಸುವಿ/ಶಿಕ್ಷಕ/4/2020/3867 ದಿನಾಂಕ: 14.12.2020
6. ಈ ಕಛೇರಿ ಪತ್ರ ಸಂಖ್ಯೆ: ವಿಶ್ರೀಕೃವಿಬ/ಆಡಳಿತ/2021–22/701 ದಿನಾಂಕ: 26.07.2021
7. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಕಛೇರಿ ಪತ್ರ ಸಂಖ್ಯೆ: ಕವಿವಿ/ಸಿಆಸುವಿ/ಶಿಕ್ಷಕ/4/2021/1192 ದಿನಾಂಕ: 24.09.2021
8. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಕಛೇರಿ ಪತ್ರ ಸಂಖ್ಯೆ: ಕವಿವಿ/ಸಿಆಸುವಿ/ಶಿಕ್ಷಕ/4/2022/453 ದಿನಾಂಕ: 02.06.2022.

*****

ಡಾ. ಎನ್.ಎಚ್.ಕಲ್ಲೂರ್, ಪ್ರಾಧ್ಯಾಪಕರು, ಇಂಗ್ಲೀಷ್ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯಲ್ಲಿ ದಿನಾಂಕ: 01–02–2013 ರಿಂದ 19–12–2013ರ ವರೆಗೆ ಕಾರ್ಯನಿರ್ವಹಿಸಿದ ಅವಧಿಯಲ್ಲಿನ ಪಿಂಚಣಿ ಯೋಜನೆ ಕುರಿತತಂತೆ 1.04.2006 ಕ್ಕಿಂತ ಪೂರ್ವದಲ್ಲಿ ಜಾರಿಯಲ್ಲಿದ್ದ ಪಿಂಚಣಿ ಯೋಜನೆಯಡಿಯಲ್ಲಿ ಮುಂದುವರೆಸಲಾಗಿದೆಯೇ ಎಂಬುದರ ಬಗ್ಗೆ ಮಾಹಿತಿಯನ್ನು ಸೇವಾ ಪುಸ್ತಕದಲ್ಲಿ ನಮೂದಿಸುವಂತೆ ಕೋರಿ ಉಲ್ಲೇಖ–01 ರಂತೆ ಮನವಿ ಸಲ್ಲಿಸಿರುತ್ತಾರೆ. ಅದರಂತೆ ಸದರಿಯವರು ನೂತನ ಪಿಂಚಣಿ ಯೋಜನೆಯಲ್ಲಿ ಬರುತ್ತಾರೆಂದು ಎಂದು ಉಲ್ಲೇಖ–02 ರಂತೆ ಪತ್ರ ಬರೆಯಲಾಗಿದೆ.

ತದನಂತರ ಉಲ್ಲೇಖ–03 ರ ಪತ್ರದಲ್ಲಿ ಡಾ. ಎನ್.ಎಚ್. ಕಲ್ಲೂರ್ ಇವರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿದ ಅವಧಿಯನ್ನು ನೂತನ ಪಿಂಚಣಿ ಯೋಜನೆ (ಎನ್‌ಪಿಎಸ್) ಅಥವಾ ಹಳೆಯ ಪಿಂಚಣಿ ಯೋಜನೆ (ಓಪಿಎಸ್) ಅಡಿಯಲ್ಲಿ ಪರಿಗಣಿಸಲಾಗಿದೆಯೇ ಎಂಬುದರ ಕುರಿತು ಸ್ಪಷ್ಟ ಮಾಹಿತಿಯನ್ನು ಪೂರಕ ದಾಖಲೆಗಳೊಂದಿಗೆ ನೀಡಲು ಕೋರಿರುತ್ತಾರೆ. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ 01.02.2013 ರಿಂದ 19.12.2013ರ ವರೆಗೆ ಕಾರ್ಯನಿರ್ವಹಿಸಿದ ಅವಧಿಯನ್ನು ಹಳೆಯ ಪಿಂಚಣಿ ಯೋಜನೆಯಲ್ಲಿ ಪರಿಗಣಿಸಿರುವುದರ ಕುರಿತು ಯಾವ ದಾಖಲೆಗಳು ಲಭ್ಯವಿರುದಿಲ್ಲವೆಂದು ಉಲ್ಲೇಖ–04 ರಂತೆ ಪತ್ರ ಬರೆಯಲಾಗಿದೆ.

ಉಲ್ಲೇಖ–05 ರ ಪತ್ರದಲ್ಲಿ ದಿನಾಂಕ: 01–02–2013 ರಿಂದ 19–12–2013ರ ವರೆಗೆ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಸದರಿಯವರನ್ನು ಎನ್.ಪಿ.ಎಸ್ ಅಡಿಯಲ್ಲಿ ಮುಂದುವರೆಸಲಾಗಿದೆಯೇ ಅಥವಾ ಓಪಿಎಸ್ ಅಡಿಯಲ್ಲಿ ಮುಂದುವರೆಸಲಾಗಿದೆಯೇ ಎಂಬುದರ ಕುರಿತು ಸದರಿಯವರ ಮನವಿಯ ಅಂಶಗಳನ್ನು ಮತ್ತೊಮ್ಮೆ ಪರಿಶೀಲಿಸಿ ಸ್ಪಷ್ಟ ಮಾಹಿತಿಯನ್ನು ಕೋರಿರುತ್ತಾರೆ. ಸದರಿಯವರ ಸೇವಾ ಅವಧಿಯಲ್ಲಿ ಪಿಂಚಣಿ ಕುರಿತು ಯಾವುದೇ ಮೊತ್ತವನ್ನು ಕಡಿತಗೊಳಿಸಿರುವುದಿಲ್ಲ ಹಾಗೂ ಪಿಂಚಣಿ ಯೋಜನೆ ಕುರಿತು ತಮ್ಮ ವಿಶ್ವವಿದ್ಯಾಲಯದಲ್ಲಿಯೇ ಸ್ವತಂತ್ರ್ಯವಾಗಿ ನಿರ್ಣಯ ಕೈಗೊಳ್ಳಬಹುದೆಂದು ಉಲ್ಲೇಖ–06 ರಂತೆ ಪತ್ರ ಬರೆಯಲಾಗಿದೆ.

ಮುಂದುವರೆದು, ಉಲ್ಲೇಖ–07 ಮತ್ತು 08ರ ಪತ್ರದಲ್ಲಿ ಡಾ. ಎನ್. ಎಚ್. ಕಲ್ಲೂರ್ ಇವರು ವಿ.ಶ್ರೀ.ಕೃ ವಿಶ್ವವಿದ್ಯಾಲಯದಲ್ಲಿ ದಿನಾಂಕ: 01–02–2013 ರಿಂದ 19–12–2013 ರವರೆಗೆ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಅವಧಿಗೆ ಸಂಬಂಧಿಸಿದ ಪಿಂಚಣಿ ಮೊತ್ತವನ್ನು ವಿಶ್ವವಿದ್ಯಾಲಯಕ್ಕೆ ಭರಣ ಮಾಡುವಂತೆ ಕೋರಿರುತ್ತಾರೆ.

ಈ ಎಲ್ಲಾ ವಿವರವಾದ ಮಾಹಿತಿಯನ್ನು ಸಿಂಡಿಕೇಟ್ ಸಭೆಗೆ ತಿಳಿಯಪಡಿಸುತ್ತಾ, ಡಾ. ಎನ್.ಎಚ್. ಕಲ್ಲೂರ, ಪ್ರಾಧ್ಯಾಪಕರು ಇವರ ದಿನಾಂಕ 01.02.2013 ರಿಂದ 19.12.2013ರ ವರೆಗಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ ಸೇವಾವಧಿಯನ್ನು ಹಳೆಯ ಪಿಂಚಣಿ ಅಥವಾ ನೂತನ ಪಿಂಚಣಿ ಯೋಜನೆಯಲ್ಲಿ ಪರಿಗಣಿಸುವ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

## ತೀರ್ಮಾನ

ಡಾ. ಎನ್.ಎಚ್.ಕಲ್ಲೂರ್, ಪ್ರಾಧ್ಯಾಪಕರು, ಇಂಗ್ಲೀಷ್ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಪಿಂಚಣಿ ಯೋಜನೆ ಕುರಿತಾಗಿ ಕಾರ್ಯಸೂಚಿಯಲ್ಲಿನ ಉಲ್ಲೇಖಿತ ಪತ್ರಗಳ ವಿವರ ಹೀಗಿದೆ.

ದಿನಾಂಕ: 01–02–2013 ರಿಂದ 19–12–2013ರ ವರೆಗೆ ಕಾರ್ಯನಿರ್ವಹಿಸಿದ ಅವಧಿಯಲ್ಲಿನ ಪಿಂಚಣಿ ಯೋಜನೆ ಕುರಿತತಂತೆ 1.04.2006 ಕ್ಕಿಂತ ಪೂರ್ವದಲ್ಲಿ ಜಾರಿಯಲ್ಲಿದ್ದ ಪಿಂಚಣಿ ಯೋಜನೆಯಡಿಯಲ್ಲಿ ಮುಂದುವರೆಸಲಾಗಿದೆಯೇ ಎಂಬುದರ ಬಗ್ಗೆ ಮಾಹಿತಿಯನ್ನು ಸೇವಾ ಪುಸ್ತಕದಲ್ಲಿ ನಮೂದಿಸುವಂತೆ ಕೋರಿ ಉಲ್ಲೇಖ–01 ರಂತೆ ಮನವಿ ಸಲ್ಲಿಸಿರುತ್ತಾರೆ. ಅದರಂತೆ ಸದರಿಯವರು ನೂತನ ಪಿಂಚಣಿ ಯೋಜನೆಯಲ್ಲಿ ಬರುತ್ತಾರೆಂದು ಎಂದು ಉಲ್ಲೇಖ–02 ರಂತೆ ಪತ್ರ ಬರೆಯಲಾಗಿದೆ.

ತದನಂತರ ಉಲ್ಲೇಖ–03 ರ ಪತ್ರದಲ್ಲಿ ಡಾ. ಎನ್.ಎಚ್. ಕಲ್ಲೂರ್ ಇವರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿದ ಅವಧಿಯನ್ನು ನೂತನ ಪಿಂಚಣಿ ಯೋಜನೆ (ಎನ್‌ಪಿಎಸ್) ಅಥವಾ ಹಳೆಯ ಪಿಂಚಣಿ ಯೋಜನೆ (ಓಪಿಎಸ್) ಅಡಿಯಲ್ಲಿ ಪರಿಗಣಿಸಲಾಗಿದೆಯೇ ಎಂಬುದರ ಕುರಿತು ಸ್ಪಷ್ಟ ಮಾಹಿತಿಯನ್ನು ಪೂರಕ ದಾಖಲೆಗಳೊಂದಿಗೆ ನೀಡಲು ಕೋರಿರುತ್ತಾರೆ. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ 01.02.2013 ರಿಂದ 19.12.2013ರ ವರೆಗೆ ಕಾರ್ಯನಿರ್ವಹಿಸಿದ ಅವಧಿಯನ್ನು ಹಳೆಯ ಪಿಂಚಣಿ ಯೋಜನೆಯಲ್ಲಿ ಪರಿಗಣಿಸಿರುವುದರ ಕುರಿತು ಯಾವ ದಾಖಲೆಗಳು ಲಭ್ಯವಿರುದಿಲ್ಲವೆಂದು ಉಲ್ಲೇಖ–04 ರಂತೆ ಪತ್ರ ಬರೆಯಲಾಗಿದೆ.

ಉಲ್ಲೇಖ–05 ರ ಪತ್ರದಲ್ಲಿ ದಿನಾಂಕ: 01–02–2013 ರಿಂದ 19–12–2013ರ ವರೆಗೆ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಸದರಿಯವರನ್ನು ಎನ್.ಪಿ.ಎಸ್ ಅಡಿಯಲ್ಲಿ ಮುಂದುವರೆಸಲಾಗಿದೆಯೇ ಅಥವಾ ಓಪಿಎಸ್ ಅಡಿಯಲ್ಲಿ ಮುಂದುವರೆಸಲಾಗಿದೆಯೇ ಎಂಬುದರ ಕುರಿತು ಸದರಿಯವರ ಮನವಿಯ ಅಂಶಗಳನ್ನು ಮತ್ತೊಮ್ಮೆ ಪರಿಶೀಲಿಸಿ ಸ್ಪಷ್ಟ ಮಾಹಿತಿಯನ್ನು ಕೋರಿರುತ್ತಾರೆ. ಸದರಿಯವರ ಸೇವಾ ಅವಧಿಯಲ್ಲಿ ಪಿಂಚಣಿ ಕುರಿತು ಯಾವುದೇ ಮೊತ್ತವನ್ನು ಕಡಿತಗೊಳಿಸಿರುವುದಿಲ್ಲ ಹಾಗೂ ಪಿಂಚಣಿ ಯೋಜನೆ ಕುರಿತು ತಮ್ಮ ವಿಶ್ವವಿದ್ಯಾಲಯದಲ್ಲಿಯೇ ಸ್ವತಂತ್ರ್ಯವಾಗಿ ನಿರ್ಣಯ ಕೈಗೊಳ್ಳಬಹುದೆಂದು ಉಲ್ಲೇಖ–06 ರಂತೆ ಪತ್ರ ಬರೆಯಲಾಗಿದೆ.

ಮುಂದುವರೆದು, ಉಲ್ಲೇಖ–07 ಮತ್ತು 08ರ ಪತ್ರದಲ್ಲಿ ಡಾ. ಎನ್. ಎಚ್. ಕಲ್ಲೂರ್ ಇವರು ವಿ.ಶ್ರೀ.ಕೃ ವಿಶ್ವವಿದ್ಯಾಲಯದಲ್ಲಿ ದಿನಾಂಕ: 01–02–2013 ರಿಂದ 19–12–2013 ರವರೆಗೆ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಅವಧಿಗೆ ಸಂಬಂಧಿಸಿದ ಪಿಂಚಣಿ ಮೊತ್ತವನ್ನು ವಿಶ್ವವಿದ್ಯಾಲಯಕ್ಕೆ ಭರಣ ಮಾಡುವಂತೆ ಕೋರಿರುತ್ತಾರೆ.

ಈ ಎಲ್ಲಾ ಉಲ್ಲೇಖಿತ ಪತ್ರಗಳನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಮಾನವಿಯತೆ ಅಂಶದ ಮೇರೆಗೆ ಸದರಿಯವರನ್ನು ಹಳೆಯ ಪಿಂಚಣಿ ಅಡಿಯಲ್ಲಿ ಜಾರಿಯಲ್ಲಿರುತ್ತಾರೆಂದು ಸೂಚಿಸಿ ವಿಶ್ವವಿದ್ಯಾಲಯದಿಂದ ಪತ್ರ ಬರೆದು ಕಳುಹಿಸಲು ಸಭೆ ತೀರ್ಮಾನಿಸಿದೆ.

**➲ ಐಟಂ ನಂ. 15**

ವಿಷಯ: ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Clerk/Computer Operator/ Data Entry Operator/Lab Technician) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾವನೆಯನ್ನು ಮರುಮಂಡಿಸುವ ಕುರಿತು.

ಉಲ್ಲೇಖ: 1. ದಿನಾಂಕ 05.05.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನ ಸಂಖ್ಯೆ 10
2. ದಿನಾಂಕ 20.07.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನ ಸಂಖ್ಯೆ 15

******

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Clerk/Computer Operator/ Data Entry Operator/Lab Technician) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ದಿನಾಂಕ: 27.12.2021 ರಂದು ಟೆಂಡರ್ ಅಧಿಸೂಚನೆ ಹೊರಡಿಸಿದ್ದು, ತಾಂತ್ರಿಕ ಬಿಡ್‌ನಲ್ಲಿ 07 ಬಿಡ್‌ದಾರರು ಭಾಗವಹಿಸಿದರೇ, ಇ–ಟೆಂಡರ್ ಸಮಿತಿ ಸಭೆಯಲ್ಲಿ ಟೆಂಡರ್‌ದಾರರ ದಾಖಲೆಗಳನ್ನು ಪರಿಶೀಲಿಸಿದಲ್ಲಿ 06 ಬಿಡ್‌ದಾರರು ಅರ್ಹರಾಗಿರುತ್ತಾರೆ. ನಂತರ ಫೈನಾನ್ಸಿಯಲ್ ಬಿಡ್ ತೆರೆದು ಇ–ಟೆಂಡರ್ ಸಮಿತಿ ಸಭೆಯಲ್ಲಿ ಚರ್ಚಿಸಿ ಟೆಂಡರ್ ನಿಯಮಾನುಸಾರ L-01 ಬಿಡ್‌ದಾರರಿಗೆ ಟೆಂಡರ್ ನೀಡಲು ಇ–ಟೆಂಡರ್ ಸಮಿತಿ ಸಭೆಯು ತೀರ್ಮಾನಿಸಿರುತ್ತದೆ. ಉಲ್ಲೇಖ–01ರನ್ವಯ ಸಿಂಡಿಕೇಟ್ ಸಭೆಯಲ್ಲಿ ಸದ್ಯ ಚಾಲ್ತಿಯಲ್ಲಿರುವ ಟೆಂಡರ್‌ದಾರರಿಗೆ ಮುಂದಿನ ಆದೇಶವರೆಗೆ ಮುಂದುವರೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿದೆ. ಈ ಹಿನ್ನೆಲೆಯಲ್ಲಿ ಸದರಿ ತೀರ್ಮಾನದಂತೆ ಅವರ ಸೇವೆಯನ್ನು ಮುಂದುವರೆಸಿದೆ.

ಜೊತೆಗೆ ಉಲ್ಲೇಖ–02ರಲ್ಲಿ ಸದರಿ ಟೆಂಡರದಾರರು ಹೊರಗುತ್ತಿಗೆ ನೌಕರರ ವೇತನ ಮತ್ತು ಇತರೆ ಉಪಲಬ್ಧಗಳನ್ನು ಸರಿಯಾಗಿ ಪಾವತಿಸುತ್ತಿಲ್ಲ ಎಂದು ತಿಳಿಸಿದರು. ಸದರಿ ವಿಷಯವನ್ನು ಸುದೀರ್ಘವಾಗಿ ಚರ್ಚಿಸಿದ ನಂತರ ಸಭೆಯ ಅಧ್ಯಕ್ಷರು ಈ ಕುರಿತಾಗಿ ವಿಚಾರಣೆ ನಡೆಸಲು ಉನ್ನತ ಮಟ್ಟದ ಸತ್ಯಶೋಧನಾ ಸಮಿತಿಯನ್ನು ರಚಿಸುವುದಾಗಿ ತಿಳಿಸಿದರು. ಸಮಿತಿಯ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ದೇಶನದಂತೆ ಕ್ರಮವಹಿಸಲಾಗುವುದು ಹಾಗೂ ಟೆಂಡರದಾರರು ತಪ್ಪಿತಸ್ಥರೆಂದು ಕಂಡು ಬಂದಲ್ಲಿ ಕಾನೂನು ಮತ್ತು ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

ಮುಂದುವರೆದು, ಟೆಂಡರ್ ನಿಯಮಾವಳಿಯಂತೆ ಸದರಿ L–01 ಟೆಂಡರ್‌ದಾರರಿಗೆ ಟೆಂಡರ್ ಅನುಮೋದನೆಯನ್ನು ನೀಡಲು ಸಭೆಯ ಅನುಮೋದನೆಗೆ ಮಂಡಿಸಿದಾಗ ಸದರಿ ವಿಷಯ ಕುರಿತು ಸುದೀರ್ಘವಾಗಿ ಚರ್ಚೆ ನಡೆಸಿ, L–01 ಟೆಂಡರ್‌ದಾರರಿಗೆ ಟೆಂಡರ್ ನೀಡುವ ಕುರಿತು ಒಮ್ಮತದ ನಿರ್ಣಯಕ್ಕೆ ಬಾರದ ಕಾರಣ, ಸಭೆಯ ಅಧ್ಯಕ್ಷರು ಈ ವಿಷಯ ಕುರಿತು ಪ್ರತಿಯೊಬ್ಬರು ತಮ್ಮ ಅಭಿಪ್ರಾಯ/ವೋಟ್ ಹಾಕಲು ತಿಳಿಸಲಾಗಿ, ಟೆಂಡರ್ ಅನುಮೋದನೆ ಪರವಾಗಿ 7 ಮತ್ತು ವಿರೋಧವಾಗಿ 8 ಮತಗಳು ಬಂದವು. ಹೀಗಾಗಿ ಮತಗಳನ್ವಯ ಸದರಿ L–01 ಟೆಂಡರ್‌ದಾರರಿಗೆ ಟೆಂಡರ್ ಅನುಮೋದನೆ ನೀಡದಿರುವ ನಿರ್ಧಾರಕ್ಕೆ ಬರಲಾಯಿತು.

ನಂತರ ವಿಶ್ವವಿದ್ಯಾಲಯದ ಆಡಳಿತದ ಹಿತದೃಷ್ಟಿಯಿಂದ, ಸದ್ಯ ಚಾಲ್ತಿಯಲ್ಲಿರುವ ಟೆಂಡರದಾರರ ಸೇವೆಯನ್ನು ಮುಂದಿನ ಆದೇಶದವರೆಗೆ ಮುಂದುವರೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ನಂತರ ಸತ್ಯಶೋಧನಾ ಸಮಿತಿ ರಚಿಸಿ ಸದರಿ ವಿಷಯವನ್ನು ಈ ಸಭೆಯಲ್ಲಿ ಮರು ಮಂಡಿಸಿದೆ.

**ತೀರ್ಮಾನ**

ಸತ್ಯಶೋಧನಾ ಸಮಿತಿಯ ರಚನೆ ಅಧಿಸೂಚನೆಯ ಕುರಿತಾಗಿ ಸುದೀರ್ಘವಾಗಿ ಚರ್ಚಿಸಿದ ಸಭೆಯು ಸದರಿ ಸತ್ಯಶೋಧನಾ ಸಮಿತಿಯಲ್ಲಿ ಇನ್ನೋರ್ವ ಸದಸ್ಯರನ್ನು ಸೇರಿಸಿ ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಲು ತಿಳಿಸಿ, ಸಮಿತಿಯು ಮುಂದಿನ ಕಾರ್ಯದಲ್ಲಿ ನಿರತರಾಗಲು ಸಭೆ ಅನುಮೋದಿಸಿತು.

ಜೊತೆಗೆ ಸದ್ಯ ಚಾಲ್ತಿಯಲ್ಲಿರುವ ಟೆಂಡರದಾರರು ಹೊರಗುತ್ತಿಗೆ ನೌಕರರ ವೇತನ ಮತ್ತು ಇತರೆ ಉಪಲಬ್ಧಗಳನ್ನು ಸರಿಯಾಗಿ ಪಾವತಿಸುತ್ತಿಲ್ಲವಾದ ಕುರಿತಾಗಿ ಉಲ್ಲೇಖ–02ರ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾಪಿಸಿದಂತೆ ಹಾಗೂ ಸದರಿ ಟೆಂಡರ್‌ದಾರರು ಮೇಲ್ ನೋಟಕ್ಕೆ ತಪ್ಪಿತಸ್ಥರು ಎಂದು ಕಂಡು ಬಂದ ಹಿನ್ನೆಲೆಯಲ್ಲಿ ಟೆಂಡರ್‌ನ್ನು ನೀಡಲು ಸಭೆಯು ನಿರಾಕರಿಸಿ, ನಂತರದ ಸ್ಥಾನದಲ್ಲಿರುವ L-02 ಬಿಡ್‌ದಾರರಿಗೆ L-01 ಬಿಡ್‌ದಾರರ ಟೆಂಡರ್‌ನ ಒಪ್ಪಿತ ನಿಯಮ ಮತ್ತು ಷರತ್ತುಗಳಿಗೆ ಒಪ್ಪಿದಲ್ಲಿ ಟೆಂಡರ್ ನೀಡಲು ಸಭೆಯು ಸರ್ವಾನುಮತದಿಂದ ಒಪ್ಪಿದೆ. ಹಾಗೂ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವ ವರೆಗೆ ವಿಶ್ವವಿದ್ಯಾಲಯದ ಆಡಳಿತದ ಹಿತದೃಷ್ಟಿಯಿಂದ ಬಿಡ್‌ದಾರರ ಸೇವೆಯನ್ನು ಮುಂದಿನ ಆದೇಶದವರೆಗೆ ಮುಂದುವರೆಸಲು ಸಭೆಯು ನಿರ್ಧರಿಸಿದೆ.

## ➲ ಐಟಂ ನಂ. 16

ವಿಷಯ: ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Attender/Peon/Cleaning of office/ Sweeper/other unskilled & Driver, & Scavenger) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾವನೆಯನ್ನು ಮರು ಮಂಡಿಸುವ ಕುರಿತು.

ಉಲ್ಲೇಖ: 1. ದಿನಾಂಕ 05.05.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನ ಸಂಖ್ಯೆ 11
2. ದಿನಾಂಕ 20.07.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನ ಸಂಖ್ಯೆ 16

******

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿ, ಕೊಪ್ಪಳ, ಯಲಬುರ್ಗಾಕ್ಕೆ ಆಡಳಿತ ಕೆಲಸಗಳಿಗೆ ಅಗತ್ಯವಾದ (Attender/Peon/Cleaning of office/ Sweeper/other unskilled & Driver, & Scavenger) ಮಾನವ ಶಕ್ತಿಗಳನ್ನು ಒದಗಿಸುವ ಸಂಬಂಧ ದಿನಾಂಕ: 27.12.2021 ರಂದು ಟೆಂಡರ್ ಅಧಿಸೂಚನೆ ಹೊರಡಿಸಿದ್ದು, ತಾಂತ್ರಿಕ ಬಿಡ್‌ನಲ್ಲಿ 06 ಬಿಡ್‌ದಾರರು ಭಾಗವಹಿಸಿದರೇ, ತಾಂತ್ರಿಕ ಬಿಡ್‌ಗೆ ಸಂಬಂಧಿಸಿದ ಇ-ಟೆಂಡರ್ ಸಮಿತಿ ಸಭೆಯಲ್ಲಿ ಟೆಂಡರ್‌ದಾರರ ದಾಖಲೆಗಳನ್ನು ಪರಿಶೀಲಿಸಲಾಗಿ 05 ಬಿಡ್‌ದಾರರು ಅರ್ಹರಾಗಿರುತ್ತಾರೆ. ಫೈನಾನ್ಸಿಯಲ್ ಬಿಡ್ ತೆರೆದು ಇ–ಟೆಂಡರ್ ಸಮಿತಿ ಸಭೆಯಲ್ಲಿ ಚರ್ಚಿಸಿ ಟೆಂಡರ್ ನಿಯಮಾನುಸಾರ L-01 ಬಿಡ್‌ದಾರರಿಗೆ ಟೆಂಡರ್ ನೀಡಲು ಇ–ಟೆಂಡರ್ ಸಮಿತಿ ಸಭೆಯು ತೀರ್ಮಾನಿಸಿರುತ್ತದೆ. ಉಲ್ಲೇಖ–01ರನ್ವಯ ಸಿಂಡಿಕೇಟ್ ಸಭೆಯಲ್ಲಿ ಸದ್ಯ ಚಾಲ್ತಿಯಲ್ಲಿರುವ ಟೆಂಡರ್‌ದಾರರಿಗೆ ಮುಂದಿನ ಆದೇಶವರೆಗೆ ಮುಂದುವರೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿದೆ. ಈ ಹಿನ್ನೆಲೆಯಲ್ಲಿ ಸದರಿ ತೀರ್ಮಾನದಂತೆ ಅವರ ಸೇವೆಯನ್ನು ಮುಂದುವರೆಸಿದೆ.

ಜೊತೆಗೆ ಉಲ್ಲೇಖ–02ರಲ್ಲಿ ಸದರಿ ಟೆಂಡರದಾರರು ಹೊರಗುತ್ತಿಗೆ ನೌಕರರ ವೇತನ ಮತ್ತು ಇತರೆ ಉಪಲಬ್ಧಗಳನ್ನು ಸರಿಯಾಗಿ ಪಾವತಿಸುತ್ತಿಲ್ಲ ಎಂದು ತಿಳಿಸಿದರು. ಸದರಿ ವಿಷಯವನ್ನು ಸುದೀರ್ಘವಾಗಿ ಚರ್ಚಿಸಿದ ನಂತರ ಸಭೆಯ ಅಧ್ಯಕ್ಷರು ಈ ಕುರಿತಾಗಿ ವಿಚಾರಣೆ ನಡೆಸಲು ಉನ್ನತ ಮಟ್ಟದ ಸತ್ಯಶೋಧನಾ ಸಮಿತಿಯನ್ನು ರಚಿಸುವುದಾಗಿ ತಿಳಿಸಿದರು. ಸಮಿತಿಯ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ದೇಶನದಂತೆ ಕ್ರಮವಹಿಸಲಾಗುವುದು ಹಾಗೂ ಟೆಂಡರದಾರರು ತಪ್ಪಿತಸ್ಥರೆಂದು ಕಂಡು ಬಂದಲ್ಲಿ ಕಾನೂನು ಮತ್ತು ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

ಮುಂದುವರೆದು, ಟೆಂಡರ್ ನಿಯಮಾವಳಿಯಂತೆ ಸದರಿ L–01 ಟೆಂಡರ್‌ದಾರರಿಗೆ ಟೆಂಡರ್ ಅನುಮೋದನೆಯನ್ನು ನೀಡಲು ಸಭೆಯ ಅನುಮೋದನೆಗೆ ಮಂಡಿಸಿದಾಗ ಸದರಿ ವಿಷಯ ಕುರಿತು ಸುದೀರ್ಘವಾಗಿ

ಚರ್ಚೆ ನಡೆಸಿ, L–01 ಟೆಂಡರ್‌ದಾರರಿಗೆ ಟೆಂಡರ್ ನೀಡುವ ಕುರಿತು ಒಮ್ಮತದ ನಿರ್ಣಯಕ್ಕೆ ಬಾರದ ಕಾರಣ, ಸಭೆಯ ಅಧ್ಯಕ್ಷರು ಈ ವಿಷಯ ಕುರಿತು ಪ್ರತಿಯೊಬ್ಬರು ತಮ್ಮ ಅಭಿಪ್ರಾಯ/ವೋಟ್ ಹಾಕಲು ತಿಳಿಸಲಾಗಿ, ಟೆಂಡರ್ ಅನುಮೋದನೆ ಪರವಾಗಿ 7 ಮತ್ತು ವಿರೋಧವಾಗಿ 8 ಮತಗಳು ಬಂದವು. ಹೀಗಾಗಿ ಮತಗಳನ್ವಯ ಸದರಿ L–01 ಟೆಂಡರ್‌ದಾರರಿಗೆ ಟೆಂಡರ್ ಅನುಮೋದನೆ ನೀಡದಿರುವ ನಿರ್ಧಾರಕ್ಕೆ ಬರಲಾಯಿತು.

ನಂತರ ವಿಶ್ವವಿದ್ಯಾಲಯದ ಆಡಳಿತದ ಹಿತದೃಷ್ಟಿಯಿಂದ, ಸದ್ಯ ಚಾಲ್ತಿಯಲ್ಲಿರುವ ಟೆಂಡರದಾರರ ಸೇವೆಯನ್ನು ಮುಂದಿನ ಆದೇಶದವರೆಗೆ ಮುಂದುವರೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ನಂತರ ಸತ್ಯಶೋಧನಾ ಸಮಿತಿ ರಚಿಸಿ ಸದರಿ ವಿಷಯವನ್ನು ಈ ಸಭೆಯಲ್ಲಿ ಮರು ಮಂಡಿಸಿದೆ.

**ತೀರ್ಮಾನ**

ಸತ್ಯಶೋಧನಾ ಸಮಿತಿಯ ರಚನೆ ಅಧಿಸೂಚನೆಯ ಕುರಿತಾಗಿ ಸುದೀರ್ಘವಾಗಿ ಚರ್ಚಿಸಿದ ಸಭೆಯು ಸದರಿ ಸತ್ಯಶೋಧನಾ ಸಮಿತಿಯಲ್ಲಿ ಇನ್ನೋರ್ವ ಸದಸ್ಯರನ್ನು ಸೇರಿಸಿ ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಲು ತಿಳಿಸಿ, ಸಮಿತಿಯು ಮುಂದಿನ ಕಾರ್ಯದಲ್ಲಿ ನಿರತರಾಗಲು ಸಭೆ ಅನುಮೋದಿಸಿತು.

ಜೊತೆಗೆ ಸದ್ಯ ಚಾಲ್ತಿಯಲ್ಲಿರುವ ಟೆಂಡರದಾರರು ಹೊರಗುತ್ತಿಗೆ ನೌಕರರ ವೇತನ ಮತ್ತು ಇತರೆ ಉಪಲಬ್ಧಗಳನ್ನು ಸರಿಯಾಗಿ ಪಾವತಿಸುತ್ತಿಲ್ಲವಾದ ಕುರಿತಾಗಿ ಉಲ್ಲೇಖ–02ರ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾಪಿಸಿದಂತೆ ಹಾಗೂ ಸದರಿ ಟೆಂಡರ್‌ದಾರರು ಮೇಲ್ ನೋಟಕ್ಕೆ ತಪ್ಪಿತಸ್ಥರು ಎಂದು ಕಂಡು ಬಂದ ಹಿನ್ನೆಲೆಯಲ್ಲಿ ಟೆಂಡರ್‌ನ್ನು ನೀಡಲು ಸಭೆಯು ನಿರಾಕರಿಸಿ, ನಂತರದ ಸ್ಥಾನದಲ್ಲಿರುವ L-02 ಬಿಡ್‌ದಾರರಿಗೆ L-01 ಬಿಡ್‌ದಾರರ ಟೆಂಡರ್‌ನ ಒಪ್ಪಿತ ನಿಯಮ ಮತ್ತು ಷರತ್ತುಗಳಿಗೆ ಒಪ್ಪಿದಲ್ಲಿ ಟೆಂಡರ್ ನೀಡಲು ಸಭೆಯು ಸರ್ವಾನುಮತದಿಂದ ಒಪ್ಪಿದೆ. ಹಾಗೂ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವ ವರೆಗೆ ವಿಶ್ವವಿದ್ಯಾಲಯದ ಆಡಳಿತದ ಹಿತದೃಷ್ಟಿಯಿಂದ ಬಿಡ್‌ದಾರರ ಸೇವೆಯನ್ನು ಮುಂದಿನ ಆದೇಶದವರೆಗೆ ಮುಂದುವರೆಸಲು ಸಭೆಯು ನಿರ್ಧರಿಸಿದೆ.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು

1. ಡಾ. ಬಸವರಾಜ ವಿ ಪೂಜಾರ್, ಸನ್ಮಾನ್ಯ ಸಿಂಡಿಕೇಟ್ ಸದಸ್ಯರು ಪ್ರಶ್ನೆ ಪತ್ರಿಕೆಗಳಲ್ಲಿ ಆದ ನ್ಯೂನ್ಯತೆಗಳ ಬಗ್ಗೆ ಪ್ರಸ್ತಾಪಿಸಿ ಐದು ಪ್ರಶ್ನೆಪತ್ರಿಕೆಗಳನ್ನು ತೋರಿಸಿ ಅದರಲ್ಲಿನ ನ್ಯೂನ್ಯತೆಗಳನ್ನು ಸಭೆಯ ಗಮನಕ್ಕೆ ತಂದನಂತರ ಈ ಕೆಳಕಂಡಂತೆ ಸಭೆ ನಿರ್ದೇಶಿಸಿದೆ.

- ಈ ಕುರಿತಾಗಿ ಕುಲಸಚಿವರು (ಮೌಲ್ಯಮಾಪನ) ಇವರಿಗೆ ಪೂರ್ಣ ವಿವರಣೆಯನ್ನು ಮತ್ತು ಈ ಸಮಸ್ಯೆಗೆ ಪರಿಹಾರ ಹೇಗೆ ಎಂಬುದನ್ನು ಸ್ಪಷ್ಟೀಕರಣ ನೀಡುವಂತೆ ಸಭೆ ಕೋರಿದೆ.
- ಕುಲಸಚಿವರು (ಮೌಲ್ಯಮಾಪನ) ಇವರಿಗೆ ಸದರಿ ಪ್ರಶ್ನೆ ಪತ್ರಿಕೆಗಳ ಮೌಲ್ಯಮಾಪನ ಸಮಯಕ್ಕೂ ಮೊದಲು ಈ ಕುರಿತಾಗಿ ತೆಗೆದುಕೊಂಡ ಕ್ರಮಗಳ ವಿವರವಾದ ವರದಿಯನ್ನು ಹಾಗೂ ಸದರಿ ಬಿಓಇಗಳು ತೆಗೆದುಕೊಳ್ಳುವ ಕ್ರಮಗಳು ಮತ್ತು ಶಿಫಾರಸುಗಳನ್ನು ಸಹ ತೆಗೆದುಕೊಂಡು ಸಭೆಗೆ ಸಲ್ಲಿಸಲು ಸಭೆ ನಿರ್ದೇಶಿಸಿದೆ. ಜೊತೆಗೆ ಈ ಎಲ್ಲಾ ಕಾರ್ಯಗಳನ್ನು ಮಾನ್ಯ ಕುಲಪತಿಗಳ ಗಮನಕ್ಕೆ ತಂದು ಮೌಲ್ಯಮಾಪನ ಕಾರ್ಯ ಪ್ರಾರಂಭಿಸಲು ಸೂಚಿಸಿದೆ.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105

ಕುಲಸಚಿವರು

ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2022–23/**1552** ದಿನಾಂಕ: 31.10.2022

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ. 22.09.2022 ರಂದು ಬೆಳಿಗ್ಗೆ 11:00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 26.09.2022.

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ. 22.09.2022 ರಂದು ಬೆಳಿಗ್ಗೆ 11:00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 22.09.2022 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿ

**➲ ಐಟಂ ನಂ. 01:**

ವಿಷಯ: ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಆದ್ಯತೆಯನ್ನು ನೀಡುವ ಕುರಿತು.

****

ದಿನಾಂಕ 12.09.2022 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಕಲ್ಯಾಣ ಕರ್ನಾಟಕ ವೃಂದದ 371(ಜೆ) ರ ಅಡಿಯಲ್ಲಿ ಖಾಲಿ ಇರುವ ವಿವಿಧ ಬೋಧಕೇತರ ಗ್ರೂಪ್–ಎ, ಬಿ ಮತ್ತು ಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಕರಡು ನೇಮಕಾತಿ ಅಧಿಸೂಚನೆಯನ್ನು ಅನುಮೋದಿಸಿದ್ದು, ಸದರಿ ಅಧಿಸೂಚನೆಯಲ್ಲಿನ ಸಾಮಾನ್ಯ ಮಾಹಿತಿ ಮತ್ತು ಸೂಚನೆಗಳಲ್ಲಿನ ಕ್ರಮ ಸಂಖ್ಯೆ 12ರ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಆದ್ಯತೆಯನ್ನು ನೀಡುವ ಕುರಿತಾಗಿ ಮಾನದಂಡಗಳ ಚರ್ಚೆ ಮತ್ತು ತೀರ್ಮಾನಕ್ಕಾಗಿ ಸಿಂಡಿಕೇಟ್ ಸಭೆಗೆ ಸದರಿ ವಿಷಯವನ್ನು ಮಂಡಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ ಕಲ್ಯಾಣ ಕರ್ನಾಟಕ ವೃಂದದ 371(ಜೆ) ರ ಅಡಿಯಲ್ಲಿ ಖಾಲಿ ಇರುವ ವಿವಿಧ ಬೋಧಕೇತರ ನೇಮಕಾತಿ ಕರಡು ಅಧಿಸೂಚನೆಯಲ್ಲಿನ ಸಾಮಾನ್ಯ ಮಾಹಿತಿ ಮತ್ತು ಸೂಚನೆಗಳಲ್ಲಿನ ಕ್ರಮ ಸಂಖ್ಯೆ 12ರ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಆದ್ಯತೆಯನ್ನು ನೀಡುವ ಕುರಿತಾಗಿ ಮಾನದಂಡಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು ವಿಶ್ವವಿದ್ಯಾಲಯದಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಆದ್ಯತೆಯನ್ನು ನೀಡಲು ಈ ಕೆಳಗಿನಂತೆ ಅನುಮೋದಿಸಿದೆ.

- ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳ ಸೇವಾ ಅವಧಿ ವಿವರವನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಆಕ್ಷೇಪಣೆಗಳಿಗಾಗಿ ಪ್ರಕಟಿಸಿ, ನಂತರ ಆಕ್ಷೇಪಣಾ ಅವಧಿ ಮುಗಿದ ನಂತರ ಅನುಮೋದಿತ ಪಟ್ಟಿಯಂತೆ, ವಿಶ್ವವಿದ್ಯಾಲಯದಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಾಸಾದವರಿಗೆ ಮಾತ್ರ ವಿಶ್ವವಿದ್ಯಾಲಯದ ದಾಖಲೆಗಳಂತೆ ಸೇವಾ ಅವಧಿಯನ್ನು ಪರಿಗಣಿಸಿ ಪ್ರತಿ ಎರಡು ವರ್ಷಗಳಿಗೆ (24 ತಿಂಗಳು) ಪ್ರಮಾಣಾನುಗುಣವಾದ (Proportional) 0.5 ಅಂಕಗಳಂತೆ ಗರಿಷ್ಠ 2.5 ವರೆಗಿನ ಅಂಕಗಳನ್ನು ಮಾತ್ರ ನೀಡಲು ಸಭೆ ಒಪ್ಪಿದೆ. (ವರ್ಷವಾರು ನಿಗದಿತ 2.5 ಕ್ಕಿಂತ ಹೆಚ್ಚಿನ ಅಂಕಗಳಿಸುವ ಸೇವಾವಧಿಯನ್ನು ಹೊಂದಿದಲ್ಲಿಯೂ ಗರಿಷ್ಠ 2.5 ಅಂಕ ನೀಡಲು ಸಭೆ ತೀರ್ಮಾನಿಸಿದೆ.)

➲ **ಐಟಂ ನಂ. 02:**

ವಿಷಯ: ವಿಶ್ವವಿದ್ಯಾಲಯದ ಬೋಧಕೇತರ ಹುದ್ದೆಗಳ ವೃಂದ ಮತ್ತು ನೇಮಕಾತಿ ಪರಿನಿಯಮಾವಳಿ ಕುರಿತು.

***

ಸರ್ಕಾರದ ಪತ್ರದ ದಿನಾಂಕ:02.04.2018ರಂತೆ ವಿಶ್ವವಿದ್ಯಾಲಯದ ಬೋಧಕೇತರ ಹುದ್ದೆಗಳ ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಯಲ್ಲಿ ಗ್ರೂಪ್–ಸಿ ವೃಂದದ ಡ್ರಾಫ್ಟ್‌ಮೆನ್–01, ಸಿನಿಯರ್ ವರ್ಕ್ ಇನ್ಸ್‌ಪೆಕ್ಟರ್–02, ಕಿರಿಯ ಅಭಿಯಂತರರು–01 ಹುದ್ದೆಗಳಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಲಭ್ಯವಿರದ ಕಾರಣ ಸದರಿ 04 ಹುದ್ದೆಗಳ ಕುರಿತಾಗಿ ಚರ್ಚೆ ಮತ್ತು ತೀರ್ಮಾನಕ್ಕಾಗಿ ಸಿಂಡಿಕೇಟ್ ಸಭೆಗೆ ಸಲ್ಲಿಸಿದೆ.

**<u>ತೀರ್ಮಾನ</u>**

ಸದರಿ ವಿಷಯವಾಗಿ ವಿಶ್ವವಿದ್ಯಾಲಯದ ಬೋಧಕೇತರ ಹುದ್ದೆಗಳ ವೃಂದ ಮತ್ತು ನೇಮಕಾತಿ ಪರಿನಿಯಮಾವಳಿಯ ಮಾಹಿತಿಯಂತೆ ಗ್ರೂಪ್–ಸಿ ವೃಂದದ ಡ್ರಾಫ್ಟ್‌ಮೆನ್–01, ಸಿನಿಯರ್ ವರ್ಕ್ ಇನ್ಸ್‌ಪೆಕ್ಟರ್–02, ಕಿರಿಯ ಅಭಿಯಂತರರು–01 ಹುದ್ದೆಗಳಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಲಭ್ಯವಿರದ ಕಾರಣ ಸದರಿ 04 ಹುದ್ದೆಗಳ ಕುರಿತಾಗಿ ಸುದೀರ್ಘ ಚರ್ಚೆ ನಡೆಸಿ, ಈ ಕುರಿತಾಗಿ ನೇಮಕಾತಿ ನಿಯಮಾವಳಿಯನ್ನು ತಿದ್ದುಪಡಿಗೊಳಿಸಿ ಸರ್ಕಾರದ ಅನುಮೋದನೆಯನ್ನು ಪಡೆದು ಸದರಿ ಹುದ್ದೆಗಳಿಗೆ ನೇಮಕಾತಿ ನಡೆಸಲು ಸಭೆ ನಿರ್ದೇಶಿಸಿದೆ.

➲ **ಐಟಂ ನಂ. 03:**

ವಿಷಯ: ಸರ್ಕಾರದ ಆದೇಶ/ಅಧಿಸೂಚನೆ/ಸುತ್ತೋಲೆ/ವಿಶ್ವವಿದ್ಯಾಲಯದ ಪರಿನಿಯಮಾವಳಿಯನ್ವಯ ಪ್ರಸ್ತುತ ನೇಮಕಾತಿ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳುವ ಕುರಿತು.

***

ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಯ ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 43 ಸೇವನೆ 2020 ದಿನಾಂಕ: 05.03.2021ರನ್ವಯ ಎ ಮತ್ತು ಬಿ ವೃಂದದ ಹುದ್ದೆಗಳಿಗೆ ಸ್ಪರ್ಧಾತ್ಮಕ/ಅರ್ಹತಾ ಪರೀಕ್ಷೆ ಮತ್ತು ಸಂದರ್ಶನ ಕಡ್ಡಾಯವಾಗಿರುತ್ತದೆ. ಮತ್ತು ಸಿ ವೃಂದದ ಹುದ್ದೆಗಳಿಗೆ ಸ್ಪರ್ಧಾತ್ಮಕ/ಅರ್ಹತಾ ಪರೀಕ್ಷೆ ಹಾಗೂ Government Notification No.DPAR 43 SCR 2008 Dated: 07.03.2012ರನ್ವಯ ಕಂಪ್ಯೂಟರ್ ಲಿಟ್ರಸಿ ಪರೀಕ್ಷೆಗಳ ಮೂಲಕ ಭರ್ತಿ ಮಾಡಿಕೊಳ್ಳಲು ಸೂಚಿಸಿದ ಕಾರಣ, ಸರ್ಕಾರದ ಆದೇಶ/ಅಧಿಸೂಚನೆ/ಸುತ್ತೋಲೆ/ವಿಶ್ವವಿದ್ಯಾಲಯದ ಪರಿನಿಯಮಾವಳಿಯನ್ವಯ ಪ್ರಸ್ತುತ ನೇಮಕಾತಿ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳುವ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**<u>ತೀರ್ಮಾನ</u>**

ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿಯ ನೇಮಕಾತಿಗೆ ಸಂಬಂಧಿಸಿದಂತೆ ಉಲ್ಲೇಖಿತ ಸರ್ಕಾರಿ ಅಧಿಸೂಚನೆಗಳು ಮತ್ತು ಪರಿನಿಯಮಾವಳಿ ಗಮನಿಸಿದ ಸಭೆಯು ಈ ಕುರಿತು ಸುದೀರ್ಘವಾಗಿ ಚರ್ಚಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 43 ಸೇವನೆ 2020 ದಿನಾಂಕ: 05.03.2021ರಂತೆ ಎ ಮತ್ತು ಬಿ ವೃಂದದ ಹುದ್ದೆಗಳಿಗೆ ಸ್ಪರ್ಧಾತ್ಮಕ/ಅರ್ಹತಾ ಪರೀಕ್ಷೆ ಮತ್ತು ಸಂದರ್ಶನ ಕಡ್ಡಾಯವಾಗಿರುವಂತೆ ಮತ್ತು Government Notification No.DPAR 43 SCR 2008 Dated: 07.03.2012 ರಂತೆ ಸಿ ವೃಂದದ ಹುದ್ದೆಗಳಿಗೆ ಸ್ಪರ್ಧಾತ್ಮಕ/ಅರ್ಹತಾ ಪರೀಕ್ಷೆ ಮತ್ತು ಕಂಪ್ಯೂಟರ್ ಲಿಟ್ರಸಿ ಪರೀಕ್ಷೆಗಳ ಮೂಲಕ ಭರ್ತಿ ಮಾಡಿಕೊಳ್ಳಲು ಸೂಚಿಸಿದೆ. ಜೊತೆಗೆ ಸರ್ಕಾರದ ಆದೇಶ/ಅಧಿಸೂಚನೆ/ಸುತ್ತೋಲೆ/ವಿಶ್ವವಿದ್ಯಾಲಯದ ಪರಿನಿಯಮಾವಳಿಯನ್ವಯ ಪ್ರಸ್ತುತ ನೇಮಕಾತಿ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳಲು ಸಭೆ ಸರ್ವಾನುಮತದಿಂದ ತೀರ್ಮಾನಿಸಿದೆ.

ಮುಂದುವರೆದು, ಎ ಬಿ ಮತ್ತು ಸಿ ವೃಂದದ ಹುದ್ದೆಗಳ ಅರ್ಹತೆಗಾಗಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿನ ಒಟ್ಟು 100 ಅಂಕಗಳಲ್ಲಿ ಕನಿಷ್ಠ ಪಕ್ಷ 40% (ಶೇಕಡಾ ನಲವತ್ತರಷ್ಟು) ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1

ರ ಅಭ್ಯರ್ಥಿಗಳು 35% (ಶೇಕಡಾ ಮೂವತ್ತೈದರಷ್ಟು) ಅಂಕಗಳನ್ನು ಗಳಿಸುವುದು ಕಡ್ಡಾಯವಾಗಿರುತ್ತದೆ. ಸಿ ವೃಂದದ ಹುದ್ದೆಗಳಿಗೆ ಸ್ಪರ್ಧಾತ್ಮಕ/ಅರ್ಹತಾ ಪರೀಕ್ಷೆ ನಡೆಸಿದ ಒಟ್ಟು ಅಂಕಗಳಿಗೆ ಪ್ರತಿಶತಃ 12.5% ಅಂಕಗಳಿಗೆ ಕಂಪ್ಯೂಟರ್ ಲಿಟ್ರಸಿ ಪರೀಕ್ಷೆಯನ್ನು ಕಡ್ಡಾಯಗೊಳಿಸಿ, ಎ ಮತ್ತು ಬಿ ವೃಂದದ ಹುದ್ದೆಗಳಿಗೆ ಸಹ ಸ್ಪರ್ಧಾತ್ಮಕ/ಅರ್ಹತಾ ಪರೀಕ್ಷೆ ನಡೆಸಿದ ಒಟ್ಟು ಅಂಕಗಳಿಗೆ ಪ್ರತಿಶತಃ 12.5% ಅಂಕಗಳ ಸಂದರ್ಶನ ಕಡ್ಡಾಯಗೊಳಿಸಲು ಸಭೆ ನಿರ್ಧರಿಸಿದೆ.

**➲ ಐಟಂ ನಂ. 04:**

ವಿಷಯ: ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ
ಅನುಮೋದಿಸುವ ಕುರಿತು.

***

ದಿನಾಂಕ 07.09.2022 ರಂದು ಕಟ್ಟಡ ಸಲಹಾ ಸಮಿತಿ ಸಭೆಯು ಜರುಗಿದ್ದು, ಈ ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ದಿನಾಂಕ 07.09.2022 ರಂದು ಜರುಗಿದ ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಈ ಕೆಳಕಂಡಂತೆ ವಿಷಯವಾರು ದೃಢೀಕರಿಸಿ ಅನುಮೋದಿಸಿದೆ.

**➲ ಐಟಂ ನಂ. 01:**

ವಿಷಯ:–ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿನ ಸೈನ್ಸ್ ಫಾಕಲ್ಟಿ ಕಟ್ಟಡದ ಕೆಮಿಸ್ಟ್ರಿ ವಿಭಾಗದಲ್ಲಿ ಸೆಲ್ಫ್‌ಗಳನ್ನು ನಿರ್ಮಿಸುವ, ಪ್ಲಾಟ್ ಫಾರಂಗಳಿಗೆ ಬಣ್ಣವನ್ನು ಬಳಿಯುವ ಮತ್ತು ವಿದ್ಯುತ್ ದುರಸ್ಥಿ ಕೆಲಸಗಳನ್ನು ಕೈಗೊಳ್ಳುವ ಕಾಮಗಾರಿ ಕುರಿತು.

**ಕಟ್ಟಡ ಸಲಹಾ ಸಮಿತಿ ತೀರ್ಮಾನ**

ಮೇಲಿನ ಕಾಮಗಾರಿಯ ಟೆಂಡರಿನಲ್ಲಿ (GST ಹೊರತುಪಡಿಸಿ) ಮೊದಲನೆ ಕಡಿಮೆ ದರ ರೂ. 3,50,000.00 (ರೂಪಾಯಿ ಮೂರು ಲಕ್ಷದ ಐವತ್ತು ಸಾವಿರ ಮಾತ್ರ.) ನಮೂದಿಸಿದ Siddalingayya R. Hiremath, PWD Civil Contractor, H no.68, 3rd cross, Gadag. ಇವರ ಟೆಂಡರನ್ನು ಪರಿಗಣಿಸಿ ಒಪ್ಪಿ, KTPP ನಿಯಮಾವಳಿಯನ್ವಯ ಸದರಿ ಟೆಂಡರಿನ Validity Period ಪರಿಶೀಲಿಸಿ ಅವಕಾಶವಿದ್ದಲ್ಲಿ ಮಾತ್ರ ಆದೇಶ ನೀಡಲು ತೀರ್ಮಾನಿಸಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಮೇಲಿನ ಕಾಮಗಾರಿಯ ಟೆಂಡರಿನಲ್ಲಿ (GST ಹೊರತುಪಡಿಸಿ) ಮೊದಲನೆ ಕಡಿಮೆ ದರ ರೂ. 3,50,000.00 (ರೂಪಾಯಿ ಮೂರು ಲಕ್ಷದ ಐವತ್ತು ಸಾವಿರ ಮಾತ್ರ.) ನಮೂದಿಸಿದ Siddalingayya R. Hiremath, PWD Civil Contractor, H no.68, 3rd cross, Gadag. ಇವರ ಟೆಂಡರನ್ನು ಪರಿಗಣಿಸಿ ಒಪ್ಪಿ, KTPP ನಿಯಮಾವಳಿಯನ್ವಯ ಸದರಿ ಟೆಂಡರಿನ Validity Period ಪರಿಶೀಲಿಸಿ ಅವಕಾಶವಿದ್ದಲ್ಲಿ ಮಾತ್ರ ಆದೇಶ ನೀಡಲು ತೀರ್ಮಾನಿಸಿದ ಕಟ್ಟಡ ಸಲಹಾ ಸಮಿತಿಯ ತೀರ್ಮಾನವನ್ನು ಸಭೆಯು ಸಹ ಯಥಾವತ್ತಾಗಿ ಅನುಮೋದಿಸಿದೆ.

➲ **ಐಟಂ ನಂ. 02:**

ವಿಷಯ:–ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಮುಖ್ಯ ಆವರಣದಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಕ್ರಿಯಾ ಯೋಜನೆಯಡಿಯಲ್ಲಿ ನಿರ್ಮಿಸುತ್ತಿರುವ Life Science Block ಕಟ್ಟಡಕ್ಕೆ ಮಾರ್ಗ ರಸ್ತೆ (approach road) ಯನ್ನು ನಿರ್ಮಿಸುವ ಕೆಲಸದ ಕುರಿತು.

**ಕಟ್ಟಡ ಸಲಹಾ ಸಮಿತಿ ತೀರ್ಮಾನ**

ಮೇಲಿನ Life Science Block ಕಟ್ಟಡಕ್ಕೆ ಮಾರ್ಗ ರಸ್ತೆ (approach road)ಯನ್ನು ನಿರ್ಮಿಸುವ ಕಾಮಗಾರಿಯ ಅಂದಾಜು ವೆಚ್ಚ ರೂ.15,17,386.26 (GST ಹೊರತು ಪಡಿಸಿ) ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಹಾಗೂ ಮೇಲಿನ ಕೆಲಸಕ್ಕೆ ಟೆಂಡರ್ ಕರೆಯಲು ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಹ ಅನುಸಮರ್ಥಿಸಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಮುಖ್ಯ ಆವರಣದಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ಕ್ರಿಯಾ ಯೋಜನೆಯಡಿಯಲ್ಲಿ ನಿರ್ಮಿಸುತ್ತಿರುವ Life Science Block ಕಟ್ಟಡಕ್ಕೆ ಮಾರ್ಗ ರಸ್ತೆ (approach road) ಯನ್ನು ನಿರ್ಮಿಸುವ ಕಾಮಗಾರಿಗೆ ಸಂಬಂಧಿಸಿದಂತೆ ಎಸ್ಟೇಟ್ ಸಲಹಾ ಮಂಡಳಿ ಸಭೆಯು ಕೈಗೊಂಡ ಮೇಲಿನ ನಿರ್ಣಯವನ್ನು ಅನುಮೋದಿಸಲಾಯಿತು.

ಸದರಿ ಕಾಮಗಾರಿಗೆ ದಿನಾಂಕ 24.08.2022 ರಂದು ಟೆಂಡರ್ ಕರೆಯಲಾಗಿತ್ತು. ನಂತರ ದಿನಾಂಕ:13.09.2022 ರಂದು ಕಾಮಗಾರಿಯ ತಾಂತ್ರಿಕ ಬಿಡ್ಡುಗಳನ್ನು ಹಾಗೂ ಫೈನಾನ್ಸಿಯಲ್ ಬಿಡ್ಡುಗಳನ್ನು (Single Cover) ತೆರೆದಿರುವುದನ್ನು ಸನ್ಮಾನ್ಯ ಸಿಂಡಿಕೇಟ್ ಸಭೆಯ ಅಧ್ಯಕ್ಷರು ಸಭೆಯಲ್ಲಿ ಪ್ರಸ್ತಾಪಿಸಿದರು. ಅಂದಾಜು ವೆಚ್ಚ ರೂ. 15,17,386.26 (GST ಹೊರತು ಪಡಿಸಿ) ಮೊತ್ತದ ಟೆಂಡರ್ ಕರೆಯಲಾಗಿತ್ತು. ಅಂದಾಜು ವೆಚ್ಚದ ಶೇಕಡಾ 15.30% ಕಡಿಮೆ ದರ ನಮೂದಿಸಿ ರೂ. 12,85,224.53 ಮೊತ್ತದ (GST ಹೊರತು ಪಡಿಸಿ) ಟೆಂಡರ್‌ನ್ನು ಎಲ್–1 ಟೆಂಡರ್‌ದಾರರು ಸಲ್ಲಿಸಿರುತ್ತಾರೆ. ಆದ್ದರಿಂದ ಕಡಿಮೆ ದರ ನಮೂದಿಸಿ ಸಲ್ಲಿಸಿರುವ ಎಲ್–1 ಟೆಂಡರ್‌ದಾರರ ಟೆಂಡರನ್ನು ಪರಿಗಣಿಸಿ ಒಪ್ಪಿ ಮುಂದಿನ ಕ್ರಮ ವಹಿಸಬಹುದಾಗಿದೆ ಎಂದು ಸಹ ಸಭೆಗೆ ತಿಳಿಸಿದರು. ಇದಕ್ಕೆ ಒಪ್ಪಿದ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

➲ **ಐಟಂ ನಂ. 03:**

ವಿಷಯ:–ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಮುಖ್ಯ ಆವರಣದಲ್ಲಿನ ಆಟದ ಮೈದಾನವನ್ನು (400 ಮೀ ಟ್ರಾಕ್, ಕ್ರಿಕೆಟ್ , ಕ್ಕೊ –ಕ್ಕೊ, ಕಬಡ್ಡಿ ಮತ್ತು ವಾಲಿಬಾಲ್) ಅಭಿವೃದ್ಧಿ ಪಡಿಸುವ ಕೆಲಸದ ಕುರಿತು.

**ಕಟ್ಟಡ ಸಲಹಾ ಸಮಿತಿ ತೀರ್ಮಾನ**

ಮೇಲಿನ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿನ ಆಟದ ಮೈದಾನವನ್ನು (400 ಮೀ ಟ್ರಾಕ್, ಕ್ರಿಕೆಟ್ , ಕ್ಕೊ –ಕ್ಕೊ, ಕಬಡ್ಡಿ ಮತ್ತು ವಾಲಿಬಾಲ್) ಅಭಿವೃದ್ಧಿಪಡಿಸುವ ಕೆಲಸದ ಅಂದಾಜು ವೆಚ್ಚ ರೂ.09.60 ಲಕ್ಷಗಳಿಗೆ (ಶೇಕಡ 12 GST ಸೇರಿದಂತೆ) ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಹಾಗೂ ಇ–ಪ್ರೋಕ್ಯೂರ್ಮೆಂಟ್ ಮೂಲಕ ಟೆಂಡರ್ ಕರೆಯಲು ಸಹ ಅನುಮತಿಸಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿನ ಆಟದ ಮೈದಾನವನ್ನು (400 ಮೀ ಟ್ರಾಕ್, ಕ್ರಿಕೆಟ್ , ಕೊ – ಕೊ, ಕಬಡ್ಡಿ ಮತ್ತು ವಾಲಿಬಾಲ್) ಅಭಿವೃದ್ಧಿಪಡಿಸುವ ಕೆಲಸದ ಅಂದಾಜು ವೆಚ್ಚ ರೂ.09.60 ಲಕ್ಷಗಳಿಗೆ (ಶೇಕಡ 12 GST ಸೇರಿದಂತೆ) ಆಡಳಿತಾತ್ಮಕ ಅನುಮೋದನೆ ನೀಡಲಾಯಿತು ಹಾಗೂ ಇ–ಪ್ರೋಕ್ಯೂರ್ಮೆಂಟ್ ಮೂಲಕ ಟೆಂಡರ್ ಕರೆಯಲು ಅನುಮತಿಸಿರುವ ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಭೆಯು ಅನುಮೋದಿಸಿದೆ.

➲ **ಐಟಂ ನಂ. 05:**

ವಿಷಯ: ಖರೀದಿ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

ಉಲ್ಲೇಖ: ದಿನಾಂಕ 07.09.2022 & 11.09.2022 ರಂದು ಜರುಗಿದ ಖರೀದಿ ಸಲಹಾ ಸಮಿತಿ ಸಭೆ ನಡಾವಳಿ

*****

ವಿಶ್ವವಿದ್ಯಾಲಯದಲ್ಲಿ ದಿನಾಂಕ 07.09.2022 ಮತ್ತು 11.09.2022 ರಂದು ಜರುಗಿದ ಖರೀದಿ ಸಲಹಾ ಸಮಿತಿ ಸಭೆಯು ಎಲ್ಲಾ ಕಾರ್ಯಸೂಚಿಗಳನ್ನು ಪರಿಶೀಲಿಸಿ ತೀರ್ಮಾನಿಸಿದ ನಡಾವಳಿಯನ್ನು ಸಲ್ಲಿಸಲಾಗಿದ್ದು, ಈ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ದಿನಾಂಕ 07.09.2022 ಮತ್ತು 11.09.2022 ರಂದು ಜರುಗಿದ ಖರೀದಿ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಈ ಕೆಳಕಂಡಂತೆ ವಿಷಯವಾರು ದೃಢೀಕರಿಸಿ ಅನುಮೋದಿಸಿದೆ.

## ದಿನಾಂಕ 07.09.2022 ರಂದು ಜರುಗಿದ ಖರೀದಿ ಸಲಹಾ ಸಮಿತಿ ಸಭೆಯ ನಡಾವಳಿ

**ಐಟಂ ಸಂಖ್ಯೆ: 01**

**ವಿಷಯ:** ಸಸ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಖರೀದಿ ಸಮಿತಿ ಸಭೆಯಲ್ಲಿ ಮಂಡಿಸುವ ಕುರಿತು.

**ಖರೀದಿ ಸಲಹಾ ಸಮಿತಿ ತೀರ್ಮಾನ**

ಕಾರ್ಯಸೂಚಿಯ ಪಟ್ಟಿಯಲ್ಲಿನ ಉಪಕರಣಗಳು ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಲಭ್ಯವಿರುವುದರಿಂದ ಖರೀದಿ ಸಮಿತಿ ಸಭೆಯಲ್ಲಿ ಸದರಿ ಉಪಕರಣಗಳ ಖರೀದಿಯನ್ನು ತಿರಸ್ಕರಿಸಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಕಾರ್ಯಸೂಚಿಯ ಪಟ್ಟಿಯಲ್ಲಿನ ಉಪಕರಣಗಳು ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಲಭ್ಯವಿರುವುದರಿಂದ ಸದರಿ ಉಪಕರಣಗಳ ಖರೀದಿಯನ್ನು ತಿರಸ್ಕರಿಸಿದ ಖರೀದಿ ಸಮಿತಿ ಸಭೆಯ ತೀರ್ಮಾನವನ್ನು ಸಭೆಯು ಅನುಮೋದಿಸಿದೆ.

**ಐಟಂ ಸಂಖ್ಯೆ: 02**

**ವಿಷಯ:** ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣಕ್ಕೆ ಬೇಕಾಗಿರುವ ಉಪಕರಣಗಳನ್ನು ಖರೀದಿಸುವ ಕುರಿತು.

**ಖರೀದಿ ಸಲಹಾ ಸಮಿತಿ ತೀರ್ಮಾನ**

ಕಾರ್ಯಸೂಚಿಯ ಪಟ್ಟಿಯಲ್ಲಿನ ಉಪಕರಣದ ಹೆಚ್ಚಿನ ಮಾಹಿತಿಯನ್ನು ಸಲ್ಲಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳುವುದೆಂದು ಖರೀದಿ ಸಮಿತಿ ಸಭೆಯು ತಿರ್ಮಾನಿಸಿತು.

**<u>ಸಿಂಡಿಕೇಟ್ ಸಭೆಯ ತೀರ್ಮಾನ</u>**

ಕಾರ್ಯಸೂಚಿಯ ಪಟ್ಟಿಯಲ್ಲಿನ ಉಪಕರಣದ ಹೆಚ್ಚಿನ ಮಾಹಿತಿಯನ್ನು ಸಲ್ಲಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳುವ ಖರೀದಿ ಸಮಿತಿ ಸಭೆಯ ತೀರ್ಮಾನವನ್ನು ಸಭೆಯು ಅನುಮೋದಿಸಿದೆ.

**ಐಟಂ ಸಂಖ್ಯೆ: 03**

**ವಿಷಯ:** ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಪ್ರಯೋಗಾಲಯಕ್ಕೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಖರೀದಿ ಸಮಿತಿ ಸಭೆಯಲ್ಲಿ ಮಂಡಿಸುವ ಕುರಿತು.

**<u>ಖರೀದಿ ಸಲಹಾ ಸಮಿತಿ ತೀರ್ಮಾನ</u>**

ಕಾರ್ಯಸೂಚಿಯ ಪಟ್ಟಿಯಲ್ಲಿನ ಉಪಕರಣದ ಹೆಚ್ಚಿನ ಮಾಹಿತಿಯನ್ನು ಸಲ್ಲಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳುವುದೆಂದು ಖರೀದಿ ಸಮಿತಿ ಸಭೆಯು ತಿರ್ಮಾನಿಸಿತು.

**<u>ಸಿಂಡಿಕೇಟ್ ಸಭೆಯ ತೀರ್ಮಾನ</u>**

ಕಾರ್ಯಸೂಚಿಯ ಪಟ್ಟಿಯಲ್ಲಿನ ಉಪಕರಣದ ಹೆಚ್ಚಿನ ಮಾಹಿತಿಯನ್ನು ಸಲ್ಲಿಸಿದಲ್ಲಿ ಮುಂದಿನ ಕ್ರಮ ಕೈಗೊಳ್ಳುವ ಖರೀದಿ ಸಮಿತಿ ಸಭೆಯ ತೀರ್ಮಾನವನ್ನು ಸಭೆಯು ಅನುಮೋದಿಸಿದೆ.

**ಐಟಂ ಸಂಖ್ಯೆ: 04**

ವಿಷಯ: ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ಜೀವ ವಿಜ್ಞಾನ ಕಟ್ಟಡ ಮತ್ತು ಸ್ನಾತಕೋತ್ತರ ಕೇಂದ್ರ ಯಲಬುರ್ಗಾಕ್ಕೆ ಅಗ್ಯವಾದ 02 ಸೀಟರ್ ಡೆಸ್ಕ್ ಗಳನ್ನು ಪೂರೈಸುವ ಕೆಲಸದ ಟೆಂಡರನ್ನು ಅನುಮೋದಿಸುವ ಕುರಿತು.

**<u>ಖರೀದಿ ಸಲಹಾ ಸಮಿತಿ ತೀರ್ಮಾನ</u>**

ವಿಶ್ವವಿದ್ಯಾಲಯದ ಬಳ್ಳಾರಿಯ ಮುಖ್ಯ ಆವರಣದಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ಜೀವ ವಿಜ್ಞಾನ ಕಟ್ಟಡ ಮತ್ತು ಸ್ನಾತಕೋತ್ತರ ಕೇಂದ್ರ ಯಲಬುರ್ಗಾಕ್ಕೆ ಅಗ್ಯವಾದ Two Seater Desk ಗಳನ್ನು ಪೂರೈಸುವ ಕೆಲಸದ ಟೆಂಡರಿನಲ್ಲಿ M/S A FOUR ENTERPRICES, No;27& 28, K.I.A.D.B. Mahalbagayat Industrial Area, Vijayapur-586104 ಇವರು Two Seater Deskಗೆ ಪ್ರತಿಯೊಂದಕ್ಕೆ ರೂ.9,185/– (ರೂಪಾಯಿ ಒಂಬತ್ತು ಸಾವಿರದ ಒಂದುನೂರ ಎಂಬತ್ತೈದು ಮಾತ್ರ.) ನಮೂದಿಸಿರುವ L–1 ದರವನ್ನು ಪರಿಗಣಿಸಿ ಖರೀದಿಸಲು ಅನುಮೋದಿಸಲಾಯಿತು.

**<u>ಸಿಂಡಿಕೇಟ್ ಸಭೆಯ ತೀರ್ಮಾನ</u>**

ವಿಶ್ವವಿದ್ಯಾಲಯದ ಬಳ್ಳಾರಿಯ ಮುಖ್ಯ ಆವರಣದಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ಜೀವ ವಿಜ್ಞಾನ ಕಟ್ಟಡ ಮತ್ತು ಸ್ನಾತಕೋತ್ತರ ಕೇಂದ್ರ ಯಲಬುರ್ಗಾಕ್ಕೆ ಅಗ್ಯವಾದ Two Seater Desk ಗಳನ್ನು ಪೂರೈಸುವ ಕೆಲಸದ ಟೆಂಡರಿನಲ್ಲಿ M/S A FOUR ENTERPRICES, No;27&28, K.I.A.D.B. Mahalbagayat Industrial Area, Vijayapur-586104 ಇವರು Two Seater Desk ಗೆ ಪ್ರತಿಯೊಂದಕ್ಕೆ ರೂ.9,185/– (ರೂಪಾಯಿ ಒಂಬತ್ತು ಸಾವಿರದ ಒಂದುನೂರ ಎಂಬತ್ತೈದು ಮಾತ್ರ.) ನಮೂದಿಸಿರುವ L–1 ದರವನ್ನು ಪರಿಗಣಿಸಿ ಖರೀದಿಸುವ ಖರೀದಿ ಸಲಹಾ ಸಮಿತಿ ನಿರ್ಧಾರವನ್ನು ಸಭೆಯು ಅನುಮೋದಿಸಿದೆ.

## ದಿನಾಂಕ 11.09.2022 ರಂದು ಜರುಗಿದ ಖರೀದಿ ಸಲಹಾ ಸಮಿತಿ ಸಭೆಯ ನಡಾವಳಿ

**ಐಟಂ ಸಂಖ್ಯೆ: 01**

**ವಿಷಯ:** ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣಕ್ಕೆ ಬೇಕಾಗಿರುವ ಉಪಕರಣಗಳನ್ನು ಖರೀದಿಸುವ ಕುರಿತು.

**ಖರೀದಿ ಸಲಹಾ ಸಮಿತಿ ತೀರ್ಮಾನ**

GEM ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಈ–ಟೆಂಡರ್‌ನಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಕಾರ್ಯಸೂಚಿಯ ಸಾಮಗ್ರಿಗಳ ಪಟ್ಟಿಯಲ್ಲಿನ ವಿವರಗಳನ್ನು ಗಮನಿಸಿದ ಸಭೆಯು ಈ ಕೆಳಗಿನಂತೆ ಸಭೆಯು ಅನುಮೋದಿಸಿದೆ.

| ಕ್ರ.ಸಂ | ಯಂತ್ರಗಳು | ಸಿಂಡಿಕೇಟ್ ಸಭೆಯ ತೀರ್ಮಾನ |
|---|---|---|
| 01 | Multifunction Printer | ಅನುಮೋದಿಸಿದೆ. |
| 02 | LCD Projector | ಅನುಮೋದಿಸಿದೆ. |
| 03 | Photocopier(Mono) | ಆಡಳಿತ ನಿರ್ವಹಣೆಗೆ ಅವಶ್ಯವಿರುವ ಹಿನ್ನೆಲೆಯಲ್ಲಿ ಖರೀದಿಗೆ ಸನ್ಮಾನ್ಯ ಸಿಂಡಿಕೇಟ್ ಸಭೆಯ ಸದಸ್ಯ ಕಾರ್ಯದರ್ಶಿಯವರು ಪ್ರಸ್ತಾಪಿಸಿದರು. ಆದರೆ ಸಿಂಡಿಕೇಟ್ ಸಭೆಯು ಸದರಿ ಯಂತ್ರ ಖರೀದಿಗೆ ಒಪ್ಪದೆ, ಈ ಹಿಂದಿನಂತೆ ಬಾಡಿಗೆ ಆಧಾರದ ಮೇಲೆ Photocopier (Mono) ಯಂತ್ರ ಪಡೆಯಲು ಸಭೆ ಒಪ್ಪಿತು. |
| 05 | ID Card Printer | ಅನುಮೋದಿಸಿದೆ. |

ಮುಂದುವರೆದು, ಈ ಎಲ್ಲಾ ಯಂತ್ರಗಳನ್ನು GEM ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಈ–ಟೆಂಡರ್‌ನಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆಯನ್ನು ಸಭೆಯು ನೀಡಿದೆ. ಕ್ರಮ ಸಂಖ್ಯೆ 03ರ Photocopier(Mono) ಯಂತ್ರ ಖರೀದಿ ವೆಚ್ಚ, ನಿರ್ವಹಣೆ ವೆಚ್ಚ ಮತ್ತು ಬಾಡಿಗೆ ದರದ ವೆಚ್ಚದ ಹೋಲಿಕೆಯನ್ನು ಮುಂಬರುವ ಸಿಂಡಿಕೇಟ್ ಸಭೆಗೆ ಹಾಜರುಪಡಿಸಿದ ನಂತರ ಈ ಕುರಿತು ಚರ್ಚೆ ನಡೆಸಲು ಸಭೆ ತಿಳಿಸಿತು.

**ಐಟಂ ಸಂಖ್ಯೆ: 02**

**ವಿಷಯ:** ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಪ್ರಯೋಗಾಲಯಕ್ಕೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಖರೀದಿ ಸಮಿತಿ ಸಭೆಯಲ್ಲಿ ಮಂಡಿಸುವ ಕುರಿತು.

**ಖರೀದಿ ಸಲಹಾ ಸಮಿತಿ ತೀರ್ಮಾನ**

KTPP Act 1999 ನಿಯಮಗಳನ್ವಯ ಹಾಗೂ ವಿಶ್ವವಿದ್ಯಾಲಯದ ನಿಯಮಾನುಸಾರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಈ–ಟೆಂಡರ್‌ನಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ಸದರಿ ಪ್ರಯೋಗಾಲಯದ ಉಪಕರಣಗಳಿಗೆ ಸಂಬಂಧಿಸಿದಂತೆ ಸಂಯೋಜಕರು, ಸೂಕ್ಷ್ಮ ಜೀವಶಾಸ್ತ್ರ ವಿಭಾಗ ಇವರು ಡಾ. ಅಜ್ಜಯ್ಯ ಎಂ., ಸನ್ಮಾನ್ಯ ಸಿಂಡಿಕೇಟ್ ಸದಸ್ಯರ ಜೊತೆ ಸಮಾಲೋಚನೆ ನಡೆಸಿ ಮುಂದುವರೆಯಲು ಸಭೆ ತೀರ್ಮಾನಿಸಿದೆ.

➲ **ಐಟಂ ನಂ. 06:**

ವಿಷಯ: ರಾಷ್ಟ್ರೀಯ ಶಿಕ್ಷಣ ನೀತಿ–2020 ಅನುಸಾರ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ Massive Online Open Course (MOOC) and FM Community Radio Station ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: ಸರ್ಕಾರ ಪತ್ರ ಸಂಖ್ಯೆ: ಇಡಿ 115 ಹೆಚ್‌ಪಿಯು 2022 ದಿ: 15.07.2022

*****

ಉಲ್ಲೇಖಿತ ಪತ್ರದ ಮೂಲಕ ರಾಷ್ಟೀಯ ಶಿಕ್ಷಣ ನೀತಿ–2020 ಅನುಸಾರ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ Massive Online Open Course (MOOC) and FM Community Radio Station ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದರಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಭವಿಷ್ಯದ ಹಿತದೃಷ್ಟಿಯಿಂದ ಅನುಕೂಲವಾಗಲಿದೆ ಎಂದು ತಿಳಿಸಿ, ಉಲ್ಲೇಖಿತ ಪತ್ರದಲ್ಲಿ ಸೂಚಿತ 13 ವಿಶ್ವವಿದ್ಯಾಲಯಗಳ ಪೈಕಿ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಗೆ ಸದರಿ ಕಾರ್ಯಕ್ರಮ ಅನುಷ್ಠಾನಗೊಳಿಸುವ ಸಂಬಂಧ ರೂ. 4.00 ಕೋಟಿಗಳಲ್ಲಿ ಶೇ.50ರಷ್ಟು ಅನುದಾನವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಹಾಗೂ ಇನ್ನುಳಿದ ಶೇ 50ರಷ್ಟು ಅನುದಾನವನ್ನು ವಿಶ್ವವಿದ್ಯಾಲಯದ ತನ್ನ ಆಂತರಿಕ ಸಂಪನ್ಮೂಲದಿಂದ ಭರಿಸುವ ಅಭಿಪ್ರಾಯದೊಂದಿಗೆ, ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಒಟ್ಟು ಎಸ್.ಸಿ/ಎಸ್.ಟಿ ಮತ್ತು ಹಿಂದುಳಿದ ವಿದ್ಯಾರ್ಥಿಗಳ ಮಾಹಿತಿಯೊಂದಿಗೆ ಕ್ರಿಯಾ ಯೋಜನೆಯ ಸವಿವರ ಪ್ರಸ್ತಾವನೆಯನ್ನು ಸಲ್ಲಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ನಿರ್ದೇಶಿಸಿರುತ್ತಾರೆ.

ಆದ ಕಾರಣ Massive Online Open Course (MOOC) and FM Community Radio Station ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದಲ್ಲಿ ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆಯನ್ನು ರೂಪಿಸಿ ಹಾಗೂ ಅವಶ್ಯವಿರುವ ತಾಂತ್ರಿಕ ಸಮಿತಿ ರಚಿಸಲು ಹಾಗೂ ಸರ್ಕಾರಕ್ಕೆ ಪತ್ರ ಬರೆದು ರೂ. 4.00 ಕೋಟಿಗಳ ಪ್ರಸ್ತಾವನೆಯನ್ನು ಸಲ್ಲಿಸಲು ಚರ್ಚೆ ಮತ್ತು ತೀರ್ಮಾನಕ್ಕಾಗಿ ಸಿಂಡಿಕೇಟ್ ಸಭೆಗೆ ಮಂಡಿಸಿದೆ.

**ತೀರ್ಮಾನ**

ರಾಷ್ಟೀಯ ಶಿಕ್ಷಣ ನೀತಿ–2020 ಅನುಸಾರ ವಿಶ್ವವಿದ್ಯಾಲಯದಲ್ಲಿ Massive Online Open Course (MOOC) and FM Community Radio Station ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ವಿಚಾರವಾಗಿ ಸಿಂಡಿಕೇಟ್ ಸಭೆಯು ಕಾರ್ಯಸೂಚಿಯಲ್ಲಿನ ಉಲ್ಲೇಖಿತ ಪತ್ರವನ್ನು ಗಮನಿಸಿ, ಚರ್ಚಿಸಿದ ಸಭೆಯು ಸದರಿ ಕಾರ್ಯಕ್ರಮದ ಅನುಷ್ಠಾನದಿಂದ ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವಿದ್ಯಾರ್ಥಿಗಳಗೆ ಶೈಕ್ಷಣಿಕ ಹಾಗೂ ಭವಿಷ್ಯದ ಹಿತದೃಷ್ಟಿಯಿಂದ ಅನುಕೂಲವಾಗಲಿದೆ. ಈ ಕಾರಣ Massive Online Open Course (MOOC) and FM Community Radio Station ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದಲ್ಲಿ ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆಯನ್ನು ರೂಪಿಸಿ ಹಾಗೂ ಅವಶ್ಯವಿರುವ ತಾಂತ್ರಿಕ ಸಮಿತಿ ರಚಿಸಲು ಹಾಗೂ ಸರ್ಕಾರಕ್ಕೆ ಪತ್ರ ಬರೆದು ಪೂರ್ಣ ಪ್ರಮಾಣದ ರೂ. 4.00 ಕೋಟಿಗಳ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆ ತೀರ್ಮಾನಿಸಿದೆ.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ಚರ್ಚಿತ ವಿಷಯ

**1.** ದಿನಾಂಕ 30.03.2021 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಅಧ್ಯಕ್ಷರ ಅಪ್ಪಣೆ ಪಡೆದು ಸನ್ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ. ಮಲ್ಲಿಕಾರ್ಜುನ್ ಮರ್ಚೆಡ್ ಇವರು ವಿಶ್ವವಿದ್ಯಾಲಯದ ಮುಖ್ಯ ಆವರಣ ಬಳ್ಳಾರಿಯ ಮುಖ್ಯ ದ್ವಾರದಿಂದ ಕ್ಯಾಂಪಸ್ ಒಳಗಡೆಯ ಸಂಚಾರಕ್ಕೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ 02 ಸಂಖ್ಯೆ ಬ್ಯಾಟರಿ ಚಾಲಿತ ಲಘು ಸಾರಿಗೆ ವಾಹನಗಳನ್ನು ಖರೀದಿಸುವ ವಿಷಯವನ್ನು ಪ್ರಸ್ತಾಪಿಸಿದರು. ಸದರಿ ವಿಷಯಕ್ಕೆ ಸಭೆಯು GeM/ಕರ್ನಾಟಕ

ಸರ್ಕಾರ ನಿಯಮಾವಳಿ ಪ್ರಕಾರ ಖರೀದಿಸಲು ಒಮ್ಮತದಿಂದ ಅಂಗಿಕರಿಸಲಾಗಿತ್ತು. ಆದರೆ ಈ ವರೆಗೂ ಕ್ರಮವಹಿಸದಿರುವ ಕುರಿತು ಸದರಿಯವರು ಮರು ಪ್ರಸ್ತಾಪಿಸಿದರು.

ಈ ಕುರಿತಾಗಿ ಸಿಂಡಿಕೇಟ್ ಸದಸ್ಯರನ್ನೊಳಗೊಂಡಂತೆ ಸಮಿತಿಯನ್ನು ರಚಿಸಲು ತೀರ್ಮಾನಿಸಿ, ಸದರಿ ಸಮಿತಿ ಅಧ್ಯಕ್ಷರನ್ನಾಗಿ ಡಾ. ಮಲ್ಲಿಕಾರ್ಜುನ ಮರ್ಚೆಡ್, ಸಿಂಡಿಕೇಟ್ ಸದಸ್ಯರು, ಡಾ. ಬಸವರಾಜ ಪೂಜಾರ್, ಸಿಂಡಿಕೇಟ್ ಸದಸ್ಯರು, ಸಮಿತಿ ಸದಸ್ಯರು, ಡಾ. ಉದಯಕುಮಾರ್ ಖಡ್ಕೆ, ನಿರ್ದೇಶಕರು, ಐಟಿ ಸೆಲ್, ಸಮಿತಿ ಸದಸ್ಯರು., ಶ್ರೀ. ವೈ. ರಾಮಚಂದ್ರ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಸದಸ್ಯ ಕಾರ್ಯದರ್ಶಿ ಹೀಗೆ GeM/ಕರ್ನಾಟಕ ಸರ್ಕಾರ ನಿಯಮಾವಳಿ ಪ್ರಕಾರ ಬ್ಯಾಟರಿ ಚಾಲಿತ ಲಘು ಸಾರಿಗೆ ವಾಹನಗಳನ್ನು ಖರೀದಿಸಲು ಸಮಿತಿಯನ್ನು ರಚಿಸಲಾಯಿತು.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105
ಕುಲಸಚಿವರು

ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2022–23/**1553** ದಿನಾಂಕ: 31.10.2022

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ. 12.10.2022 ರಂದು ಬೆಳಿಗ್ಗೆ 11:00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 19.10.2022.

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ. 12.10.2022 ರಂದು ಬೆಳಿಗ್ಗೆ 11:00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 12.10.2022 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿ

➲ **ಐಟಂ ನಂ. 01:**

ವಿಷಯ: ವಿಶ್ವವಿದ್ಯಾಲಯದ 10 ನೇ ವಾರ್ಷಿಕ ಘಟಿಕೋತ್ಸವದ ಪ್ರಯುಕ್ತ ಗೌರವ ಡಾಕ್ಟರೇಟ್ ಪದವಿಗೆ ಸಲ್ಲಿಸಿದ ಅರ್ಜಿಗಳ ಪರಿಶೀಲನೆ, ಪದವಿ ಪ್ರದಾನ ಪ್ರಕ್ರಿಯೆಗೆ ಚಾಲನೆ ನೀಡುವ ಕುರಿತು.

****

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಹತ್ತನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡುವ ಪ್ರಯುಕ್ತ ಕಲೆ, ಸಾಹಿತ್ಯ, ರಂಗಭೂಮಿ, ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ಸಮಾಜಸೇವೆ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಗಣ್ಯ ವ್ಯಕ್ತಿಗಳ ಸ್ವವಿವರಗಳೊಂದಿಗೆ ಅರ್ಜಿಗಳು ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾಗಿದ್ದು ಸದರಿಯವರ ಸ್ವವಿವರಗಳನ್ನು ಪರಿಶೀಲಿಸಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡುವ ಸಂಬಂಧ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### ತೀರ್ಮಾನ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಹತ್ತನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡುವ ಪ್ರಯುಕ್ತ ಕಲೆ, ಸಾಹಿತ್ಯ, ರಂಗಭೂಮಿ, ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ಸಮಾಜಸೇವೆ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಗಣ್ಯ ವ್ಯಕ್ತಿಗಳ ಸ್ವವಿವರಗಳೊಂದಿಗೆ ಅರ್ಜಿಗಳು ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾಗಿದ್ದು ಸದರಿಯವರ ಸ್ವವಿವರಗಳನ್ನು ಪರಿಶೀಲಿಸಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಪ್ರಕ್ರಿಯೆಗೆ ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು ಹಾಗೂ Scrutiny committee ಗೆ ಓರ್ವ ತಜ್ಞ ಸದಸ್ಯರನ್ನು ನೇಮಿಸುವಂತೆ ಮಾನ್ಯ ಕುಲಪತಿಗಳಿಗೆ ಸಭೆಯು ತಿಳಿಸಿತು.

ಮುಂದುವರೆದು, ಗೌರವ ಡಾಕ್ಟರೇಟ್ ಪದವಿಗೆ ಸಲ್ಲಿಕೆಯಾಗಿರುವ ಅರ್ಜಿಯ ಸ್ವವಿವರಗಳನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಸಲ್ಲಿಕೆಯಾಗಿರುವ ಒಟ್ಟು 07 ಅರ್ಜಿಗಳಲ್ಲಿ ಒಂದು ಅರ್ಜಿಯನ್ನು ತಿರಸ್ಕರಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು ಹಾಗೂ ಉಳಿದ 06 ಅರ್ಜಿಗಳನ್ನು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿದೆ.

## ಟೇಬಲ್ ಅಜೆಂಡಾ:

➲ **ಐಟಂ ನಂ. 01:**

ವಿಷಯ: ವಿಶ್ವವಿದ್ಯಾಲಯದಲ್ಲಿ ಕಿರಿಯ ಅಭಿಯಂತರರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ. ಆಕಾಶ್ ಬಿ ಇವರು ಬೆಂಗಳೂರಿಗೆ ವರ್ಗಾವಣೆಯಾದ ಪ್ರಯುಕ್ತ ಸದರಿಯವರಿಂದ ತೆರವಾದ ಸ್ಥಾನದಲ್ಲಿ ಸಂಚಿತ ವೇತನದ ಆಧಾರದ ಮೇಲೆ ಕಿರಿಯ ಅಭಿಯಂತರರನ್ನು ನೇಮಕ ಮಾಡಿಕೊಳ್ಳುವ ಕುರಿತು.

***

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಕಿರಿಯ ಅಭಿಯಂತರರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ. ಆಕಾಶ್ ಬಿ ಇವರು ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರಿಗೆ ವರ್ಗಾವಣೆಯಾದ ಪ್ರಯುಕ್ತ ವಿಶ್ವವಿದ್ಯಾಲಯದಲ್ಲಿ ಕಿರಿಯ ಅಭಿಯಂತರರ ಸ್ಥಾನವು ಖಾಲಿ ಇರುತ್ತದೆ. ಶ್ರೀ. ಶ್ರೀಕಾಂತ ಎ. ವಿ. ಇವರು ಡಿಪ್ಲೋಮಾ ಇಂಜಿನಿಯರಿಂಗ್ ಪದವಿಯನ್ನು ಪೂರ್ಣಗೊಳಿಸಿದ್ದು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ತಾಂತ್ರಿಕ ವಿಭಾಗದಲ್ಲಿ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸಲು ಅವಕಾಶ ನೀಡಬೇಕೆಂದು ಮನವಿ ಪತ್ರವನ್ನು ಸಲ್ಲಿಸಿದ್ದು, ಸದರಿಯವರನ್ನು ಶ್ರೀ. ಆಕಾಶ್ ಬಿ ಇವರಿಂದ ತೆರವಾದ ಸ್ಥಾನದಲ್ಲಿ ಸಂಚಿತ ವೇತನದ ಆಧಾರದ ಮೇಲೆ ಕಿರಿಯ ಅಭಿಯಂತರರಾಗಿ ನೇಮಕ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಶ್ರೀ. ಶ್ರೀಕಾಂತ ಎ ವಿ ಇವರನ್ನು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಸಂಚಿತ ವೇತನದಲ್ಲಿ ನೇಮಕ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ, ಸದರಿಯವರ ಮನವಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಕಿರಿಯ ಅಭಿಯಂತರರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ. ಆಕಾಶ್ ಬಿ ಇವರು ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರಿಗೆ ವರ್ಗಾವಣೆಯಾದ ಪ್ರಯುಕ್ತ, ಸದರಿಯವರಿಂದ ತೆರವಾದ ಸ್ಥಾನದಲ್ಲಿ ಶ್ರೀ. ಶ್ರೀಕಾಂತ ಎ. ವಿ. ಇವರನ್ನು ವಿಶ್ವವಿದ್ಯಾಲಯದಲ್ಲಿ ಕಿರಿಯ ಅಭಿಯಂತರರಾಗಿ ಸಂಚಿತ ವೇತನದ ಆಧಾರದ ಮೇಲೆ ಮಾಸಿಕ ರೂ. 25,000/–ಗಳ ವೇತನಕ್ಕೆ ನೇಮಕ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದನೆಯನ್ನು ನೀಡಿದೆ.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105
ಕುಲಸಚಿವರು

ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2022–23/**2073** ದಿನಾಂಕ: 24.12.2022

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ. 25.11.2022 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 26.11.2022.

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ. 25.11.2022 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 25.11.2022 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ

### ➲ ಐಟಂ ನಂ. 01:

ದಿನಾಂಕ. 12.09.2022, 22.09.2022 ಮತ್ತು 12.10.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮದ ವರದಿಯನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

**ತೀರ್ಮಾನ**

ದಿನಾಂಕ 12.09.2022, 22.09.2022 ಮತ್ತು 12.10.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮದ ವರದಿಯನ್ನು ಸಭೆಯು ದೃಢೀಕರಿಸಿ ಅನುಮೋದಿಸಿದೆ.

### ➲ ಐಟಂ ನಂ. 02:

ವಿಷಯ: ವಿಶ್ವವಿದ್ಯಾಲಯದ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗದ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಯ ಅಧ್ಯಯನ ಮಂಡಳಿ ರಚಿಸಿರುವ ಕುರಿತು.

***

ವಿಶ್ವವಿದ್ಯಾಲಯದ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗದ ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಯನ ಮಂಡಳಿಯನ್ನು ಪುನಃ ರಚಿಸಿ ಅಧಿಸೂಚನೆಯನ್ನು ಹೊರಡಿಸಿದ್ದು, ಸದರಿ ಅಧಿಸೂಚನೆಯನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗದ ಸ್ನಾತಕ ಹಾಗೂ ಸ್ನಾತಕೋತ್ತರ ಅಧ್ಯಯನ ಮಂಡಳಿಯನ್ನು ಪುನಃ ರಚಿಸಿ ಹೊರಡಿಸಿದ ಅಧಿಸೂಚನೆಯನ್ನು ಸಭೆಯು ಅನುಸಮರ್ಥಿಸಿದೆ.

### ➲ ಐಟಂ ನಂ. 03

ವಿಷಯ: ದಿನಾಂಕ. 22.09.2022 ರಂದು ಜರುಗಿದ ವೈದ್ಯಕೀಯ ವೆಚ್ಚ ಪರಿಶೀಲನಾ ಸಮಿತಿ ಸಭೆಯ ನಡಾವಳಿ ಕುರಿತು.

***

ದಿನಾಂಕ. 22.09.2022 ರಂದು ಮಧ್ಯಾಹ್ನ 03.00 ಗಂಟೆಗೆ ಜರುಗಿದ ವೈದ್ಯಕೀಯ ವೆಚ್ಚ ಪರಿಶೀಲನಾ ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ದಿನಾಂಕ. 22.09.2022 ರಂದು ಜರುಗಿದ ವೈದ್ಯಕೀಯ ವೆಚ್ಚ ಪರಿಶೀಲನಾ ಸಮಿತಿ ಸಭೆಯು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963, ಸಿಜಿಹೆಚ್ಎಸ್ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಹೊರಡಿಸಿದ ಸುತ್ತೋಲೆರನ್ವಯ ಎಲ್ಲಾ ತೀರ್ಮಾನಗಳನ್ನು ನೀಡಿರುವ ಹಿನ್ನೆಲೆಯಲ್ಲಿ ವೈದ್ಯಕೀಯ ವೆಚ್ಚ ಪರಿಶೀಲನಾ ಸಮಿತಿಯ ಸದರಿ ನಡಾವಳಿಗಳನ್ನೆ ಸಿಂಡಿಕೇಟ್ ಸಭೆಯು ಪರಿಶೀಲನೆ ನಡೆಸಿ, ದೃಢೀಕರಿಸಿ ಅನುಮೋದಿಸಿದೆ.

## ➲ ಐಟಂ ನಂ. 04

ವಿಷಯ: ವಿಶ್ವವಿದ್ಯಾಲಯದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಸಂಬಂಧಿಸಿದಂತೆ, 2020–21ನೇ ಸಾಲಿನ ಪದವಿ ಪಡೆದ ಅರ್ಹತಾ ಪಟ್ಟಿಯನ್ನು ಅನುಮೋದಿಸುವ ಕುರಿತು.

****

ವಿಶ್ವವಿದ್ಯಾಲಯದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಸಂಬಂಧಿಸಿದಂತೆ, 2020–21ನೇ ಸಾಲಿನಲ್ಲಿ ಸ್ನಾತಕ, ಸ್ನಾತಕೋತ್ತರ, ಸ್ನಾತಕೋತ್ತರ ಡಿಪ್ಲೋಮಾ, ಬಿ.ಇಡಿ, ಬಿ.ಪಿ.ಇಡಿ, ಪಿಹೆಚ್.ಡಿ ಮುಂತಾದ ಪದವಿಗಳನ್ನು ಪೂರ್ಣಗೊಳಿಸಿ ಪದವಿ ಪ್ರದಾನಕ್ಕೆ ಅರ್ಹರಾದ ಹಾಗೂ ಸ್ವರ್ಣ ಪದಕ ವಿಜೇತ, ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳ ಅರ್ಹತಾ ಪಟ್ಟಿಯನ್ನು ಸಿದ್ಧಪಡಿಸಿದ್ದು (ವಿದ್ಯಾರ್ಥಿಗಳ ತಃಖ್ತೆ ಲಗತ್ತಿಸಿದೆ) ನಿಯಮಾನುಸಾರ ಸನ್ಮಾನ್ಯ ಕುಲಾಧಿಪತಿಗಳ ಅನುಮೋದನೆಗಾಗಿ ರವಾನಿಸಬೇಕಾಗಿದ್ದು, ಹೀಗಾಗಿ ಸದರಿ ಅರ್ಹತಾ ಪಟ್ಟಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

### ತೀರ್ಮಾನ

ವಿಶ್ವವಿದ್ಯಾಲಯದ 10ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಸಂಬಂಧಿಸಿದಂತೆ, 2020–21ನೇ ಸಾಲಿನಲ್ಲಿ ಸ್ನಾತಕ, ಸ್ನಾತಕೋತ್ತರ, ಸ್ನಾತಕೋತ್ತರ ಡಿಪ್ಲೋಮಾ, ಬಿ.ಇಡಿ, ಬಿ.ಪಿ.ಇಡಿ, ಪಿಹೆಚ್.ಡಿ ಮುಂತಾದ ಪದವಿಗಳನ್ನು ಪೂರ್ಣಗೊಳಿಸಿ ಪದವಿ ಪ್ರದಾನಕ್ಕೆ ಅರ್ಹರಾದ ಹಾಗೂ ಸ್ವರ್ಣ ಪದಕ ವಿಜೇತ, ರ್‍ಯಾಂಕ್ ವಿಜೇತ ವಿದ್ಯಾರ್ಥಿಗಳ ಅರ್ಹತಾ ಪಟ್ಟಿಯನ್ನು ಸಭೆಯು ಕೂಲಂಕುಷವಾಗಿ ಪರಿಶೀಲಿಸಿ ನಿಯಮಾನುಸಾರ ಕುಲಾಧಿಪತಿಗಳ ಅನುಮೋದನೆಗೆ ಕಳುಹಿಸಲು ಸಭೆ ಒಪ್ಪಿದೆ.

## ➲ ಐಟಂ ನಂ. 05

ವಿಷಯ : ಸ್ನಾತಕ ಪರೀಕ್ಷೆಗಳಲ್ಲಿ ಅಕ್ರಮವೆಸಗಿದ ವಿದ್ಯಾರ್ಥಿಗಳ ವಿಚಾರಣಾ ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

*****

ಆಗಸ್ಟ್/ಸೆಪ್ಟೆಂಬರ್ –2022ರ ತಿಂಗಳಿನಲ್ಲಿ ಮತ್ತು ಸೆಪ್ಟೆಂಬರ್/ಅಕ್ಟೋಬರ್ –2022ರ ತಿಂಗಳಿನಲ್ಲಿ ಜರುಗಿದ 2ನೇ(ಪುನರಾವರ್ತಿತ), 4ನೇ ಮತ್ತು 6ನೇ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಹಾಗೂ ಸ್ನಾತಕ (NEP) 2ನೇ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಅಕ್ರಮಗಳನ್ನು ಎಸಗಿದ ವಿದ್ಯಾರ್ಥಿಗಳಿಗೆ ವಿಚಾರಣಾ ಸಮಿತಿ ಸಭೆಯನ್ನು ದಿನಾಂಕ:03.11.2022 ಮತ್ತು 04.11.2022 ರಂದು ಆಯೋಜಿಸಲಾಗಿತ್ತು. ಸದರಿ ಸಮಿತಿ ಸಭೆಗಳ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

### ತೀರ್ಮಾನ

ಆಗಸ್ಟ್/ಸೆಪ್ಟೆಂಬರ್ –2022ರ ತಿಂಗಳಿನಲ್ಲಿ ಮತ್ತು ಸೆಪ್ಟೆಂಬರ್/ಅಕ್ಟೋಬರ್ –2022ರ ತಿಂಗಳಿನಲ್ಲಿ ಜರುಗಿದ 2ನೇ(ಪುನರಾವರ್ತಿತ), 4ನೇ ಮತ್ತು 6ನೇ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಹಾಗೂ ಸ್ನಾತಕ (NEP) 2ನೇ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಅಕ್ರಮಗಳನ್ನು ಎಸಗಿದ ವಿದ್ಯಾರ್ಥಿಗಳ ವಿಚಾರಣಾ ಸಮಿತಿ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಅನುಮೋದಿಸಿದೆ. ಜೊತೆಗೆ ನಿಯಮಾವಳಿ ಅನುಸಾರ ವಿಚಾರಣೆ ಸಮಿತಿ ಮುಂದೆ ಹಾಜರಾದ ವಿದ್ಯಾರ್ಥಿಗಳಿಗೆ 2000 ಮತ್ತು 4000 ವಿಚಾರಣೆ ಸಮಿತಿ ಮುಂದೆ ಹಾಜರಾಗದ ವಿದ್ಯಾರ್ಥಿಗಳಿಗೆ ವಿಧಿಸಿರುವ ದಂಡ ಮತ್ತು ಎಂ.ಪಿ.ಸಿ ಆಗಿರುವ ಪ್ರಸ್ತುತ ಸೆಮಿಸ್ಟರ್ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ತಡೆಹಿಡಿದಿರುವ ಕ್ರಮಗಳನ್ನು ಸಭೆ ಅನುಮೋದಿಸಿದೆ.

➲ **ಐಟಂ ನಂ. 06**

ವಿಷಯ: ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷಾ ಕಾರ್ಯಗಳ ಭತ್ಯೆ ಹಾಗೂ ಸಂಭಾವನೆ ಪರಿಷ್ಕರಣಾ ಸಮಿತಿಯ ವರದಿಯನ್ನು ಮರುಮಂಡಿಸುವ ಕುರಿತು.

ಉಲ್ಲೇಖ: 1. ಸಂಖ್ಯೆ:ವಿಶ್ರೀಕೃವಿಬ/ಕು(ಮೌ)/ಸಮಿತಿ/2021-22/846 ದಿನಾಂಕ:21.10.2021
2. ದಿನಾಂಕ:12.09.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿ ಸಂಖ್ಯೆ:05

****

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷಾ ಕಾರ್ಯಗಳ ಸಂಭಾವನೆ ಪರಿಷ್ಕರಣಾ ಸಮಿತಿಯನ್ನು ಪ್ರೊ. ಲೋಕೇಶ್ ವಿ, ಪ್ರಾಧ್ಯಾಪಕರು, ಗಣಿತಶಾಸ್ತ್ರ ಅಧ್ಯಯನ ವಿಭಾಗ ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿತ್ತು. ದಿನಾಂಕ:12.09.2022 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿದ್ದು, ಸಭೆಯು ವರದಿಯನ್ನು ಪುನಃ ಪರಿಶೀಲಿಸಿ ಮರುಮಂಡಿಸಲು ಸೂಚಿಸಿತ್ತು. ಆದ್ದರಿಂದ ವರದಿಯನ್ನು ಪುನರ್ ಪರಿಶೀಲಿಸಿ ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಮರುಮಂಡಿಸಿದೆ.

**ತೀರ್ಮಾನ**

ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷಾ ಕಾರ್ಯಗಳ ಭತ್ಯೆ ಹಾಗೂ ಸಂಭಾವನೆ ಪರಿಷ್ಕರಣಾ ವರದಿಯ ಕುರಿತು ಸುಧೀರ್ಘವಾಗಿ ಚರ್ಚಿಸಿದ ಸಭೆಯು ಸದರಿ ಸಮಿತಿಯು ಮತ್ತೊಮ್ಮೆ ಸಭೆ ನಡೆಸಿ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷಾ ಕಾರ್ಯಗಳ ಸಂಭಾವನೆ ಪರಿಷ್ಕರಣಾ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸಿಂಡಿಕೇಟ್ ಸಭೆಗೆ ವರದಿಯನ್ನು ಮುಂಬರುವ ಸಿಂಡಿಕೇಟ್ ಸಭೆಗೆ ಸಲ್ಲಿಸಲು ಸಭೆ ಸೂಚಿಸಿದೆ.

➲ **ಐಟಂ ನಂ. 07**

ವಿಷಯ: ಡಾ. ಕೆ. ಎಸ್. ಲೋಕೇಶ್, ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಇವರ ಪರೀಕ್ಷತಾ ಅವಧಿ ಮುಕ್ತಾಯದ ಘೋಷಣೆ ಕುರಿತು.

ಉಲ್ಲೇಖ: 1. ಕರ್ನಾಟಕ ಉಚ್ಚ ನ್ಯಾಯಾಲಯ, ಕಲಬುರ್ಗಿ ಪೀಠದ ರಿಟ್ ಸಂಖ್ಯೆ: 100858/2013
2. ಈ ಕಛೇರಿ ಆದೇಶ ಸಂಖ್ಯೆ: ವಿಶ್ರೀಕೃವಿಬ/ಶಿಕ್ಷಕೇತರ/2015-16/774 ದಿನಾಂಕ: 17.08.2015
3. ಡಾ. ಕೆ. ಎಸ್. ಲೋಕೇಶ್, ಪ್ರಾಧ್ಯಾಪಕರು ಇವರ ಮನವಿ ಪತ್ರ ದಿನಾಂಕ: 31.10.2022.
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 17.11.2022.

*****

ಡಾ. ಕೆ.ಎಸ್. ಲೋಕೇಶ್ ಇವರು ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ಅಧ್ಯಯನ ವಿಭಾಗಕ್ಕೆ ಸಹ ಪ್ರಾಧ್ಯಾಪಕರಾಗಿ ನೇಮಕಾತಿ ಹೊಂದಿ ದಿನಾಂಕ: 22.10.2012 ರಂದು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಸದರಿಯವರ ನೇಮಕಾತಿ ಆಯ್ಕೆಯನ್ನು ಪ್ರಶ್ನಿಸಿ, ಕರ್ನಾಟಕ ಉಚ್ಚ ನ್ಯಾಯಾಲಯ ಕಲಬುರಗಿ ಪೀಠ, ಇಲ್ಲಿ ದಾವೆ ಸಂಖ್ಯೆ 100858/2013 ರ ಪ್ರಕರಣವಿದ್ದು, ಸದರಿ ಪ್ರಕರಣದ ಅಂತಿಮ ತೀರ್ಪನ್ನು ಕಾಯ್ದಿರಿಸಿ, ದಿನಾಂಕ: 22.10.2012 ರಿಂದ 21.10.2014 ಕ್ಕೆ ಎರಡು ವರ್ಷಗಳ ಪರೀಕ್ಷತಾ ಅವಧಿಯನ್ನು ತೃಪ್ತಿಕರವಾಗಿದೆಯೆಂದು ಉಲ್ಲೇಖ – 02 ರಂತೆ ಘೋಷಿಸಲಾಗಿದೆ.

ಮುಂದುವರೆದು, ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಪೀಠವು ದಿನಾಂಕ: 13.12.2021 ರಂದು ದಾವೆ ಸಂಖ್ಯೆ: 100858/2013 ರ ಪ್ರಕರಣವನ್ನು ವಜಾಗೊಳಿಸಿರುವ ಹಿನ್ನೆಲೆಯಲ್ಲಿ ಪರೀಕ್ಷತಾ ಅವಧಿಯ ಆದೇಶವನ್ನು ಮಾರ್ಪಡಿಸಿ ಪರಿಷ್ಕೃತ ಆದೇಶವನ್ನು ನೀಡುವಂತೆ ಉಲ್ಲೇಖ-03 ರಂತೆ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

ಕಾರಣ ನ್ಯಾಯಾಲಯವು ಸದರಿ ಪ್ರಕರಣವನ್ನು ವಜಾಗೊಳಿಸಿರುವ ಹಿನ್ನೆಲೆಯಲ್ಲಿ ಡಾ. ಕೆ. ಎಸ್. ಲೋಕೇಶ್, ಪ್ರಾಧ್ಯಾಪಕರು ಇವರ ದಿನಾಂಕ: 22.10.2012 ರಿಂದ 21.10.2014 ಕ್ಕೆ ಎರಡು ವರ್ಷಗಳ ಪ್ರೊಬೇಷನ್ ಅವಧಿಯು ಮುಕ್ತಾಯವಾದ ಪ್ರಯುಕ್ತ ಕರ್ನಾಟಕ ನಾಗರಿಕ ಸೇವೆ (ಪ್ರೊಬೇಷನ್) ನಿಯಮಗಳು – 1977 ರನ್ವಯ

ಖಾಯಂ ಪೂರ್ವ ಸೇವಾ (ಪ್ರೊಬೇಷನ್) ಅವಧಿಯು ತೃಪ್ತಿಕರವಾಗಿದೆ ಎಂದು ಪರಿಷ್ಕೃತ ಆದೇಶವನ್ನು ಹೊರಡಿಸುವ ಸಂಬಂಧ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಡಾ. ಕೆ.ಎಸ್. ಲೋಕೇಶ್ ಇವರು ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಇವರ ದಿನಾಂಕ: 22.10.2012 ರಿಂದ 21.10.2014 ಕ್ಕೆ ಎರಡು ವರ್ಷಗಳ ಪ್ರೊಬೇಷನ್ ಅವಧಿಯನ್ನು ಪ್ರಕರಣದ ಅಂತಿಮ ತೀರ್ಪನ್ನು ಕಾಯ್ದಿರಿಸಿ, ಪರೀಕ್ಷತಾ ಅವಧಿಯನ್ನು ತೃಪ್ತಿಕರವಾಗಿದೆಯೆಂದು ಆದೇಶವನ್ನು ಹೊರಡಿಸಲಾಗಿತ್ತು. ಸದರಿ ಪ್ರಕರಣವನ್ನು ನ್ಯಾಯಾಲಯವು ವಜಾಗೊಳಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ನಾಗರಿಕ ಸೇವೆ (ಪ್ರೊಬೇಷನ್) ನಿಯಮಗಳು – 1977 ರನ್ವಯ ಖಾಯಂ ಪೂರ್ವ ಸೇವಾ (ಪ್ರೊಬೇಷನ್) ಅವಧಿಯು ತೃಪ್ತಿಕರವಾಗಿದೆ ಎಂದು ಪರಿಷ್ಕೃತ ಆದೇಶವನ್ನು ಹೊರಡಿಸಲು ಸಭೆ ಅನುಮೋದಿಸಿದೆ.

**➲ ಐಟಂ ನಂ. 08**

ವಿಷಯ: ವಿಶ್ವವಿದ್ಯಾಲಯದಿಂದ ಅಂತರ್ ಮಹಾವಿದ್ಯಾಲಯ ಕ್ರೀಡಾ ಕೂಟದ ಆಯೋಜನೆ ಕುರಿತು.

*****

ವಿಶ್ವವಿದ್ಯಾಲಯದಿಂದ 2022–23ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲಾ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಕ್ರೀಡಾಕೂಟ ಆಯೋಜನೆಗಾಗಿ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

2022–23ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲಾ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಜನವರಿ–2023 ಎರಡನೇ ವಾರದಲ್ಲಿ ಕ್ರೀಡಾಕೂಟ ಆಯೋಜಿಸಲು ತಿಳಿಸಿದೆ. ಒಂದು ವೇಳೆ ಆ ಸಮಯದಲ್ಲಿ ಸ್ನಾತಕ ಪರೀಕ್ಷೆಗಳು ಆಯೋಜನೆಯಾದಲ್ಲಿ ಡಿಸೆಂಬರ್–2022 ಕೊನೆ ವಾರದಲ್ಲಿ ಆಯೋಜಿಸಲು ಸಭೆ ಸರ್ವಾನುಮತದಿಂದ ಒಪ್ಪಿದೆ.

**➲ ಐಟಂ ನಂ. 09**

ವಿಷಯ: ಮೆ॥ ಸುಶಾಂತ ಟ್ರಾವೆಲ್ಸ್, ಧಾರವಾಡ, ಇವರಿಗೆ ವಾಹನಗಳನ್ನು ಸರಬರಾಜು ಮಾಡಲು ಮುಂದುವರಿಕೆ ಆದೇಶ ನೀಡಲು ಅನುಮತಿ ನೀಡುವ ಕುರಿತು.

*****

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅಗತ್ಯವಾಗಿ ಬೇಕಾಗಿರುವ ವಿವಿಧ ಮಾದರಿಯ ಬಾಡಿಗೆ ವಾಹನಗಳನ್ನು ಸರಬರಾಜು ಮಾಡಲು ಮೆ॥ ಸುಶಾಂತ ಟ್ರಾವೆಲ್ಸ್, ಧಾರವಾಡ, ಇವರಿಗೆ ಆದೇಶ ನೀಡಲಾಗಿದೆ. ಸದರಿ ಏಜೆನ್ಸಿಯವರ ಅವಧಿಯು ಮುಕ್ತಾಯವಾಗಿದಿರುವುದರಿಂದ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯು ಚಾಲ್ತಿಯಲ್ಲಿರುವುದರಿಂದ, ಟೆಂಡರ್ ಪ್ರಕ್ರಿಯೆ ಮುಗಿದು ಆದೇಶ ಹೊರಡಿಸುವವರೆಗೆ ಮೆ॥ ಸುಶಾಂತ ಟ್ರಾವೆಲ್ಸ್, ಧಾರವಾಡ, ಇವರಿಗೆ ವಿಶ್ವವಿದ್ಯಾಲಯಕ್ಕೆ ವಾಹನಗಳನ್ನು ಸರಬರಾಜು ಮಾಡಲು ಮುಂದುವರಿಕೆ ಆದೇಶ ನೀಡುವ ಸಂಬಂಧ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅಗತ್ಯವಾಗಿ ಬೇಕಾಗಿರುವ ವಿವಿಧ ಮಾದರಿಯ ಬಾಡಿಗೆ ವಾಹನಗಳನ್ನು ಸರಬರಾಜು ಮಾಡುವ ಆದೇಶದ ಅವಧಿ ಮುಗಿದ ಹಿನ್ನೆಲೆಯಲ್ಲಿ ಮತ್ತು ಸದರಿ ಟೆಂಡರ್ ಪ್ರಕ್ರಿಯೆಯು ಸಹ ಚಾಲ್ತಿಯಲ್ಲಿರುವುದರಿಂದ ವಿಶ್ವವಿದ್ಯಾಲಯದ ಅಗತ್ಯ ಕೆಲಸಗಳಿಗೆ ಅಡ್ಡಿಯಾಗದಂತೆ ದಿನಾಂಕ 22.09.2022ರಿಂದ ಟೆಂಡರ್ ಪ್ರಕ್ರಿಯೆ ಮುಗಿದು ಆದೇಶ ಹೊರಡಿಸುವವರೆಗೆ ಮೆ॥ ಸುಶಾಂತ ಟ್ರಾವೆಲ್ಸ್, ಧಾರವಾಡ, ಇವರಿಗೆ ವಿಶ್ವವಿದ್ಯಾಲಯಕ್ಕೆ ವಾಹನಗಳನ್ನು ಸರಬರಾಜು ಮಾಡಲು ಮುಂದುವರಿಕೆ ಆದೇಶ ನೀಡಲು ಸಭೆ ಸರ್ವಾನುಮತದಿಂದ ಒಪ್ಪಿದೆ.

➲ **ಐಟಂ ನಂ. 10**

ವಿಷಯ: ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

***

ದಿನಾಂಕ 22.11.2022 ರಂದು ಕಟ್ಟಡ ಸಲಹಾ ಸಮಿತಿ ಸಭೆಯು ಜರುಗಿದ್ದು, ಈ ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ**

ದಿನಾಂಕ 22.11.2022 ರಂದು ಜರುಗಿದ ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಈ ಕೆಳಕಂಡಂತೆ ವಿಷಯವಾರು ದೃಢೀಕರಿಸಿ ಅನುಮೋದಿಸಿದೆ.

➲ **ಐಟಂ ನಂ. 01:**

ವಿಷಯ:– 01 ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಜ್ಞಾನಸಾಗರ ಆವರಣದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಯರ ಮತ್ತು ವಿದ್ಯಾರ್ಥಿಗಳ ಹಾಸ್ಟೆಲ್ ಗಳಿಗೆ SOLAR WATER HEATER ಗಳನ್ನು ಪೂರೈಸಿ ಪ್ರತಿಷ್ಠಾಪಿಸುವ ಕೆಲಸದ ಕುರಿತು.

**ಕಟ್ಟಡ ಸಲಹಾ ಸಮಿತಿ ತೀರ್ಮಾನ**

ವಿಶ್ವವಿದ್ಯಾಲಯದ ಜ್ಞಾನಸಾಗರ ಆವರಣದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಯರ ಮತ್ತು ವಿದ್ಯಾರ್ಥಿಗಳ ಹಾಸ್ಟೆಲ್ ಗಳಿಗೆ SOLAR WATER HEATER ಗಳನ್ನು ಪೂರೈಸಿ ಪ್ರತಿಷ್ಠಾಪಿಸುವ ಕೆಲಸದ ಟೆಂಡರಿನ 03 ನೇ ಕರೆಯಲ್ಲಿ M/S NUETECH SOLAR SYSTEMS PVT LTD, #5, B.M. Shankarappa Industrial Estate, Sunkadakatte , Bangalore-560091 ಇವರ ಏಕ ಬಿಡ್ ಟೆಂಡರನ್ನು ಪರಿಗಣಿಸಿ ಒಪ್ಪಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ವಿಶ್ವವಿದ್ಯಾಲಯದ ಜ್ಞಾನಸಾಗರ ಆವರಣದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಯರ ಮತ್ತು ವಿದ್ಯಾರ್ಥಿಗಳ ಹಾಸ್ಟೆಲ್ ಗಳಿಗೆ SOLAR WATER HEATER ಗಳನ್ನು ಪೂರೈಸಿ ಪ್ರತಿಷ್ಠಾಪಿಸುವ ಕೆಲಸದ ಟೆಂಡರಿನ 03 ನೇ ಕರೆಯಲ್ಲಿ M/S NUETECH SOLAR SYSTEMS PVT LTD, #5, B.M. Shankarappa Industrial Estate, Sunkadakatte , Bangalore-560091 ಇವರ ಏಕ ಬಿಡ್ ಟೆಂಡರನ್ನು ಪರಿಗಣಿಸಿ ಒಪ್ಪಲಾದ ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

➲ **ಐಟಂ ನಂ. 02:**

ವಿಷಯ:–02 ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಜ್ಞಾನಸಾಗರ ಆವರಣದಲ್ಲಿ ಹಿಂದುಳಿದ ವರ್ಗಗಳ (OBC) ವಿದ್ಯಾರ್ಥಿನಿಯರ ಹಾಸ್ಟೆಲ್ ಮತ್ತು ಸಾಮಾನ್ಯ ವಿದ್ಯಾರ್ಥಿಗಳ ಹಾಸ್ಟೆಲ್ ಗಳಿಗೆ SOLAR WATER HEATER ಗಳನ್ನು ಪೂರೈಸಿ ಪ್ರತಿಷ್ಠಾಪಿಸುವ ಕೆಲಸದ ಕುರಿತು.

**ಕಟ್ಟಡ ಸಲಹಾ ಸಮಿತಿ ತೀರ್ಮಾನ**

ವಿಶ್ವವಿದ್ಯಾಲಯದ ಜ್ಞಾನಸಾಗರ ಆವರಣದಲ್ಲಿ ಹಿಂದುಳಿದ ವರ್ಗಗಳ (OBC) ವಿದ್ಯಾರ್ಥಿನಿಯರ ಹಾಸ್ಟೆಲ್ ಮತ್ತು ಸಾಮಾನ್ಯ ವಿದ್ಯಾರ್ಥಿಗಳ ಹಾಸ್ಟೆಲ್‌ಗಳಿಗೆ SOLAR WATER HEATERಗಳನ್ನು ಪೂರೈಸಿ ಪ್ರತಿಷ್ಠಾಪಿಸುವ ಕೆಲಸದ ಟೆಂಡರಿನ 03ನೇ ಕರೆಯಲ್ಲಿ M/S NUETECH SOLAR SYSTEMS PVT LTD, #5, B.M. Shankarappa Industrial Estate, Sunkadakatte , Bangalore-560091 ಇವರ ಏಕ ಬಿಡ್ ಟೆಂಡರನ್ನು ಸದರಿ ಏಜೆನ್ಸಿಯೊಡನೆ ಇ–ಸಂಗ್ರಹಣೆ ತಂತ್ರಾಂಶದಲ್ಲಿ ದರ ಸಂಧಾನ (negotitiation) ಮಾಡಿದನಂತರ ಏಕ ಬಿಡ್ ಟೆಂಡರನ್ನು ಪರಿಗಣಿಸಿ ಒಪ್ಪಲು ಅನುಮೋದಿಸಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ವಿಶ್ವವಿದ್ಯಾಲಯದ ಜ್ಞಾನಸಾಗರ ಆವರಣದಲ್ಲಿ ಹಿಂದುಳಿದ ವರ್ಗಗಳ (OBC) ವಿದ್ಯಾರ್ಥಿನಿಯರ ಹಾಸ್ಟೆಲ್ ಮತ್ತು ಸಾಮಾನ್ಯ ವಿದ್ಯಾರ್ಥಿಗಳ ಹಾಸ್ಟೆಲ್‌ಗಳಿಗೆ SOLAR WATER HEATERಗಳನ್ನು ಪೂರೈಸಿ ಪ್ರತಿಷ್ಠಾಪಿಸುವ ಕೆಲಸದ ಟೆಂಡರಿನ 03ನೇ ಕರೆಯಲ್ಲಿ M/S NUETECH SOLAR SYSTEMS PVT LTD, #5, B.M. Shankarappa Industrial Estate, Sunkadakatte , Bangalore-560091 ಇವರ ಏಕ ಬಿಡ್ ಟೆಂಡರನ್ನು ಸದರಿ ಏಜೆನ್ಸಿಯೊಡನೆ ಇ–ಸಂಗ್ರಹಣೆ ತಂತ್ರಾಂಶದಲ್ಲಿ ದರ ಸಂಧಾನ (negotitiation) ಮಾಡಿದನಂತರ ಏಕ ಬಿಡ್ ಟೆಂಡರನ್ನು ಪರಿಗಣಿಸಿ ಒಪ್ಪಲು ಅನುಮೋದಿಸಿದ ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

**➲ ಐಟಂ ನಂ. 03:**

ವಿಷಯ:–03. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಮುಖ್ಯ ಆವರಣದಲ್ಲಿನ ಆಟದ ಮೈದಾನವನ್ನು (400 ಮೀ ಟ್ರಾಕ್, ಕ್ರಿಕೆಟ್, ಕ್ಕೊ –ಕ್ಕೊ, ಕಬಡ್ಡಿ ಮತ್ತು ವಾಲಿಬಾಲ್) ಅಭಿವೃದ್ಧಿ ಪಡಿಸುವ ಕೆಲಸವನ್ನು ಕೈಗೊಳ್ಳುವ ಕುರಿತು.

**ಕಟ್ಟಡ ಸಲಹಾ ಸಮಿತಿ ತೀರ್ಮಾನ**

ವಿಶ್ವವಿದ್ಯಾಲಯದ ಬಳ್ಳಾರಿಯ ಮುಖ್ಯ ಆವರಣದಲ್ಲಿ ಆಟದ ಮೈದಾನವನ್ನು (400 ಮೀ ಟ್ರಾಕ್, ಕ್ರಿಕೆಟ್, ಕ್ಕೊ –ಕ್ಕೊ, ಕಬಡ್ಡಿ ಮತ್ತು ವಾಲಿಬಾಲ್) ಅಭಿವೃದ್ಧಿ ಪಡಿಸುವ ಕೆಲಸದ ಟೆಂಡರಿನಲ್ಲಿ ಜಿ.ಎಸ್.ಟಿ ಹೊರತು ಪಡಿಸಿ ಮೊದಲನೆ ಕಡಿಮೆ ದರ ರೂ. 6,64,671.24 (ರೂಪಾಯಿ ಆರು ಲಕ್ಷದ ಅರವತ್ತನಾಲ್ಕು ಸಾವಿರದ ಆರುನೂರ ಎಪ್ಪತ್ತೊಂದು ಮತ್ತು ಪೈಸೆ ಇಪ್ಪತ್ತನಾಲ್ಕು ಮಾತ್ರ.) ನಮೂದಿಸಿದ L–1 ಗುತ್ತಿಗೆದಾರರ ಟೆಂಡರನ್ನು ಪರಿಗಣಿಸಿ ಒಪ್ಪಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ವಿಶ್ವವಿದ್ಯಾಲಯದ ಬಳ್ಳಾರಿಯ ಮುಖ್ಯ ಆವರಣದಲ್ಲಿ ಆಟದ ಮೈದಾನವನ್ನು (400 ಮೀ ಟ್ರಾಕ್, ಕ್ರಿಕೆಟ್, ಕ್ಕೊ –ಕ್ಕೊ, ಕಬಡ್ಡಿ ಮತ್ತು ವಾಲಿಬಾಲ್) ಅಭಿವೃದ್ಧಿ ಪಡಿಸುವ ಕೆಲಸದ ಟೆಂಡರಿನಲ್ಲಿ ಜಿ.ಎಸ್.ಟಿ ಹೊರತು ಪಡಿಸಿ ಮೊದಲನೆ ಕಡಿಮೆ ದರ ರೂ. 6,64,671.24 (ರೂಪಾಯಿ ಆರು ಲಕ್ಷದ ಅರವತ್ತನಾಲ್ಕು ಸಾವಿರದ ಆರುನೂರ ಎಪ್ಪತ್ತೊಂದು ಮತ್ತು ಪೈಸೆ ಇಪ್ಪತ್ತನಾಲ್ಕು ಮಾತ್ರ.) ನಮೂದಿಸಿದ L–1 ಗುತ್ತಿಗೆದಾರರ ಟೆಂಡರನ್ನು ಪರಿಗಣಿಸಿ ಒಪ್ಪಲಾದ ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿದೆ.

➲ **ಐಟಂ ನಂ. 11**

ವಿಷಯ: ವಿಶ್ವವಿದ್ಯಾಲಯದ ಹೊರಗುತ್ತಿಗೆ ನೌಕರರ ವೇತನ ಮತ್ತು ಇತರೆ ಉಪಲಬ್ಧಗಳ ಪಾವತಿ ಪರಿಶೀಲನೆಯ ಉನ್ನತ ಮಟ್ಟದ ಸತ್ಯಶೋಧನಾ ಸಮಿತಿ ವರದಿಯನ್ನು ಅನುಮೋದಿಸುವ ಕುರಿತು.

ಉಲ್ಲೇಖ: 1. ಕಛೇರಿ ಸುತ್ತೋಲೆ ಸಂಖ್ಯೆ: ವಿಶ್ರೀಕೃವಿಬ/ಆಡಳಿತ/ಡಿಪಿಎರ್–ಬೋಧಕೇತರ/2022–23/1271 ದಿನಾಂಕ: 14.09.2022

2. ಕಛೇರಿ ಸುತ್ತೋಲೆ ಸಂಖ್ಯೆ: ವಿಶ್ರೀಕೃವಿಬ/ಆಡಳಿತ/ಡಿಪಿಎರ್–ಬೋಧಕೇತರ/2022–23/1351 ದಿನಾಂಕ: 06.10.2022

3. ಕಛೇರಿ ಸುತ್ತೋಲೆ ಸಂಖ್ಯೆ: ವಿಶ್ರೀಕೃವಿಬ/ಆಡಳಿತ/ಡಿಪಿಎರ್–ಬೋಧಕೇತರ/2022–23/1473 ದಿನಾಂಕ: 14.10.2022

****

ವಿಶ್ವವಿದ್ಯಾಲಯದ ಹೊರಗುತ್ತಿಗೆ ನೌಕರರ ವೇತನ ಮತ್ತು ಇತರೆ ಉಪಲಬ್ಧಗಳ ಪಾವತಿ ಪರಿಶೀಲನೆಯ ಸಂಬಂಧವಾಗಿ ಉನ್ನತ ಮಟ್ಟದ ಸತ್ಯಶೋಧನಾ ಸಮಿತಿಯನ್ನು ರಚಿಸಿ, ಸದರಿ ಸಮಿತಿಯು ಉಲ್ಲೇಖಿತ ಸುತ್ತೋಲೆಯನ್ವಯ ದಿನಾಂಕ 17.09.2022, 07.10.2022 ಮತ್ತು 22.10.2022 ರಂದು ಆಯೋಜಿಸಿದ ಸಭೆಯಲ್ಲಿ ಪರಿಶೀಲನೆ ನಡೆಸಿ ವರದಿಯನ್ನು ಸಲ್ಲಿಸಿದೆ. ಸದರಿ ವರದಿಯನ್ನು ಸಿಂಡಿಕೇಟ್ ಸಭೆಗೆ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಹೊರಗುತ್ತಿಗೆ ನೌಕರರ ವೇತನ ಮತ್ತು ಇತರೆ ಉಪಲಬ್ಧಗಳ ಪಾವತಿ ಪರಿಶೀಲನೆಯ ಸಂಬಂಧವಾಗಿ ಉನ್ನತ ಮಟ್ಟದ ಸತ್ಯಶೋಧನಾ ಸಮಿತಿ ವರದಿಯ ಕುರಿತು ಸುಧೀರ್ಘವಾಗಿ ಚರ್ಚಿಸಿದ ಸಭೆಯು ಸದರಿ ವರದಿಯನ್ನು ಯಥಾವತ್ತಾಗಿ ಅನುಮೋದಿಸಿದೆ.

ಮುಂದುವರೆದು, ಹಣಕಾಸು ಅಧಿಕಾರಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ಇವರು ಪ್ರತಿ ಹೊರಗುತ್ತಿಗೆ ನೌಕರರ ವೇತನ ಮತ್ತು ಇತರೆ ಉಪಲಬ್ಧಗಳ ಪಾವತಿಯಲ್ಲಿ ಆದ ವ್ಯತ್ಯಾಸ ಕುರಿತಾಗಿ ಕೂಲಂಕುಷವಾಗಿ ಪರಿಶೀಲಿಸಿ ವ್ಯತ್ಯಾಸದ ಮೊತ್ತವನ್ನು ಅಂಕಿಅಂಶ ಸಹಿತ 10 ದಿನಗಳಲ್ಲಿ ವರದಿಯನ್ನು ಸಲ್ಲಿಸಲು ನಿರ್ದೇಶಿಸಲಾಯಿತು. ತದನಂತರ ಸದರಿ ವರದಿಯ ಕುರಿತು ಗುತ್ತಿಗೆದಾರರಿಗೆ ಮಾಹಿತಿಯನ್ನು ನೀಡಿ ಉತ್ತರ ನೀಡುವಂತೆ ಹೇಳಿ ನಂತರ ಸದರಿಯವರು ಆ ಕುರಿತಾಗಿ ಪ್ರತಿಕ್ರಿಯಿಸದ ಪಕ್ಷದಲ್ಲಿ ಕಾನೂನಾತ್ಮಕ ಕ್ರಮವಹಿಸಲು ಸಭೆ ಸೂಚಿಸಿದೆ.

## ಟೇಬಲ್ ಅಜೆಂಡಾ

➲ **ಐಟಂ ನಂ. 01:**

ಇಂಗ್ಲೀಷ ಅಧ್ಯಯನ ವಿಭಾಗದ ಕಿರುಕುಳ ಆರೋಪದ ದೂರಿನ ವಿಚಾರಣೆಯ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಸದರಿ ವಿಷಯವಾಗಿ ಆಂತರಿಕ ದೂರು ಸಮಿತಿ (Internal Complaint committee) ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಪ್ರಸ್ತಾಪಿಸಿ, ವರದಿಯನ್ವಯ ವಿಚಾರಣೆಗಾಗಿ ಇನ್ನೂ ಕಾಲಾವಕಾಶ ಕೋರಿರುವ ವಿಷಯವನ್ನು ತಿಳಿಸಿದರು. ಸದರಿ ವಿಷಯವನ್ನು ಗಮನಿಸಿ ಸರ್ವಾನುಮತದಿಂದ ಕಾಲಾವಕಾಶಕ್ಕೆ ಒಪ್ಪಿದ ಸಭೆಯು ಆದಷ್ಟು ಬೇಗ ಮುಂದಿನ ಸಿಂಡಿಕೇಟ್ ಸಭೆಗೆ ಮಧ್ಯಂತರ/ಪೂರ್ಣ ವರದಿಯನ್ನು ಸಲ್ಲಿಸಲು ಸೂಚಿಸಿ, ವರದಿ ಬರುವವರೆಗೆ ಸದರಿಯವರ ವಿರುದ್ದ ಯಾವುದೇ ನಿರ್ಣಯ ಕೈಗೊಳ್ಳದಿರಲು ಸಭೆ ನಿರ್ದೇಶಿಸಿದೆ.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105

ಕುಲಸಚಿವರು


ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2022–23/**2074** ದಿನಾಂಕ: 24.12.2022

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ. 07.12.2022 ರಂದು ಮಧ್ಯಾಹ್ನ 04.00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 19.12.2022.

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ. 07.12.2022 ರಂದು ಮಧ್ಯಾಹ್ನ 04.00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:
1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 07.12.2022 ರಂದು ಮಧ್ಯಾಹ್ನ 04.00 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿ

➲ **ಐಟಂ ನಂ. 01:**

ವಿಷಯ : 10ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸುವ ಕುರಿತು.

*****

ದಿನಾಂಕ: 09–12–2022 ರಂದು ಜರುಗಲಿರುವ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವ ಸಮಾರಂಭದಲ್ಲಿ ಮಾನ್ಯ ಘನತೆವೆತ್ತ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ಅನುಮೋದಿಸಿರುವ ಗಣ್ಯ ವ್ಯಕ್ತಿಗಳಿಗೆ ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಿ ಗೌರವಿಸುವ ವಿಷಯವನ್ನು ವಿಶೇಷ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಲು ಮಾನ್ಯ ಘನತೆವೆತ್ತ ರಾಜ್ಯಪಾಲರು ಹಾಗೂ ಕುಲಾಧಿಪತಿಗಳ ಅನುಮೋದನೆ ದೊರೆತ ಹಿನ್ನೆಲೆಯಲ್ಲಿ, ಗೌರವ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಿ ಗೌರವಿಸಲು ಸಭೆ ಅನುಮೋದಿಸಿತು.

**ಟೇಬಲ್ ಅಜೆಂಡಾ**

➲ **ಐಟಂ ನಂ. 01:**

ಇಂಗ್ಲೀಷ ಅಧ್ಯಯನ ವಿಭಾಗದ ಕಿರುಕುಳ ಆರೋಪದ ದೂರಿನ ವಿಚಾರಣೆಯ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ, ಚರ್ಚೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ಇಂಗ್ಲೀಷ ಅಧ್ಯಯನ ವಿಭಾಗದ ಕಿರುಕುಳ ಆರೋಪದ ಆಂತರಿಕ ದೂರು ಸಮಿತಿಯು (Internal Complaint committee) ದಿನಾಂಕ 07.12.2022 ರಂದು ಸಲ್ಲಿಸಿದ ಮಧ್ಯಂತರ ವರದಿಯಲ್ಲಿ ಆರೋಪಿಯು ಸಾಕ್ಷಿಗಳನ್ನು ನಾಶಪಡಿಸಿ ಸತ್ಯದ ವರದಿಯ ಮೇಲೆ ತಮ್ಮ ಪ್ರಭಾವಬೀರುವುದು ಮತ್ತು ಈಗ ನಡೆಸುತ್ತಿರುವ ವಿಚಾರಣೆಗೆ ತೊಂದರೆಯಾಗುವ ಸಂದೇಹದಿಂದ ಅಮಾನತ್ತಿನಲ್ಲಿ ಇಡಲು ತಿಳಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಸದಸ್ಯ ಕಾರ್ಯದರ್ಶಿಗಳು ಪ್ರಸ್ತಾಪಿಸಿದರು. ಈ ಕುರಿತಾಗಿ ಸುದೀರ್ಘವಾಗಿ ಚರ್ಚಿಸಿದ ಸಭೆಯು ವರದಿ ಮತ್ತು ಕರ್ನಾಟಕ ರಾಜ್ಯ ನಾಗರಿಕ ಸೇವೆಗಳು 1957 (Karnataka State Civil Services)ರ 10(1)(b) ರನ್ವಯ ಶ್ರೀ. ಚಾಂದ್ ಬಾಷಾ, ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ್ ಅಧ್ಯಯನ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ಇವರನ್ನು ಸಮಿತಿಯ ಪೂರ್ಣವರದಿ ಬರುವವರೆಗೆ ಅಮಾನತ್ತಿನಲ್ಲಿ ಇಡಲು ಸಭೆ ಸರ್ವಾನುಮತದಿಂದ ತೀರ್ಮಾನಿಸಿದೆ.

➲ **ಐಟಂ ನಂ. 02:**

ವಿಷಯ: ಕ್ರೀಡಾ ನಿರ್ದೇಶಕರ ಹುದ್ದೆಗೆ ರಾಜಿನಾಮೆ ಸಲ್ಲಿಸಿರುವ ಕುರಿತು.

ಉಲ್ಲೇಖ: 1. ಕಛೇರಿ ಆದೇಶ ಸಂಖ್ಯೆ:ವಿಶ್ರೀಕೃವಿಬ/ಡಿಪಿಎಆರ್/ಕ್ರೀನಿನೇ/2022–23/1198 ದಿ. 05.09.2022

2. ಸದರಿಯವರ ಪತ್ರ ದಿನಾಂಕ; 26.11.2022

3. ಕಛೇರಿ ಪತ್ರ ಸಂಖ್ಯೆ: ವಿಶ್ರೀಕೃವಿಬ/ಡಿಪಿಎಆರ್–ಬೋಧಕ/2022–23/1893 ದಿ. 01.12.2022

4. ಸದರಿಯವರ ಪತ್ರ ದಿನಾಂಕ: 04.12.2022

******

ಡಾ. ಸಂಪತ್ ಕುಮಾರ, ಸಹಾಯಕ ಪ್ರಾಧ್ಯಾಪಕರು, ಮತ್ತು ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ಇವರನ್ನು ಉಲ್ಲೇಖ–01ರನ್ವಯ ಸದರಿಯವರನ್ನು ದಿನಾಂಕ 09.09.2022ರಿಂದ ಅನ್ವಯಿಸಿ ನಿರ್ದೇಶಕರು (ಪ್ರಭಾರ), ಕ್ರೀಡಾ ವಿಭಾಗ ಹುದ್ದೆಗೆ ನೇಮಿಸಲಾಗಿತ್ತು. ಉಲ್ಲೇಖ–02ರನ್ವಯ ಸದರಿಯವರು ಮಾನಸಿಕ ಖಿನ್ನತೆ, ಕಾರ್ಯದ ಅಸಾಹಯಕತೆ, ಅನಾರೋಗ್ಯದ ಸಮಸ್ಯೆ ಮತ್ತು ಕೆಲಸ ಒತ್ತಡದ ಕಾರಣ ನೀಡಿ ತಮ್ಮ ಸ್ಥಾನಕ್ಕೆ ರಾಜಿನಾಮೆಯನ್ನು ಸಲ್ಲಿಸಿರುತ್ತಾರೆ. ಈ ವಿಚಾರವಾಗಿ ಉಲ್ಲೇಖ–03ರಂತೆ ನಿಯೋಜಿಸಲಾದ ಕರ್ತವ್ಯದಲ್ಲಿ ಶ್ರದ್ಧೆಯಿಂದ ಮತ್ತು ನಿಷ್ಠೆಯಿಂದ ಕಾರ್ಯನಿರ್ವಹಿಸುವಂತೆ ಸೂಚಿಸಲಾಗಿತ್ತು, ಆದಗ್ಯೂ ಸದರಿಯವರು ಉಲ್ಲೇಖ–04ರನ್ವಯ ಉಲ್ಲೇಖ–02ರ ಪತ್ರದ ಕಾರಣಗಳನ್ನು ನೀಡಿ ಬಿಡುಗಡೆಗೊಳಿಸಲು ಕೋರಿರುತ್ತಾರೆ. ಆದ ಕಾರಣ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಚರ್ಚೆ ಮತ್ತು ತೀರ್ಮಾನಕ್ಕಾಗಿ ಸಲ್ಲಿಸಿದೆ.

## ತೀರ್ಮಾನ

ಡಾ. ಸಂಪತ್ ಕುಮಾರ, ಸಹಾಯಕ ಪ್ರಾಧ್ಯಾಪಕರು, ಮತ್ತು ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ ಇವರು ಸಲ್ಲಿಸಿದ ರಾಜಿನಾಮೆಯನ್ನು ಕೂಲಂಕುಷವಾಗಿ ಪರಿಶೀಲಿಸಿದ ಸಭೆಯು ಸದರಿಯವರಿಗೆ ವಿಶ್ವವಿದ್ಯಾಲಯ ವಹಿಸಿರುವ ಎಲ್ಲಾ ಕರ್ತವ್ಯಗಳನ್ನು ಶ್ರದ್ಧೆ, ನಿಷ್ಠೆ ಮತ್ತು ಜವಾಬ್ದಾರಿಯಿಂದ ನಿರ್ವಹಿಸುವಂತೆ ಕಟುವಾಗಿ ಎಚ್ಚರಿಸಲು ನಿರ್ದೇಶಿಸಿದೆ. ಮುಂದಿನ ದಿನಗಳಲ್ಲಿ ಕರ್ತವ್ಯ ಲೋಪ ಕಂಡುಬಂದಲಿಯೂ ಮತ್ತು ಜೊತೆಗೆ ಇನ್ನು ಮುಂದೆ ಈ ರೀತಿಯ ಅನಗತ್ಯ ಕಾರಣ ನೀಡಿ ಕಾರ್ಯದ ಅಸಹಾಯಕತೆ ತೋರಿ ಪತ್ರ ವ್ಯವಹಾರಗಳನ್ನು ಮಾಡಿದಲ್ಲಿ ಶಿಸ್ತು ಕ್ರಮ ಜರುಗಿಸಲು ಸಭೆ ಸೂಚಿಸಿದೆ.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2022–23/**2075** ದಿನಾಂಕ: 24.12.2022

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ. 09.12.2022 ರಂದು ಮಧ್ಯಾಹ್ನ 02.30 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 19.12.2022.

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ. 09.12.2022 ರಂದು ಮಧ್ಯಾಹ್ನ 02.30 ಗಂಟೆಗೆ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

ದಿನಾಂಕ 09.12.2022 ರಂದು ಮಧ್ಯಾಹ್ನ 02.30 ಗಂಟೆಗೆ
ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿ

**➲ ಐಟಂ ನಂ. 01:**

ವಿಷಯ : ಪರೀಕ್ಷಾ ಅಕ್ರಮ ತಡೆಯಲು ವಿವಿಯ ನಿಯಮಾವಳಿಗಳಲ್ಲಿ ಮಾರ್ಪಡು
ಮಾಡಲು ರಚಿಸಿದ ಸಮಿತಿಯ ವರದಿಯನ್ನು ಅನುಮೋದಿಸುವ ಕುರಿತು.

*****

ವಿಶ್ವವಿದ್ಯಾಲಯದ ಪರೀಕ್ಷಾ ಅಕ್ರಮ ತಡೆಯಲು ಅವಶ್ಯಕತೆಗನುಗುಣವಾಗಿ ನಿಯಮಾವಳಿಗಳನ್ನು ಮಾರ್ಪಡಿಸಲು ಶ್ರೀ ನರಸಿಂಹ ರಾಯಚೂರು, ಸನ್ಮಾನ್ಯ ಸಿಂಡಿಕೇಟ್ ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯದ ಪರೀಕ್ಷಾ ಅಕ್ರಮ ತಡೆಯಲು ಅವಶ್ಯಕತೆಗನುಗುಣವಾಗಿ ನಿಯಮಾವಳಿಗಳನ್ನು ಮಾರ್ಪಡಿಸಲು ಸಲ್ಲಿಸಿದ ಸದರಿ ಸಮಿತಿ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಸದರಿ ವರದಿಯಲ್ಲಿನ ಶಿಕ್ಷೆ, ದಂಡಶುಲ್ಕ ಮತ್ತು ಪರೀಕ್ಷಾ ಆಯೋಜನೆಗೆ ಸಂಬಂಧಿಸಿದ ಸಮಿತಿಯ ಶಿಫಾರಸ್ಸುಗಳನ್ನು ಸಭೆಯು ಅನುಮೋದಿಸಿತು. ಮುಂದುವರೆದು. ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳಿಂದ ಸಂಬಂಧಪಟ್ಟ ಮಹಾವಿದ್ಯಾಲಯ ಪ್ರಾಂಶುಪಾಲರು ದಂಡಶುಲ್ಕವನ್ನು ವಸೂಲಾತಿ ಮಾಡಿ ವಿಶ್ವವಿದ್ಯಾಲಯಕ್ಕೆ ಭರಿಸಲು ಸಭೆ ತೀರ್ಮಾನಿಸಿತು. ಸದರಿ ಮಾಹಿತಿಯನ್ನು ಕುಲಸಚಿವರು ಮೌಲ್ಯಮಾಪನ ಇವರು ವಿಶ್ವವಿದ್ಯಾಲಯದ ಅಧೀನ ಕಾಲೇಜುಗಳಿಗೆ ತಿಳಿಸಲು ಸೂಚಿಸಲಾಯಿತು. ಜೊತೆಗೆ ವಿದ್ಯಾರ್ಥಿಯು ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗಿರುವ ವಿಷಯವನ್ನು ಹೊರತು ಪಡಿಸಿ ಉಳಿದ ವಿಷಯಗಳ ಪರೀಕ್ಷೆಗೆ ಹಾಜರಾಗಲು ಅನುವು ಮಾಡುವಂತೆ ಸಭೆ ನಿರ್ಧರಿಸಿದೆ.

**➲ ಐಟಂ ನಂ. 02:**

ವಿಷಯ : ಸ್ನಾತಕ/ಸ್ನಾತಕೋತ್ತರ ಪರೀಕ್ಷಾ ಸುಧಾರಣಾ ಸಮಿತಿ ವರದಿಯನ್ನು
ಅನುಮೋದಿಸುವ ಕುರಿತು.

*****

ಸ್ನಾತಕ/ಸ್ನಾತಕೋತ್ತರ ಪರೀಕ್ಷಾ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರಲು ಡಾ. ಬಸವರಾಜ ವಿ. ಪೂಜಾರ್, ಸನ್ಮಾನ್ಯ ಸಿಂಡಿಕೇಟ್ ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ಪರೀಕ್ಷಾ ಸುಧಾರಣಾ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## ತೀರ್ಮಾನ

ಸ್ನಾತಕ/ಸ್ನಾತಕೋತ್ತರ ಪರೀಕ್ಷಾ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆಯನ್ನು ತರುವ ಸಂಬಂಧ ಪರೀಕ್ಷಾ ಸುಧಾರಣಾ ಸಮಿತಿ ಸಲ್ಲಿಸಿದ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡ ಕೆಲ ಮಾರ್ಪಡುಗಳೊಂದಿಗೆ ವರದಿಯನ್ನು ಸಭೆ ಅನುಮೋದಿಸಿತು.

- ಈಗಿರುವ ಉತ್ತರ ಪತ್ರಿಕೆಗಳಲ್ಲಿ 36 ಪುಟಗಳಿದ್ದು, ಇದರಲ್ಲಿನ ಪುಟಗಳು ಪ್ರಸಕ್ತ ಪರೀಕ್ಷೆಗಳಿಗೆ ಹೆಚ್ಚಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಉತ್ತರ ಪತ್ರಿಕೆಗಳ ಪುಟಗಳ ಸಂಖ್ಯೆಯನ್ನು 28 ಪುಟಗಳಿಗೆ ಸೀಮಿತಿಗೊಳಿಸುವ ಸಮಿತಿಯ ಶಿಫಾರಸನ್ನು ಸಭೆಯು ಅನುಮೋದಿಸಿದೆ.
- 2 ಸೆಟ್ ಪ್ರಶ್ನೆಪತ್ರಿಕೆಗಳನ್ನು ಸಿದ್ದಪಡಿಸಲು ಸಭೆ ತೀರ್ಮಾನಿಸಿದೆ.
- ಬಿ.ಓ.ಈ ಸಮಿತಿ ರಚನೆ ಮತ್ತು ಪ್ರಶ್ನೆ ಪತ್ರಿಕೆಗಳ ಸಿದ್ದತೆ ಕುರಿತಂತೆ ಸಭೆಯು ಈ ಕೆಳಕಂಡಂತೆ ತೀರ್ಮಾನಿಸಿರುತ್ತದೆ.
    1. ಕುಲಸಚಿವರು ಮೌಲ್ಯಮಾಪನ ಇವರು ಮಹಾವಿದ್ಯಾಲಯಗಳಿಂದ ಎಲ್ಲಾ ವಿಷಯವಾರು ವಿಷಯ ತಜ್ಞರ ಪಟ್ಟಿಯನ್ನು ತಯಾರಿಸಿ ವಿಷಯವಾರು ಬಿ.ಓ.ಇ ಅಧ್ಯಕ್ಷರಿಗೆ ಒದಗಿಸುವುದು.
    2. ವಿಷಯವಾರು ಬಿ.ಓ.ಇ ಅಧ್ಯಕ್ಷರು ಸದರಿ ವಿಷಯವಾರು ವಿಷಯ ತಜ್ಞರ ಪಟ್ಟಿಯಲ್ಲಿ ನಾಲ್ಕು ವಿಷಯ ತಜ್ಞರನ್ನು ಸೂಚಿಸಿ ಕುಲಸಚಿವರು ಮೌಲ್ಯಮಾಪನ ಇವರಿಗೆ ಸಲ್ಲಿಸುವುದು.
    3. ತದನಂತರ ಕುಲಸಚಿವರು ಮೌಲ್ಯಮಾಪನ ಇವರು ನಾಲ್ಕು ವಿಷಯ ತಜ್ಞರಲ್ಲಿ ಇಬ್ಬರಿಗೆ ವಿಷಯವಾರು ಪ್ರಶ್ನೆಪತ್ರಿಕೆಗಳನ್ನು ಸಿದ್ದಪಡಿಸಿ ಸಲ್ಲಿಸಲು ಸೂಚಿಸುವುದು.
    4. ಕುಲಸಚಿವರು ಮೌಲ್ಯಮಾಪನ ಇವರು ಆ ಇಬ್ಬರು ವಿಷಯವಾರು ತಜ್ಞರು ಸಲ್ಲಿಸಿದ ವಿಷಯವಾರು ಪ್ರಶ್ನೆಪತ್ರಿಕೆಗಳನ್ನು ಪರಿಶೀಲನೆಗಾಗಿ ಬಿ.ಓ.ಇ ಅಧ್ಯಕ್ಷರಿಗೆ ಸಲ್ಲಿಸುವುದು.
    5. ಬಿ.ಓ.ಇ ಅಧ್ಯಕ್ಷರು ಸಿದ್ದಪಡಿಸಿದ ವಿಷಯವಾರು ಪ್ರಶ್ನೆಪತ್ರಿಕೆಗಳನ್ನು ಪರಿಶೀಲಿಸಿ ಎಲ್ಲಾ ವಿಷಯವಾರು ಬಿ.ಓ.ಈ ಅಧ್ಯಕ್ಷರು ಮತ್ತು ಸದಸ್ಯರ ಮೇಲು ಸಹಿಯೊಂದಿಗೆ ಕುಲಸಚಿವರು ಮೌಲ್ಯಮಾಪನ ಇವರಿಗೆ ಸಲ್ಲಿಸುವುದು.
- 300 ಸಂಖ್ಯೆ ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳಿರುವ ಮಹಾವಿದ್ಯಾಲಯಕ್ಕೆ ನೂತನ ಪರೀಕ್ಷಾ ಕೇಂದ್ರ ನೀಡಲು ತೀರ್ಮಾನಿಸಲಾಯಿತು. ಜೊತೆಗೆ ಕ್ರೂಡೀಕೃತ ಪರೀಕ್ಷಾ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಲ್ಲಿ ಮೊದಲು ಎಲ್ಲಾ ಯುಜಿಸಿ ಬೋಧಕರನ್ನು ಪರೀಕ್ಷಾ ಕರ್ತವ್ಯಕ್ಕೆ ಬಳಸಿಕೊಳ್ಳಲು ತೀರ್ಮಾನಿಸಿ, ನಂತರ ನಾನ್ ಯುಜಿಸಿ ಬೋಧಕರನ್ನು ಬಳಸಿಕೊಳ್ಳಲು ಸಭೆ ನಿರ್ಧರಿಸಿದೆ.
- 60 ಅಂಕಗಳಿಗೆ ಪರೀಕ್ಷೆ ಸೀಮಿತಗೊಳಿಸಿರುವುದು ಮತ್ತು 2 ಗಂಟೆಯ ಪರೀಕ್ಷಾವಧಿಯನ್ನು ಸೀಮಿತಿಗೊಳಿಸಿರುವ ಸಮಿತಿಯ ಶಿಫಾರಸನ್ನು ಸಭೆಯು ಅನುಮೋದಿಸಿದೆ.
- ಮುಂದಿನ ದಿನಗಳಲ್ಲಿ ಸದರಿ ಕ್ರಮದಲ್ಲಿ ಅಗತ್ಯ ಪರಿಷ್ಕರಣೆ ಕಂಡು ಬಂದಲ್ಲಿ ಮಾರ್ಪಡಿಸಲು ಸಭೆ ಸರ್ವಾನುಮತದಿಂದ ನಿರ್ಧರಿಸಿದೆ.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ – 583 105

ಕುಲಸಚಿವರು


ಸಂಖ್ಯೆ: ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಸಿಸ–ನಡಾವಳಿ/2022–23/**2069** ದಿನಾಂಕ:13.01.2023

ಗೆ,
ಸನ್ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ,
ಬಳ್ಳಾರಿ.

ವಿಷಯ: ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ದಿನಾಂಕ. 24.12.2022 ರಂದು ಮಧ್ಯಾಹ್ನ 12.30 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಕಳುಹಿಸಿಕೊಡುತ್ತಿರುವ ಕುರಿತು.

ಉಲ್ಲೇಖ: ಕುಲಪತಿಗಳ ಅನುಮೋದನೆ ದಿನಾಂಕ. 30.12.2022.

* * *

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಮುಖ್ಯ ಆವರಣ, ಬಳ್ಳಾರಿಯಲ್ಲಿ ದಿನಾಂಕ. 24.12.2022 ರಂದು ಮಧ್ಯಾಹ್ನ 12.30 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಅಡಕ: ಮೇಲಿನಂತೆ.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು–560001.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು), ಬಹುಮಹಡಿ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು–560001.
3. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
4. ಕುಲಸಚಿವರು (ಮೌಲ್ಯಮಾಪನ), ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
5. ಹಣಕಾಸು ಅಧಿಕಾರಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು (ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ಎಲ್ಲಾ ವಿಭಾಗ/ಘಟಕಗಳ ಮುಖ್ಯಸ್ಥರು/ಸಂಯೋಜಕರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ನಿರ್ದೇಶಕರು, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ/ಕೊಪ್ಪಳ/ ಯಲಬುರ್ಗಾ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
10. ಕಛೇರಿ ಪ್ರತಿ.

## ದಿನಾಂಕ 24.12.2022 ರಂದು ಮಧ್ಯಾಹ್ನ 12.30 ಗಂಟೆಗೆ ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ

**➲ ಐಟಂ ನಂ. 01:**

ದಿನಾಂಕ. 25.11.2022, 07.12.2022 ಮತ್ತು 09.12.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮದ ವರದಿಯನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

**ತೀರ್ಮಾನ**

ದಿನಾಂಕ. 25.11.2022, 07.12.2022 ಮತ್ತು 09.12.2022 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಹಾಗೂ ತೆಗೆದುಕೊಂಡ ಕ್ರಮಗಳ ವರದಿಗಳನ್ನು ಸಭೆಯು ದೃಢೀಕರಿಸಿ ಅನುಮೋದಿಸಿದೆ.

**➲ ಐಟಂ ನಂ. 02:**

ವಿಷಯ: ವಿಶ್ವವಿದ್ಯಾಲಯಗಳ ಸಿಬ್ಬಂದಿಗಳ ನೇಮಕಾತಿ ಕ್ರಮ ವಿಧಾನದ ಪರಿನಿಯಮದ ಅಧಿನಿಯಮಿತಿಯ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂಖ್ಯೆ: ಇಡಿ 489 ಯುಬಿವಿ 2022 ದಿನಾಂಕ: 08.12.2022

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 13.12.2022

****

ಉಲ್ಲೇಖಿತ ಪತ್ರದ ಮೂಲಕ ವಿಶ್ವವಿದ್ಯಾಲಯಗಳ ಸಿಬ್ಬಂದಿಗಳ ನೇಮಕಾತಿ ಕ್ರಮ ವಿಧಾನದ ಪರಿನಿಯಮಗಳನ್ನು ವಿಶ್ವವಿದ್ಯಾಲಯದ ಹಂತದಲ್ಲಿ ಶಾಸನಬದ್ದ ಪ್ರಾಧಿಕಾರಗಳ ಅನುಮೋದನೆಯನ್ನು ಪಡೆದು ಅಧಿನಿಯಮಿತಿಗಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಿಸಲಾಗಿದೆ. ಆದ ಕಾರಣ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

ವಿಶ್ವವಿದ್ಯಾಲಯಗಳ ಸಿಬ್ಬಂದಿಗಳ ನೇಮಕಾತಿ ಕ್ರಮ ವಿಧಾನದ ಪರಿನಿಯಮಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಸಭೆಯು ಸದರಿ ಪರಿನಿಯಮವನ್ನು ಸಭೆಯು ಯಥಾವತ್ತಾಗಿ ಅನುಮೋದಿಸಿ, ಸರ್ಕಾರದ ನಿರ್ದೇಶನದಂತೆ ಮುಂದಿನ ಕ್ರಮವಹಿಸಲು ಸೂಚಿಸಿದೆ.

**➲ ಐಟಂ ನಂ. 03:**

ವಿಷಯ: ದಿನಾಂಕ. 22.11.2022 ರಂದು ಜರುಗಿದ ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿ ಕುರಿತು.

***

ದಿನಾಂಕ. 22.11.2022 ರಂದು ಬೆಳಿಗ್ಗೆ 11.30 ಗಂಟೆಗೆ ಜರುಗಿದ ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## ತೀರ್ಮಾನ

ದಿನಾಂಕ. 22.11.2022 ರಂದು ಬೆಳಿಗ್ಗೆ 11.30 ಗಂಟೆಗೆ ಜರುಗಿದ ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿಯನ್ನು ಸಭೆಯು ದೃಢೀಕರಿಸಿ ಅನುಮೋದಿಸಿದೆ.

➲ **ಐಟಂ ನಂ. 04:**

ವಿಷಯ: ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

****

ಹಣಕಾಸು ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ 16.12.2022 ರಂದು ಜರುಗಿದ 2022–23ನೇ ಆರ್ಥಿಕ ಸಾಲಿನ ವಿಶ್ವವಿದ್ಯಾಲಯದ ದ್ವಿತೀಯ ಹಣಕಾಸು ಸಮಿತಿ ಸಭೆಯನ್ನು ಆಯೋಜಿಸಿ, ಸದರಿ ಸಮಿತಿ ಸಭೆಯು ಈ ಕುರಿತು ನಡಾವಳಿಗಳನ್ನು ಸಲ್ಲಿಸಿದೆ. ಈ ನಡಾವಳಿಗಳನ್ನು ವಿದ್ಯಾವಿಷಯಕ ಪರಿಷತ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## ತೀರ್ಮಾನ

ದಿನಾಂಕ 16.12.2022 ರಂದು ಜರುಗಿದ 2022–23ನೇ ಆರ್ಥಿಕ ಸಾಲಿನ ವಿಶ್ವವಿದ್ಯಾಲಯದ ದ್ವಿತೀಯ ಹಣಕಾಸು ಸಮಿತಿ ಸಭೆಯು ನಡಾವಳಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಸಭೆಯು ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಯಥಾವತ್ತಾಗಿ ಅನುಮೋದಿಸಿದೆ.

➲ **ಐಟಂ ನಂ. 05:**

ವಿಷಯ: ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ದೃಢೀಕರಿಸಿ ಅನುಮೋದಿಸುವ ಕುರಿತು.

***

ದಿನಾಂಕ 23.12.2022 ರಂದು ಕಟ್ಟಡ ಸಲಹಾ ಸಮಿತಿ ಸಭೆಯು ಜರುಗಿದ್ದು, ಈ ಸಮಿತಿ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ದೃಢೀಕರಣ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## ತೀರ್ಮಾನ

ದಿನಾಂಕ 23.12.2022 ರಂದು ಜರುಗಿದ ಕಟ್ಟಡ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಈ ಕೆಳಕಂಡಂತೆ ವಿಷಯವಾರು ದೃಢೀಕರಿಸಿ ಅನುಮೋದಿಸಿದೆ.

**ವಿಷಯ: 01–** CEPMIZ ಯೋಜನೆಯಡಿ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯಕ್ಕೆ ಮೂಲ ಭೂತ ಸೌಕರ್ಯ ಮತ್ತು ಉನ್ನತೀ–ಕರಣಗೊಳಿಸುವ ಪ್ರಸ್ತಾವನೆಯಲ್ಲಿನ ಯೋಜನೆಗಳಿಗೆ ವಿಶ್ವವಿದ್ಯಾಲಯದಲ್ಲಿ ಎಂಪ್ಯಾನೆಲ್ಮೆಂಟ್ ಆಗಿರುವ Consultant ರಿಂದ ಸಿದ್ಧಪಡಿಸಿದ ವಿವರವಾದ ಯೋಜನಾ ವರದಿಗಳಿಗೆ (DPR) ಆಡಳಿತಾತ್ಮಕ ಅನುಮೋದನೆ ನೀಡುವ ಹಾಗೂ ಲೋಕೋಪಯೋಗಿ ಇಲಾಖೆಯಿಂದ ತಾಂತ್ರಿಕ ಪರಿಶೀಲನೆ ಮಾಡಿಸಿ ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮಕ್ಕೆ (KMERC) ಸಲ್ಲಿಸಿ ಅನುಮೋದನೆ ಪಡೆದು ಟೆಂಡರ್ ಕರೆಯಲು ಅನುಮತಿಸುವ ಕುರಿತು.

**ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನ**

ವಿಶ್ವವಿದ್ಯಾಲಯವು ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮದ (KMERC) CEPMIZ ಯೋಜನೆಯಡಿ ಮೂಲ ಭೂತ ಸೌಕರ್ಯ ಮತ್ತು ಉನ್ನತೀಕರಣಗೊಳಿಸುವ ಪ್ರಸ್ತಾವನೆಗಳನ್ನು ಸಲ್ಲಿಸಲು ಕೈಗೊಂಡ ಕ್ರಮಗಳನ್ನು ಹಾಗೂ ವಿಶ್ವವಿದ್ಯಾಲಯದ Consultants Empanelment ನಲ್ಲಿರುವ ಮೆ: ಎ.ಸಿ.ಎಸ್.ಡಿಸೈನ್ ಕನ್ಸಲ್ಟಿಂಗ್ ಪ್ರೈವೇಟ್, ಲಿ., ಬೆಂಗಳೂರು ಇವರಿಗೆ ಮೇಲಿನ ಪ್ರಸ್ತಾವನೆಗಳ ವಿವರವಾದ ಯೋಜನಾ ವರದಿ (DPR)

ಗಳನ್ನು KMERC ಇಲಾಖೆಯ ನಿಯಮ ಹಾಗೂ ಪರಿಷ್ಕೃತ ದಿನಾಂಕ:11.10.2022 ರ ಮಾರ್ಗಸೂಚಿಯಂತೆ ತಯಾರಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಕೈಗೊಂಡ ಕ್ರಮವನ್ನು ಅನುಸಮರ್ಥಿಸಲಾಯಿತು. ಸದರಿ Consultnts ಏಜೆನ್ಸಿಗೆ ಟೆಂಡರ್ ಕರಾರಿನನ್ವಯ ಶುಲ್ಕವನ್ನು (ಶೇಕಡ1.20) ವಿಶ್ವವಿದ್ಯಾಲಯದ ವತಿಯಿಂದ ಪಾವತಿಸಲು ಸಹ ಅನುಮತಿಸಲಾಯಿತು. ಅಲ್ಲದೆ, ಮೇಲಿನ ಪ್ರಸ್ತಾವನೆಗಳಿಗೆ (DPR) ಆಡಳಿತಾತ್ಮಕ ಅನುಮೋದನೆ ನೀಡಿ ನಿಯಮಾನುಸಾರ ತಾಂತ್ರಿಕ ಪರಿಶೀಲನೆಯನ್ನು ಲೋಕೋಪಯೋಗಿ ಇಲಾಖೆಯಿಂದ ಮಾಡಿಸಿ ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮಕ್ಕೆ (KMERC) ಸಲ್ಲಿಸಿ ಅನುಮೋದನೆ ಪಡೆದ ನಂತರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಟೆಂಡರ್ ಕರೆಯಲು ಸಹ ಅನುಮತಿಸಲಾಯಿತು.

**ಸಿಂಡಿಕೇಟ್ ಸಭೆಯ ತೀರ್ಮಾನ**

ವಿಶ್ವವಿದ್ಯಾಲಯವು ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮದ (KMERC) CEPMIZ ಯೋಜನೆಯಡಿ ಮೂಲ ಭೂತ ಸೌಕರ್ಯ ಮತ್ತು ಉನ್ನತೀಕರಣಗೊಳಿಸುವ ಪ್ರಸ್ತಾವನೆಗಳನ್ನು ಸಲ್ಲಿಸಲು ಕೈಗೊಂಡ ಕ್ರಮಗಳನ್ನು ಹಾಗೂ ವಿಶ್ವವಿದ್ಯಾಲಯದ Consultants Empanelment ನಲ್ಲಿರುವ ಮೆ: ಎ.ಸಿ.ಎಸ್.ಡಿಸೈನ್ ಕನ್ಸಲ್ಟೆಂಗ್ ಪ್ರೈವೆಟ್, ಲಿ., ಬೆಂಗಳೂರು ಇವರಿಗೆ ಮೇಲಿನ ಪ್ರಸ್ತಾವನೆಗಳ ವಿವರವಾದ ಯೋಜನಾ ವರದಿ (DPR) ಗಳನ್ನು KMERC ಇಲಾಖೆಯ ನಿಯಮ ಹಾಗೂ ಪರಿಷ್ಕೃತ ದಿನಾಂಕ:11.10.2022 ರ ಮಾರ್ಗಸೂಚಿಯಂತೆ ತಯಾರಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಕೈಗೊಂಡ ಕ್ರಮವನ್ನು ಅನುಸಮರ್ಥಿಸಲಾಯಿತು. ಸದರಿ Consultnts ಏಜೆನ್ಸಿಗೆ ಟೆಂಡರ್ ಕರಾರಿನನ್ವಯ ಶುಲ್ಕವನ್ನು (ಶೇಕಡ1.20) ವಿಶ್ವವಿದ್ಯಾಲಯದ ವತಿಯಿಂದ ಪಾವತಿಸಲು ಸಹ ಅನುಮತಿಸಲಾಯಿತು. ಅಲ್ಲದೆ, ಮೇಲಿನ ಪ್ರಸ್ತಾವನೆಗಳಿಗೆ (DPR) ಆಡಳಿತಾತ್ಮಕ ಅನುಮೋದನೆ ನೀಡಿ ನಿಯಮಾನುಸಾರ ತಾಂತ್ರಿಕ ಪರಿಶೀಲನೆಯನ್ನು ಲೋಕೋಪಯೋಗಿ ಇಲಾಖೆಯಿಂದ ಮಾಡಿಸಿ ಕರ್ನಾಟಕ ಗಣಿ ಪರಿಸರ ಪುನಃಶ್ಚೇತನ ನಿಗಮಕ್ಕೆ (KMERC) ಸಲ್ಲಿಸಿ ಅನುಮೋದನೆ ಪಡೆದ ನಂತರ ಇ–ಪ್ರೋಕ್ಯೂರ್ಮೆಂಟ್ ಮೂಲಕ ಟೆಂಡರ್ ಕರೆಯಲು ಸಹ ಅನುಮತಿ ಹೀಗೆ ಒಟ್ಟಾರೆ ಕಟ್ಟಡ ಸಲಹಾ ಸಮಿತಿ ಸಭೆಯ ಎಲ್ಲಾ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಯಥಾವತ್ತಾಗಿ ಅನುಮೋದಿಸಿದೆ.

**ವಿಷಯ: 02–** ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿ JSW Foundation CSR ಯೋಜನೆಯಡಿಯಲ್ಲಿ Botanical Garden ಸ್ಥಾಪಿಸುವ ಕಾಮಗಾರಿಯನ್ನು ಕೈಗೊಳ್ಳಲು ವಿಶ್ವವಿದ್ಯಾಲಯದಲ್ಲಿ ಎಂಪ್ಯಾನೆಲ್ಮೆಂಟ್ ಆಗಿರುವ Consultants ರಿಂದ ವಿವರವಾದ ಯೋಜನಾ ವರದಿಗಳಿಗೆ (DPR) ಪಡೆಯಲು ಹಾಗೂ ಲೋಕೋಪಯೋಗಿ ಇಲಾಖೆಯಿಂದ ತಾಂತ್ರಿಕ ಪರಿಶೀಲನೆ ಮಾಡಿಸಿದ ಟೆಂಡರ್ ಕರೆಯಲು ಅನುಮತಿಸುವ ಕುರಿತು.

**ಕಟ್ಟಡ ಸಲಹಾ ಸಮಿತಿ ಸಭೆಯ ತೀರ್ಮಾನ**

ಮೇಲಿನ ವಿಶ್ವವಿದ್ಯಾಲಯದ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿ JSW Foundation CSR ಯೋಜನೆಯಡಿಯಲ್ಲಿ Botanical Garden ಸ್ಥಾಪಿಸುವ ಕಾಮಗಾರಿಯ ವಿವರವಾದ ಯೋಜನಾ ವರದಿಯನ್ನು (DPR) ಸಿದ್ಧಪಡಿಸುವ ಕೆಲಸವನ್ನು ಮೆ: ಎ.ಸಿ.ಎಸ್.ಡಿಸೈನ್ ಕನ್ಸಲ್ಟೆಂಗ್ ಪ್ರೈವೆಟ್, ಲಿ., ಬೆಂಗಳೂರು ಇವರಿಗೆ ವಹಿಸಿ ಕೊಡಲು ಹಾಗೂ ಸದರಿ ಏಜೆನ್ಸಿಯ ಶುಲ್ಕವನ್ನು ವಿಶ್ವವಿದ್ಯಾಲಯದಿಂದ ಪಾವತಿಸಲು ಅನುಮತಿಸಲಾಯಿತು. ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಸಹ ನೀಡಲಾಯಿತು. ಅಲ್ಲದೆ, ಸದರಿ ಕಾಮಗಾರಿಯನ್ನು JSW Foundation CSR ಯೋಜನೆಯಡಿಯಲ್ಲಿ ಕೈಗೊಳ್ಳುತ್ತಿರುವುದರಿಂದ ವಿಶ್ವವಿದ್ಯಾಲಯದ ಕಟ್ಟಡ ವಿಭಾಗದಿಂದಲೇ ತಾಂತ್ರಿಕ ಪರಿಶೀಲನೆ ಮಾಡಿ ಇ–ಪ್ರೋಕ್ಯೂರ್ಮೆಂಟ್ ಮೂಲಕ ಟೆಂಡರ್ ಕರೆಯಲು ಸಹ ಅನುಮತಿಸಲಾಯಿತು.

**<u>ಸಿಂಡಿಕೇಟ್ ಸಭೆಯ ತೀರ್ಮಾನ</u>**

ವಿಶ್ವವಿದ್ಯಾಲಯದ ಬಳ್ಳಾರಿಯ ಜ್ಞಾನಸಾಗರ ಆವರಣದಲ್ಲಿ JSW Foundation CSR ಯೋಜನೆಯಡಿಯಲ್ಲಿ Botanical Garden ಸ್ಥಾಪಿಸುವ ಕಾಮಗಾರಿಯ ವಿವರವಾದ ಯೋಜನಾ ವರದಿಯನ್ನು (DPR) ಸಿದ್ಧಪಡಿಸುವ ಕೆಲಸವನ್ನು ಮೆ: ಎ.ಸಿ.ಎಸ್.ಡಿಸೈನ್ ಕನ್ಸಲ್ಟೆಂಗ್ ಪ್ರೈವೆಟ್, ಲಿ., ಬೆಂಗಳೂರು ಇವರಿಗೆ ವಹಿಸಿ ಕೊಡಲು ಹಾಗೂ ಸದರಿ ಏಜೆನ್ಸಿಯ ಶುಲ್ಕವನ್ನು ವಿಶ್ವವಿದ್ಯಾಲಯದಿಂದ ಪಾವತಿಸಲು ಅನುಮತಿಸಲಾಯಿತು. ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಸಹ ನೀಡಲಾಯಿತು. ಅಲ್ಲದೆ, ಸದರಿ ಕಾಮಗಾರಿಯನ್ನು JSW Foundation CSR ಯೋಜನೆಯಡಿಯಲ್ಲಿ ಕೈಗೊಳ್ಳುತ್ತಿರುವುದರಿಂದ ವಿಶ್ವವಿದ್ಯಾಲಯದ ಕಟ್ಟಡ ವಿಭಾಗದಿಂದಲೇ ತಾಂತ್ರಿಕ ಪರಿಶೀಲನೆ ಮಾಡಿ ಇ–ಪ್ರೋಕ್ಯೂರ್ಮೆಂಟ್ ಮೂಲಕ ಟೆಂಡರ್ ಕರೆಯಲು ಸಹ ಅನುಮತಿ ಹೀಗೆ ಒಟ್ಟಾರೆ ಕಟ್ಟಡ ಸಲಹಾ ಸಮಿತಿ ಸಭೆಯ ಎಲ್ಲಾ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ಯಥಾವತ್ತಾಗಿ ಅನುಮೋದಿಸಿದೆ.

➲ **ಐಟಂ ನಂ. 06:**

ವಿಷಯ: ಮುಖ್ಯಸ್ಥರ/ಸಂಯೋಜಕರ ನೇಮಕಾತಿ ಮತ್ತು ಎನ್.ಓ.ಸಿಯ ಪ್ರತಿ ಇವುಗಳನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ/ಅನುಸಮರ್ಥಿಸುವ ಕುರಿತು.

****

ವಿಭಾಗದ ಮುಖ್ಯಸ್ಥರ/ಸಂಯೋಜಕರ ನೇಮಕಾತಿ ಆದೇಶ, ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗೆ ಸಹ ಪ್ರಾಧ್ಯಾಪಕ/ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಲು ನೀಡಿದ ನಿರಾಕ್ಷೇಪಣಾ ಪ್ರಮಾಣ ಪತ್ರ ಹೀಗೆ ಈ ಕೆಳಕಂಡವುಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆ/ಅನುಸಮರ್ಥನೆಗಾಗಿ ಸಲ್ಲಿಸಿದೆ.

**<u>ತೀರ್ಮಾನ</u>**

ವಿಭಾಗದ ಮುಖ್ಯಸ್ಥರ/ಸಂಯೋಜಕರ ನೇಮಕಾತಿ ಆದೇಶ, ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗೆ ಸಹ ಪ್ರಾಧ್ಯಾಪಕ/ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ಸಲ್ಲಿಸಲು ನೀಡಿದ ನಿರಾಕ್ಷೇಪಣಾ ಪ್ರಮಾಣ ಪತ್ರ ಹೀಗೆ ಈ ಕೆಳಕಂಡವುಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು/ಅನುಸಮರ್ಥಿಸಿದೆ.

| ಕ್ರ ಸಂ | ವಿವರ | ಅವಧಿ | ಅನುಸಮರ್ಥನೆಗೆ ಸಲ್ಲಿಸಿದವು | ಸಿಂಡಿಕೇಟ್ ಸಭೆಯ ತೀರ್ಮಾನ |
|---|---|---|---|---|
| 01) | ಡಾ. ಹನುಮೇಶ್ ವೈದ್ಯ, ಮುಖ್ಯಸ್ಥರು, ಗಣಿತಶಾಸ್ತ್ರ ಅಧ್ಯಯನ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. | 03.12.2022 ರಿಂದ ಅನ್ವಯಿಸಿ ಮುಂದಿನ ಎರಡು ವರ್ಷಗಳಿಗೆ ಅಥವಾ ಮುಂದಿನ ಆದೇಶದವರೆಗೆ | ಕಛೇರಿ ಆದೇಶ ಸಂಖ್ಯೆ: ವಿಶ್ರೀಕೃವಿಬ/ಡಿಪಿಎಆರ್–ಬೋಧಕ/ ಮುನೇ/2022-23/1872 ದಿ. 30.11.2022 | ಅನುಸಮರ್ಥಿಸಲಾಗಿದೆ. |
| 02) | ಡಾ. ಸಂತೋಷ ಜಿ.ಕೆ., ಸಹಾಯಕ ಪ್ರಾಧ್ಯಾಪಕರು, ವಿ.ಶ್ರೀ.ಕೃ ವಿಶ್ವವಿದ್ಯಾಲಯ, ಬಳ್ಳಾರಿ. ಇವರು National Council of Educational Research and Training (NCERT), Delhi ಇಲ್ಲಿಗೆ ಪ್ರಾಧ್ಯಾಪಕರ ಹುದ್ದೆಗೆ ಮತ್ತು ಹೈದ್ರಾಬಾದ್ ವಿಶ್ವವಿದ್ಯಾಲಯದಲ್ಲಿ ಸಹ ಪ್ರಾಧ್ಯಾಪಕ/ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಸಲ್ಲಿಸಿರುತ್ತಾರೆ. | 20.10.2012 ರಿಂದ ವಿಶ್ರೀಕೃ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. | ನಿರಾಕ್ಷೇಪಣಾ ಪತ್ರ ಸಂಖ್ಯೆ: VSKUB/DPAR-Teaching / NOC/2022-23/1809 Date: 24.11.2022<br>ನಿರಾಕ್ಷೇಪಣಾ ಪತ್ರ ಸಂಖ್ಯೆ: VSKUB/DPAR-Teaching / NOC/2022-23/2008 Date: 20.12.2022 | ಅನುಸಮರ್ಥಿಸಲಾಗಿದೆ. |
| 03) | ಡಾ. ಬಸವರಾಜ ಹಟ್ಟಿ, ಸಂಯೋಜಕರು, ಅನ್ವಯಿಕ ಭೂ ವಿಜ್ಞಾನ ಅಧ್ಯಯನ ವಿಭಾಗ, ವಿಶ್ರೀಕೃ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ | 01.01.2023 ರಿಂದ ಅನ್ವಯಿಸಿ ಮುಂದಿನ ಎರಡು ವರ್ಷಗಳಿಗೆ ಅಥವಾ ಮುಂದಿನ ಆದೇಶದವರೆಗೆ | ಕಛೇರಿ ಆದೇಶ ಸಂಖ್ಯೆ: ವಿಶ್ರೀಕೃವಿಬ/ ಡಿಪಿಎಆರ್–ಬೋಧಕ/ಸಂ.ನೇ/ 2022–23/2009 ದಿ. 20.12.2022 | ಅನುಸಮರ್ಥಿಸಲಾಗಿದೆ. |
| 04) | ಡಾ. ಮನೋಜ್ ಡೊಳ್ಳಿ, ಸಹ ಪ್ರಾಧ್ಯಾಪಕರು ಅರ್ಥಶಾಸ್ತ್ರ ಅಧ್ಯಯನ ವಿಭಾಗ, ವಿ.ಶ್ರೀ.ಕೃ ವಿಶ್ವವಿದ್ಯಾಲಯ, | 26.11.2012 ರಿಂದ ವಿಶ್ರೀಕೃ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. | ವಿ.ಶ್ರೀ.ಕೃ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗದಿಂದ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ | ಹುದ್ದೆ ರಹಿತ ವರ್ಗಾವಣೆಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಲು ಸಭೆ |

| | | | | |
|---|---|---|---|---|
| | ಸ್ನಾತಕೋತ್ತರ ಕೇಂದ್ರ, ಕೊಪ್ಪಳ | | ಅರ್ಥಶಾಸ್ತ್ರ ಅಧ್ಯಯನ ವಿಭಾಗಕ್ಕೆ ವರ್ಗಾವಣೆಯಾಗಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಲು ಅನುಮೋದನೆಗಾಗಿ. | ಅನುಮೋದಿಸಿದೆ. |
| 05) | ಡಾ. ಮಾರಣ್ಣ ಓ., ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ, ಬೆಳಗಾವಿ. | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ, ಬೆಳಗಾವಿಯದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. | ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರಿಗೆ ಕಳುಹಿಸಲು ಮತ್ತು ಕುಲಸಚಿವರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರಿಗೆ ಪ್ರತಿಯನ್ನು ಸಲ್ಲಿಸಲು ಅನುಮೋದನೆಗಾಗಿ | ಹುದ್ದೆ ಸಹಿತ ವರ್ಗಾವಣೆಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಲು ಸಭೆ ಅನುಮೋದಿಸಿದೆ. |

## ಟೇಬಲ್ ಅಜೆಂಡಾ

### ➲ ಐಟಂ ನಂ. 01:

ವಿಷಯ: ಪ್ರಸಾರಂಗ ವಿಭಾಗದ ನಿರ್ದೇಶಕರನ್ನು ನೇಮಿಸುವ ಕುರಿತು.

*****

ವಿಶ್ವವಿದ್ಯಾಲಯದ ಪ್ರಸಾರಂಗದ ವಿಭಾಗದ ನೂತನ ನಿರ್ದೇಶಕರನ್ನು ನೇಮಿಸಲಾಗುತ್ತಿದ್ದು, ಹೀಗಾಗಿ ಸೂಕ್ತರನ್ನು ಪ್ರಸಾರಂಗ ವಿಭಾಗದ ಪೂರ್ಣಾವಧಿ ನಿರ್ದೇಶಕರನ್ನು ನೇಮಿಸುವ ವಿಷಯವನ್ನು ಸಿಂಡಿಕೇಟ್ ಸಭೆಯ ತೀರ್ಮಾನಕ್ಕಾಗಿ ಸಲ್ಲಿಸಿದೆ.

**ತೀರ್ಮಾನ**

ಸದರಿ ವಿಷಯದ ಕುರಿತಾಗಿ ಸುದೀರ್ಘವಾಗಿ ಚರ್ಚಿಸಿದ ಸಭೆಯು ವಿಶ್ವವಿದ್ಯಾಲಯದ ಪ್ರಸಾರಂಗದ ಅಭಿವೃದ್ಧಿ ಮತ್ತು ಏಳಿಗೆಗಾಗಿ ಪೂರ್ಣಾವಧಿ ನಿರ್ದೇಶಕರು ಅವಶ್ಯವಿರುವದನ್ನು ಮನಗಂಡ ಸಭೆಯು ಡಾ. ಬಿ.ಜಿ. ಕನಕೇಶ ಮೂರ್ತಿ, ನಿವೃತ್ತ್ ಪ್ರಾಚಾರ್ಯರು, ಶ್ರೀ. ಶಂಕರ ಆನಂದಸಿಂಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಪೇಟೆ ಇವರನ್ನು ವಿಶ್ವವಿದ್ಯಾಲಯದ ಪ್ರಸಾರಂಗಕ್ಕೆ ನೂತನ ಪ್ರಭಾರ ನಿರ್ದೇಶಕರನ್ನಾಗಿ ನೇಮಿಸಲು ಸಭೆ ಅನುಮೋದಿಸಿದೆ. ಸದರಿಯವರಿಗೆ ರೂ.35,000.00ಗಳ ಮಾಸಿಕ ವೇತನವನ್ನು ನಿಗದಿಪಡಿಸಿ ಸಂಚಿತ ವೇತನದಡಿಯಲ್ಲಿ ನೇಮಕಗೊಳಿಸಲು ಸಭೆ ಸರ್ವಾನುಮತದಿಂದ ಅಂಗೀಕರಿಸಿತು. ಜೊತೆಗೆ ಸದರಿಯವರನ್ನು ಕನ್ನಡ ಅಧ್ಯಯನ ವಿಭಾಗದ ಬೋಧನಾ ಕಾರ್ಯದಲ್ಲಿ ಉಪಯೋಗಿಸಿಕೊಳ್ಳಲು ಸಭೆ ಸೂಚಿಸಿದೆ.

### ➲ ಐಟಂ ನಂ. 02:

ವಿಷಯ: 2022–23ನೇ ಶೈಕ್ಷಣಿಕ ಸಾಲಿಗೆ ವಿಜಯನಗರ ಮಹಾವಿದ್ಯಾಲಯ, ಹೊಸಪೇಟೆ. ರಸಾಯನ ಶಾಸ್ತ್ರ ವಿಭಾಗವನ್ನು ಸಂಶೋಧನಾ ಕೇಂದ್ರವಾಗಿ ಗುರುತಿಸಲು ವಿಶ್ವವಿದ್ಯಾಲಯವು ರಚಿಸಿದ ತಜ್ಞರ ಸಮಿತಿಯ ವರದಿಯ ಪರಿಶೀಲನೆ ಹಾಗೂ ಅನುಮೋದನೆ ಕುರಿತು.

*****

2022–23ನೇ ಶೈಕ್ಷಣಿಕ ಸಾಲಿಗೆ ವಿಜಯನಗರ ಮಹಾವಿದ್ಯಾಲಯ, ಹೊಸಪೇಟೆಯ ರಸಾಯನ ಶಾಸ್ತ್ರ ವಿಭಾಗವನ್ನು ಸಂಶೋಧನಾ ಕೇಂದ್ರವಾಗಿ ಗುರುತಿಸಲು ಸಲ್ಲಿಸಿದ ಅರ್ಜಿಯ ಮೇರೆಗೆ ವಿಶ್ವವಿದ್ಯಾಲಯವು ತಜ್ಞರ ಸಮಿತಿಯನ್ನು ನೇಮಿಸಿರುತ್ತದೆ. ಸದರಿ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಈ ಕೆಳಕಂಡ ಷರತ್ತುಗಳೊಂದಿಗೆ ಶಿಫಾರಸ್ಸು ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ.

Recognitition of Research centre in Chemistry may be considered after ensuring the fulfilment of the following conditions:

1) Commitment from the college for budgetary provision of Rs 10 lakhs for providing research facilities.
2) Fulfilment of immediate basic instruments and spacious research lab with foaming chamber/exhaust, ventilation.
3) As there is only one eligible faculty arrangements etc should be made for additional faculties to take guide ship.

ತಜ್ಞರ ಸಮಿತಿಯ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

**ತೀರ್ಮಾನ**

2022–23ನೇ ಶೈಕ್ಷಣಿಕ ಸಾಲಿಗೆ ವಿಜಯನಗರ ಮಹಾವಿದ್ಯಾಲಯ, ಹೊಸಪೇಟೆಯ ರಸಾಯನಶಾಸ್ತ್ರ ವಿಭಾಗವನ್ನು ಸಂಶೋಧನಾ ಕೇಂದ್ರವಾಗಿ ಗುರುತಿಸಲು ಸಲ್ಲಿಸಿದ ಅರ್ಜಿಯ ಕುರಿತಾಗಿ ಸದರಿ ಸಮಿತಿಯ ಶಿಫಾರಸುಗಳನ್ನು ಗಮನಿಸಿದ ಸಭೆಯು, ಸದರಿ ವಿಷಯವಾಗಿ ಸಮಿತಿಯ ಷರತ್ತುಗಳನ್ವಯ ಮಹಾವಿದ್ಯಾಲಯದ ಸಂಶೋಧನಾ ರಸಾಯನಶಾಸ್ತ್ರ ಅಧ್ಯಯನ ವಿಭಾಗವನ್ನು ಸಂಶೋಧನಾ ಕೇಂದ್ರವಾಗಿ ಗುರುತಿಸಲು ಸಭೆಯು ಅನುಮೋದಿಸಿದೆ.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು:**

1. ಸಿಂಡಿಕೇಟ್ ಸಭೆಯ ಸರ್ವಸದಸ್ಯರು ವಿಶ್ವವಿದ್ಯಾಲಯದ ಆಡಳಿತ ಪ್ರಕ್ರಿಯೆಯಲ್ಲಿ ಕಡತ ಅನುಮೋದನೆ ಪ್ರಕ್ರಿಯೆಯಲ್ಲಿ ನಿಧಾನಗತಿಯನ್ನು ಗಮನಿಸಿದ ಸದಸ್ಯರು ಸದರಿ ವಿಷಯವಾಗಿ ಸುದೀರ್ಘವಾಗಿ ಚರ್ಚಿಸಿ ಸದರಿ ನಿಧಾನಗತಿಗೆ ವಿಶ್ವವಿದ್ಯಾಲಯಕ್ಕೆ ಪೂರ್ಣಾವಧಿ ಹಣಕಾಸು ಅಧಿಕಾರಿಗಳು ಇಲ್ಲದಿರುವುದನ್ನು ಮನಗಂಡ ಸಭೆಯು ಪೂರ್ಣಾವಧಿ ಹಣಕಾಸು ಅಧಿಕಾರಿಗಳ ನೇಮಕ ಸಂಬಂಧ ಸರ್ಕಾರಕ್ಕೆ ಸಮಸ್ಯೆಯನ್ನು ಹಂಚಿಕೊಂಡು ಪತ್ರ ಬರೆಯಲು ಸಭೆ ಸರ್ವ ಸದಸ್ಯರು ಸರ್ವಾನುಮತದಿಂದ ಒತ್ತಾಯಿಸಿದರು.

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ